

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 26
ಜೂನ್ 29, 2003 ಬೆಲೆ ರೂ. 3.00



ಅಮೆರಿಕದಲ್ಲಿ ಅಡ್ವಾಣಿ
ಭಾರತ ಬಾಲಂಗೋಚಿಯೇ?






ಅಯೋಧ್ಯಾ : ಹೊಸತಂತ್ರ !

ಕೇಬಲ್ ಸೆಟ್-ಬಾಕ್ಸ್ ಏಕೀ ಆತುರ?

ಫ್ರಾನ್ಸ್: ಪೆನ್ಶನ್ ಕಡಿತದ ವಿರುದ್ಧ ಮುಷ್ಕರಗಳ ಅಲೆ

'ಪಾಠ ನಾಟಕ ರೆಪರ್ಟರಿ' ಒಂದು ವಿಭಿನ್ನ ಪ್ರಯೋಗ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

32

ಕಳೆದ ಸಂಚಿಕೆಯಲ್ಲಿ ಕಾಂಗ್ರೆಸ್ ಸರ್ಕಾರ ಮೊದಲು ರಚಿಸಿ ಆನಂತರ ಮುಸ್ಲಿಂಲೀಗ್ ತರಲು ಯೋಜಿಸಿದ್ದ ಬ್ರಿಟಿಷರು, ಕೇವಲ ಬಿಬೀದಿಗಳಲ್ಲಿದ್ದ ಕೋಮುವಾದ ಸರ್ಕಾರದೊಳಗೆ ನುಸುಳಿದ್ದು, ಕಮ್ಯುನಿಸ್ಟ್ ಕಛೇರಿಗಳ ಮೇಲೆ ದಾಳಿ ಮಾಡಿದ ಪೊಲೀಸರು, ಕೊಲೆ-ಸುಲಿಗೆಗಳ ರುದ್ರನರ್ತನ, ಇಡೀ ದಿನ ಕಣ್ಣೀರು ಸುರಿಸಿದ ಭಾರತೀಯ ಸೈನಿಕರು, ಗೆರಿಲ್ಲಾ ಹೋರಾಟ ನಡೆಸುವಂತೆ ಬೋಧಿಸಿದ ಜಯಪ್ರಕಾಶ್ ನಾರಾಯಣ್ ಮತ್ತು ಸಂಘಟನೆಯೊಳಗೆ ಸೇರಿ ನಿರ್ಣಾಯಕ ಘಟ್ಟದಲ್ಲಿ ಕಚ್ಚಿದ ವಿಷಜಂತುವಿನ ಬಗ್ಗೆ ಓದಿರುವಿರಿ. ಮುಂದೆ....



ಕನ್ನಡಕ್ಕೆ: ವಿಶ್ವ ಕುಂದಾಪುರ

ನೆಹರೂಗೆ ಅಪಾಯ !?

ಒಂದು ತಿಂಗಳೊಳಗೆ ನಾನು ಭೂಗತನಾಗಬೇಕು ಹಾಗೂ ಹೊರಗಡೆ ಭೂಗತ ಕೇಂದ್ರ ಕಚೇರಿಯನ್ನು ಸ್ಥಾಪಿಸಬೇಕು ಎಂದು ಕೊಲ್ಕೊತ್ತಾದ ಈ ಸಭೆ ನಿರ್ಧರಿಸಿತು. ಹಾಗೂ ನಾನು ರಾಜಕೀಯ ಪಕ್ಷಗಳನ್ನು ಸಂಪರ್ಕಿಸಬೇಕೆಂದು ನಿರ್ಣಯಿಸಿತು. ರಾಜಕೀಯ ಪಕ್ಷಗಳಿಂದ ಯಾವುದೇ ಬೆಂಬಲ ದೊರೆತರೆ ಬಂಡಾಯವನ್ನು ಆರಂಭಿಸಬೇಕು. ನಾನು ಭೂಗತನಾಗಿರುವುದನ್ನು ರಹಸ್ಯವಾಗಿಡುವ ಅಗತ್ಯವಿಲ್ಲವೆಂದು ಕ್ರಿಯಾಮಂಡಳಿ ಸೂಚಿಸಿತು.

ಒಬ್ಬ ಜವಾಬ್ದಾರಿಯುತ ಅಧಿಕಾರಿಯ ನೇತೃತ್ವದಲ್ಲಿ ಭೂಗತ ಕೇಂದ್ರ ಕಛೇರಿ ಸ್ಥಾಪಿಸುವುದರಿಂದ ನಮ್ಮ ಯೋಜನೆ ಬಗ್ಗೆ ನಾವೆಷ್ಟು ಗಂಭೀರವಾಗಿದ್ದೇವೆಂಬ ವಿಚಾರದಲ್ಲಿ ರಾಜಕೀಯ ಪಕ್ಷಗಳಿಗೆ ವಿಶ್ವಾಸ ಮೂಡುತ್ತದೆ. ಇದರಿಂದ ಅವರೊಂದಿಗೆ ದಿನಂಪ್ರತಿ ಸಂಪರ್ಕ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಹೊರಗಡೆಯಿಂದಾದರೆ ಬಹುತೇಕ ಅದು ಕಷ್ಟ.

ಆಳವರಿಯದ ಬಾವಿಗೆ ಹಾರಿದಂತೆ

ಅಂದು ರಾತ್ರಿ ನನಗೆ ಸರಿಯಾಗಿ ನಿದ್ದೆ ಬರಲಿಲ್ಲ. ನನಗೆ ದೊರಕಿದ್ದು ದೊಡ್ಡ ಗೌರವವೇನೋ ಹೌದು. ಆದರೆ ಅಪಾಯಕಾರಿ ಕಾರ್ಯಾಚರಣೆ ನನ್ನ ಮುಂದಿತ್ತು.

ಭೂಗತ ಜೀವನದ ಅನುಭವವಿಲ್ಲದ ನಾನು, ಆಳ ಅಗಲ ಗೊತ್ತಿಲ್ಲದ ಬಾವಿಗೆ ಹಾರಿದ ಸ್ಥಿತಿಯಲ್ಲಿದ್ದೆ. ಬ್ರಿಟೀಷರು ತಮ್ಮ ಪೂರ್ಣ ಬಲದೊಂದಿಗೆ ನನ್ನನ್ನು ಬೇಟೆಯಾಡಿ ನನ್ನ ಬಗ್ಗೆ ಅಪಪ್ರಚಾರ ಮಾಡಲಿದ್ದರು. ಅಧಿಕಾರಿಯೊಬ್ಬ ಸೇನೆಯನ್ನು ತೊರೆಯುವುದು ಮರಣದಂಡನೆಗೆ ಅರ್ಹವಾದ ಅಪರಾಧ. ಯೋಜನೆ ರಹಸ್ಯವಾಗಿದ್ದರಿಂದ ನನ್ನ ಬಾಯಿ ಕಟ್ಟಿತ್ತು. ಪಡೆಗಳಲ್ಲಿನ ಸಾವಿರಾರು ಮಿತ್ರರು ಇದನ್ನು ಅರ್ಥ ಮಾಡಿಕೊಂಡಾರೆ?

ಬಂಡಾಯ ಸೋತು ಹೋಗಬಹುದು. ಹಿಂದಿನ ದಾರಿಯಲ್ಲಿ ಹೊರಳಿ ನೋಡಿದಾಗ ಯಾವುದೋ ಒಂದು ಅಂಶ ನನ್ನನ್ನು ಶಾಶ್ವತವಾಗಿ ಮೌನದ ಮಡುವಿಗೆ ತಳ್ಳಬಹುದು, ನಾನು ಸೇನೆಯನ್ನು ಯಾಕೆ ತೊರೆದೆ ಎಂದು ಹೇಳಲು ಸಾಧ್ಯವಾಗದಿರಬಹುದು- ಮಿಲಿಟರಿ ಶಿಸ್ತಿನಲ್ಲಿ ಹೇಳುವುದಾದರೆ ಸೇನೆಯನ್ನು ತ್ಯಜಿಸುವುದು ಒಂದು ಅಪ್ರಾಮಾಣಿಕ ಕೃತ್ಯ.

ಬಹುಶಃ ಬಂಡಾಯ ಎಂದೆಂದಿಗೂ ನಡೆಯದಿರಬಹುದು. ಬಂಡಾಯ ನಡೆದರೆ ಬ್ರಿಟೀಷರು ಇನ್ನೂ ಇಪ್ಪತ್ತು ವರ್ಷ ಕಾಲ ತಮ್ಮ ಆಳ್ವಿಕೆಯನ್ನು ಮುಂದುವರಿಸಲು ನೆವ ಸಿಕ್ಕಿದಂತಾಗುತ್ತದೆ. ಮನೆಯಿಂದ, ಆತ್ಮೀಯರಿಂದ ಜೀವನಪರ್ಯಂತ ದೇಶಾಂತರವಾಸ ನನಗೆ ಸುಪರಿಚಿತ ಹಾಗೂ ಜೀವನವಿಡೀ ನನಗೆ ಅಪ್ಯಾಯಮಾನವಾದುದಾಗಿತ್ತು.

ಕಣ್ಣುರೆಪ್ಪೆಗಳು ಮುಚ್ಚಿದವು, ತೆರೆದವು..... ಆತಂಕದ ನಿದ್ದೆಯ ಮಂಪರಿನಲ್ಲಿ ಭಯ ಹಾಗೂ ಆಶಾವಾದದ ನೆರಳುಗಳು ತೇಲಾಡಿದವು. "ನಾನು ಹೋಗಬೇಕು. ನನ್ನ ಮಾತೃಭೂಮಿಯ ಇತಿಹಾಸದ ಈ ನಿರ್ಣಾಯಕ ಕಾಲಘಟ್ಟದಲ್ಲಿ ನಾನು ಆಕೆಯ ಕೈಬಿಡಬಾರದು".

"ನನ್ನ ತಾಯಿ ನನ್ನನ್ನು ಅರ್ಥ ಮಾಡಿಕೊಂಡಾಳೇ? ನಿಷ್ಠಾವಂತ ಬ್ರಿಟೀಷ್ ಸಂಪ್ರದಾಯಗಳಲ್ಲಿ ಆಳವಾಗಿ ನಂಬಿಕೆಯಿದ್ದ ವಯೋವೃದ್ಧ ತಂದೆ ಅರ್ಥ ಮಾಡಿಕೊಂಡಾರೆ? ಇದನ್ನೆಲ್ಲ ಕೇರ್ ಮಾಡಬಾರದು" ನನ್ನ ಯೋಚನಾಲಹರಿ ಹೀಗೆ ಸಾಗಿತು.

ಮರುದಿನ ಬೆಳಿಗ್ಗೆ..... ಭೂಗತನಾಗಲು ಸಿದ್ಧತೆಗೆ ತೊಡಗಿದೆ.

ಕೆಲವು ದಿನಗಳ ನಂತರ ಇನ್ನೊಂದು ಹೊಸ ವಿದ್ಯಮಾನ ಉದ್ಭವವಾಯಿತು. ನನ್ನ ಘಟಕದ ಲೆಫ್ಟಿನೆಂಟ್ ಲೌಟೆನ್ ಶ್ರೀಮತಿ ಡೇ ಅವರ ಜತೆ ಕಾಣಿಸಿಕೊಳ್ಳಲಾರಂಭಿಸಿದರು. ಆತನ ಉದ್ದೇಶಗಳೇನೆಂಬುದು ನಾನು ಭೂಗತನಾದ ಮೇಲಷ್ಟೆ ನನಗೆ ಗೊತ್ತಾಯಿತು.

ಅಕ್ಟೋಬರ್ ಮೊದಲ ವಾರದಲ್ಲಿ ನನ್ನ ಘಟಕವನ್ನು ಆಸ್ಸಾಂನ ಮೋಹನ್‌ಬಾರಿಗೆ ತೆಗೆದುಕೊಂಡು ಹೋದೆ. ಆಸ್ಸಾಂ ರೈಫಲ್ಸ್‌ಗೆ ಸರಬರಾಜಿಗಾಗಿ ಈ ಕಾರ್ಯ ಎಂದು ನನಗೆ ತಿಳಿಸಲಾಯಿತು. ಆದರೆ ವಾಸ್ತವವಾಗಿ ಇದು ಈಶಾನ್ಯಗಡಿ ಪ್ರಾಂತ್ಯ (N.E.F.A) ಚಿನ್ ಮತ್ತು ಕಚಿನ್‌ಗಳ ಬುಡಕಟ್ಟು ಜನರಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವ ಕಾರ್ಯಾಚರಣೆಯಾಗಿತ್ತು. ನನಗದು ಗೊತ್ತಿತ್ತು ಹಾಗೂ ಬಹಿರಂಗಪಡಿಸಲು ಬಯಸಿದ್ದೆ.

ಈಶಾನ್ಯ ಪ್ರಾಂತ್ಯ ಪ್ರದೇಶದ ಮೇಲೆ ಸಾಗಲಿಕ್ಕಾಗಿ ನೆಹರೂ ಆ ಮಾರ್ಗವಾಗಿ ಬರುತ್ತಾರೆ ಎಂದು ಅಕ್ಟೋಬರ್ ಕೊನೆಯ ಹೊತ್ತಿಗೆ ಇಂಗ್ಲಸ್ ನನಗೆ ತಿಳಿಸಿದಾಗ ನನ್ನ ಆಸಕ್ತಿ ಹೆಚ್ಚಾಯಿತು.

"ವಾಯುವ್ಯ ಪ್ರಾಂತ್ಯದಲ್ಲಿ ಅವರು (ನೆಹರೂ) ಅನುಭವಿಸಿದ್ದನ್ನು ಇಲ್ಲಿಯೂ ಅನುಭವಿಸುವುದೆಂದು ನಾನು ಆಶಿಸುತ್ತೇನೆ" ಎಂದು ಇಂಗ್ಲಸ್ ವ್ಯಂಗ್ಯವಾಗಿ ಹೇಳಿದರು. (ವಾಯುವ್ಯ ಪ್ರಾಂತ್ಯಕ್ಕೆ ನೆಹರೂ ಭೇಟಿ ಕೊಟ್ಟಾಗ ಅವರತ್ತ ಜನರು ಕಲ್ಲು ತೂರಿದ್ದರು ಹಾಗೂ ಗುಂಡು ಹಾರಿಸಿದ್ದರು. ಈ ಪ್ರಕರಣವನ್ನು ನೆನಪಿಸಿ ಇಂಗ್ಲಸ್ ವ್ಯಂಗ್ಯತೋರಿದ್ದು)

ಇಂಗ್ಲಸ್ ನನ್ನನ್ನು ಉದ್ದೇಶಿಸಿ "ಕಾಂಗ್ರೆಸ್ ಬಗ್ಗೆ ನಿಮಗೆ ತೃಪ್ತಿಯಿಲ್ಲ, ಅಲ್ಲವೇ ಜೈಪಾಲ್" ಎಂದು ಹೇಳಿದರು. "ನೀವು ಭೂಮಾಲಿಕರು ನಮ್ಮೆಲ್ಲ ಜಮೀನನ್ನು ಕಳೆದುಕೊಳ್ಳುವಿರೆಂದು ನನಗೆ ಗೊತ್ತು. ನಾನೇನೆನಾದರೂ ನಿಮ್ಮ ಸ್ಥಾನದಲ್ಲಿ ಇದ್ದಿದ್ದರೆ ಈ ಜನರು ನಿಮ್ಮ ದೇಶದಲ್ಲಿ ಬೀಡುಬಿಡುವಂತೆ ಬಯಸಲು ಕ್ರಮ ಕೈಗೊಳ್ಳುತ್ತಿದ್ದೆ".

ನೆಹರೂಗೆ ಅಪಾಯದ ಸುಳಿವು

ಆತನ ಮಾತಿನ ಗೂಢಾರ್ಥ ನನಗೆ ಹೊಳೆಯಿತು. ಆರ್.ಎ.ಎಫ್ ಅಧಿಕಾರಿಗಳು ನೆಹರೂ ಭೇಟಿಯ ಬಗ್ಗೆ ಮಾತಾಡಿಕೊಳ್ಳುತ್ತಿರುವುದನ್ನು ತಾನು ಕೇಳಿಸಿಕೊಂಡಿದ್ದಾಗಿ ಹೇಳಿದ ರಾಯ್, ನೆಹರೂರ ಭದ್ರತೆಯ ಕುರಿತು ಭೀತಿ ವ್ಯಕ್ತಪಡಿಸಿದರು.

ಸಂಜೆ ಆರ್‌ಎಎಫ್ ಅಧಿಕಾರಿಗಳ ತಂಡವೊಂದರ ಜೊತೆ ನಾನು ಕುಡಿಯುತ್ತಾ ಕುಳಿತಿದ್ದೆ. ಇಂಫಾಲ್‌ನ ದಿನಗಳಿಂದಲೂ ನನಗೆ ಗೊತ್ತಿದ್ದ ಕೆನಡಾದ ತರುಣ ಅಧಿಕಾರಿಯೊಬ್ಬ ನನ್ನನ್ನು ಒಂದು ಬದಿಗೆ ಕರೆದುಕೊಂಡು ಹೋದ. ಆತ ಸ್ವಲ್ಪ ಅಮಲೇರಿದ್ದ. "ಜೈ, ನನಗೇನೋ ಅನುಮಾನವಾಗುತ್ತಿದೆ. ನೆಹರೂ ಈ ಭಾಗದ ಪ್ರವಾಸವನ್ನು ರದ್ದು ಮಾಡುವುದು ಒಳಿತು" ಎಂದಾತ ಹೇಳಿದ.

(ಮುಂದುವರಿಯುವುದು)

ಪ್ರಸಾರ ವಿಸ್ತರಣೆಗೆ ವ್ಯಾಪಕ ಸಿದ್ಧತೆ

'ಐಕ್ಯರಂಗ ಬಳಗ' ತುಂಬಾ 'ಬ್ಯುಸಿ'.ಈಗ ಪ್ರಸಾರ ಮಾಸವಲ್ಲವೇ? ಪತ್ರಿಕೆಯ ಪ್ರಸಾರ ಸಂಖ್ಯೆ ಇನ್ನೂ ಒಂದು ಸಾವಿರವಾದರೂ ದಾಟಲೇಬೇಕು. ಓದುಗರ ಸಂಖ್ಯೆ ಹೆಚ್ಚಿಸಬೇಕು. ಪ್ರಜಾಸತ್ತಾತ್ಮಕ ಜನ ಚಳುವಳಿಯ ವ್ಯಾಪ್ತಿಯಲ್ಲಿರುವುದನ್ನು, ಅದರಾಚೆಯ ಪ್ರಜ್ಞಾವಂತರನ್ನು, ದುಡಿವ ಜನಸಮೂಹವನ್ನು ತಲುಪಬೇಕು. ಈ ಹಂಬಲದೊಂದಿಗೆ ವಿವಿಧ ಸಾಮೂಹಿಕ ಸಂಘಟನೆಗಳು, ಪ್ರಗತಿಪರ ಚಿಂತಕರು, ಹಿತೈಷಿಗಳ ಬೆಂಬಲದೊಂದಿಗೆ ರಾಜ್ಯದಾದ್ಯಂತ ಪ್ರಸಾರ ಮಾಸ ಕರೆ ಯಶಸ್ವಿಗೆ ಸಿದ್ಧರಾಗುತ್ತಿದ್ದಾರೆ. ಐಕ್ಯರಂಗದಂತಹ ಪತ್ರಿಕೆ ಬೆಳೆಯುವುದಾದರೆ ಪ್ರಜ್ಞೆಯೂ ಬೆಳೆದಂತೆ.

ಈಚೆಗೆ ಗುಲಬರ್ಗಾದ ಕಾಮ್ರೇಡ್ ಹಸನ್‌ಖಾನ್ ಸ್ಮಾರಕ ಭವನದಲ್ಲಿ ಪ್ರಸಾರ ಮಾಸದ ರೂಪು-ರೇಶೆಯ ಪೂರ್ವ ತಯಾರಿ ಸಮಾಲೋಚನಾ ಸಭೆಗೆ ಸೇರಿದ್ದೆವು. ಉತ್ಸಾಹದ ಪ್ರತಿಕ್ರಿಯೆ ಕಂಡುಬಂತು. ಹಾಗೆ ಮಾತನಾಡುತ್ತ ಕುಳಿತಿದ್ದಾಗ ಕಾರ್ಯನಿಮಿತ್ತ ಇಬ್ಬರು ಹಿತೈಷಿಗಳು ಆ ಕಡೆ ಬಂದಿದ್ದರು. ಮಾತುಕತೆ ಆದ ಬಳಿಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಐಕ್ಯರಂಗಕ್ಕೆ ಚಂದಾ ಆಗಲು ಕೋರಿದರು. ವಿವರಗಳನ್ನು ಪಡೆದ ಹಿತೈಷಿಗಳಿಬ್ಬರೂ ತಕ್ಷಣದಲ್ಲೇ ಹಣ ಪಾವತಿಸಿ ಆಜೀವ ಚಂದಾದಾರರಾದರು. ಇಂತಹ ಪ್ರಸಾರ ಮಾಸದ ಪ್ರಕಟಣೆ ಹೊರಬಿದ್ದದ್ದೇ ತಡ ಗುಲ್ಬರ್ಗಾದ ಎಲ್ಲಾ ಹಿತೈಷಿಗಳು 22 ರಂದು ಕನ್ನಡ ಸಂಸತಿ ಭವನದಲ್ಲಿ ಒಂದು ವಿಶಿಷ್ಟ ಸಭೆಗೆ ನಿರ್ಧರಿಸಿಯೇ ಬಿಟ್ಟರು. 'ಕವಲು ದಾರಿಯಲ್ಲಿ ಮಾಧ್ಯಮ' ವಿಷಯದ ಮೇಲೆ ಸಂವಾದ, ಅಲ್ಲೇ ಚಂದಾ ನೊಂದಣಿ ಉದ್ಘಾಟನೆ

ದಕ್ಷಿಣ ಕನ್ನಡದಲ್ಲಿ ಈಗ ಬೆನ್ನು ಬಿಡದ ಧೋಧೋ ಎಂದು ಸುರಿವ ಮಳೆ. ಆದರೇನಂತೆ. ಪತ್ರಿಕೆಯ ಪ್ರಸಾರ ಹೆಚ್ಚಲೇಬೇಕು. ಅದಕ್ಕಾಗಿಯೇ ವಿಶೇಷ ಸಭೆ 21 ರಂದು ನಡೆಯಿತು. ಅತ್ಯಧಿಕ ಸಂಖ್ಯೆಯಲ್ಲಿರುವ ಶಿಕ್ಷಕರನ್ನು, ಪ್ರಜಾಸತ್ತಾತ್ಮಕ ಚಳುವಳಿಯ ಬೆನ್ನೆಲುಬಾದ ಅಸಂಘಟಿತ, ಕಾರ್ಮಿಕ ವರ್ಗವನ್ನು, ತಲುಪುವ ದಿಶೆಯಲ್ಲಿ ದೃಢಹೆಜ್ಜೆ. ಐಕ್ಯರಂಗ ಮೊದಲ ವರುಷಗಳಲ್ಲಿ ಮಂಗಳೂರಿನಿಂದಲೇ ಪ್ರಕಟ. ಪ್ರಕಟಣೆಯ ಪತ್ರಿಕೆಯ ಟೈಟಲ್ ಪಡೆಯುವುದೂ ಒಳಗೊಂಡು ಜವಾಬ್ದಾರಿ ನಿರ್ವಹಿಸಿದವರಲ್ಲಿ ಕೆ.ಆರ್.ಶ್ರೀಯಾನ್‌ರಂಥವರು ಪ್ರಮುಖರು. ಈ ಸಂಗತಿ ಗೆಳೆಯರಲ್ಲಿ ಉತ್ಸಾಹ ಮೂಡಿಸಿದೆ. ಪ್ರಸಾರ ಹೆಚ್ಚಿಸಲು ಸಾಧ್ಯವಿರುವ ಎಲ್ಲಾ ಕ್ರಮ ವಹಿಸುತ್ತಿದ್ದಾರೆ.

ಬೆಂಗಳೂರಿನಲ್ಲಂತೂ ನಗರ ಕೇಂದ್ರ ಮಾತ್ರವಲ್ಲ, ಪ್ರದೇಶಗಳಲ್ಲಿಯೂ ಸಿದ್ಧತಾ ಸಮಾವೇಶಗಳು, ಒಂದೊಂದು ವಿಭಿನ್ನ ವಿಷಯಗಳ ಮೇಲೆ ಸಂವಾದಗೋಷ್ಠಿ, 23 ಕ್ಕೆ ಕೆನ್ ಕಲಾಶಾಲೆಯಲ್ಲೊಂದು ವಿಶಿಷ್ಟ ಸಭೆ. ಮೊನ್ನೆ ನೋಡಿ ವಿಧಾನಸೌಧದೆದುರು ನೌಕರರ ಹೋರಾಟ ನಡೆದಿರುವಾಗಲೇ ಅಲ್ಲಿನ ಕೆಲವು ಹಿತೈಷಿಗಳು ಚಂದಾ ಪಡೆಯುವಲ್ಲಿ ಮಗ್ನರಾಗಿದ್ದರು. ಹಾಗೇ ತುಮಕೂರಿನಲ್ಲಿಯೂ ಸಭೆ 24 ರಂದು ಯೋಜಿಸಲಾಗಿದೆ. ಈ ಯತ್ನಗಳು ಅನೇಕ. ಎಲ್ಲಾ ಕಡೆಗಳಲ್ಲಿ ವ್ಯಾಪಕ ಸಿದ್ಧತೆ. ನೀವೂ ಕೈ ಜೋಡಿಸಿ ಯಶಸ್ವಿಗೊಳಿಸಿ.

- ಸಂಪಾದಕ ಮಂಡಳಿ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಜೂನ್ 23
ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನೂತನ ಕಛೇರಿ - ಉದ್ಘಾಟನೆ
ಸಮಯ: ಸಂಜೆ 5.00 ಕ್ಕೆ
ಸಂಪಂಗಿರಾಮ ನಗರ ಅಂಚೆಕಚೇರಿ ಬಳಿ

ಜೂನ್ 23
ಐಕ್ಯರಂಗ ವಾರಪತ್ರಿಕೆ ಪಾಕ್ಷಿಕ ಆಚರಣೆ ಅಂಗವಾಗಿ ವಿಚಾರ ಸಂಕಿರಣ - ಸಂಜೆ 5.30 ಕ್ಕೆ. ಕೆನ್ ಕಲಾ ಶಾಲೆ, ಶೇಷಾದ್ರಿಪುರಂ, ಬೆಂಗಳೂರು.
ಉದ್ಘಾಟನೆ : ಎಲ್.ಹನುಮಂತಯ್ಯ, ಎಂ.ಎಲ್.ಸಿ., ಬಂಡಾಯ ಸಾಹಿತಿಗಳು

ಜೂನ್ 27
ದುಡಿಯುವ ಮಹಿಳೆಯರ ಮುಂದಿರುವ ಸವಾಲುಗಳು - ವಿಚಾರಸಂಕಿರಣ
ಪ್ರಧಾನ ಅಂಚೆ ಕಚೇರಿ(ಜಿಪಿಓ) ರಾಜಭವನ ರಸ್ತೆ, ಬೆಂಗಳೂರು-1
ಮಧ್ಯಾಹ್ನ 1.30ಕ್ಕೆ
ಉದ್ಘಾಟನೆ : ಡಾ. ಕೆ.ಹೇಮಲತಾ, ಸಂಚಾಲಕರು, ದು.ಮ.ಸ.ಸ.

ಜೂನ್ 28-29
ಬೆಂಗಳೂರಿನಲ್ಲಿ ಸಿಐಟಿಯು ಅಖಿಲ ಭಾರತ ಪದಾಧಿಕಾರಿಗಳ ಸಭೆ.
ಜೂನ್ 28 ರ ಸಂಜೆ 3.30 ಕ್ಕೆ ಪುರಭವನದಲ್ಲಿ ಸಿಐಟಿಯು ಕಾರ್ಯಕರ್ತರ ಸಭೆ.
ಇ. ಬಾಲಾನಂದನ್, ಎಂ.ಕೆ.ಪಂಧೆ ಮತ್ತಿತರರು ಮಾತನಾಡಲಿದ್ದಾರೆ.

ಜುಲೈ 1, 2003
ಕಾಂ.ಸೂರಿ ನೆನಪಿನ ಕಾರ್ಯಕ್ರಮ
ಎನ್‌ಜಿಓ ಹಾಲ್ - ಬೆಂಗಳೂರು
ಸಂಜೆ 5.30 ಕ್ಕೆ
ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರು ಭಾಗವಹಿಸಲಿದ್ದಾರೆ.

ಆಗಸ್ಟ್ 16 ರಿಂದ 31 ರವರೆಗೆ ಪ್ರಚಾರಾಂದೋಲನ

ಇರಾಕಿಗೆ ಸೈನ್ಯ ಕಳಿಸುವುದು ಬೇಡ

ಅಮೆರಿಕ ಅತಿಕ್ರಮಿಸಿಕೊಂಡಿರುವ ಇರಾಕಿಗೆ ಭಾರತದ ಸೈನ್ಯ ಕಳಿಸುವುದನ್ನು ಕೇಂದ್ರ ಸಮಿತಿ ಬಲವಾಗಿ ವಿರೋಧಿಸಿದೆ. ಅಮೆರಿಕನ್ ಸರ್ಕಾರ ಭಾರತ ಸರ್ಕಾರಕ್ಕೆ ಇರಾಕಿನಲ್ಲಿ ಪೊಲೀಸು ಕರ್ತವ್ಯಗಳಿಗೆ ಅಮೆರಿಕನ್ ಸೈನ್ಯದ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಲು ಭಾರತೀಯ ಸೈನ್ಯದ ತುಕಡಿಗಳನ್ನು ಕಳಿಸಲು ಕೇಳಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿ ಅಮೆರಿಕ ಇರಾಕಿನಲ್ಲಿ ಅತಿಕ್ರಮಣ ಮಾಡಿರುವ ಅಧಿಕಾರಿ ಎಂದು ಗುರುತಿಸಿದೆ. ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ ಕಳಿಸಲು ನಿರ್ಧರಿಸಿಲ್ಲ. ಆದ್ದರಿಂದ ಭಾರತೀಯ ಪಡೆಗಳನ್ನು ಕಳಿಸಿದರೆ ಅದು ಅಮೆರಿಕನ್ ಮಿಲಿಟರಿ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡಬೇಕಾಗುವುದು. ಅಲ್ಲದೆ ಅಮೆರಿಕದ ಅತಿಕ್ರಮಣದ ವಿರುದ್ಧ ಇರಾಕಿನಲ್ಲಿ ಬೆಳೆಯುತ್ತಿರುವ ಪ್ರತಿರೋಧ ದಮನ ಮಾಡಲು ಪಡೆಗಳನ್ನು ಬಳಸಲಾಗುವುದು.

ಭಾರತ ಪಡೆಗಳನ್ನು ಕಳಿಸುವುದರ ಬಗ್ಗೆ ಪರಿಶೀಲನೆ ಮಾಡುವುದೇ, ಈ ಸರ್ಕಾರದ ಠೋಸುಂಬೆತನವನ್ನು ಪ್ರದರ್ಶಿಸಿದೆ. ಪಾರ್ಲಿಮೆಂಟು ಇರಾಕಿನ ಅತಿಕ್ರಮಣ ವಿರೋಧಿಸಿ ನಿರ್ಣಯ ಮಾಡಿರುವಾಗ ಅದನ್ನು ಸರಕಾರ ಉಲ್ಲಂಘಿಸಲಾಗದು. ಅಮೆರಿಕದ ಏಕಚಕ್ರಾಧಿಪತ್ಯದ ನೀತಿಗೆ ಕಡಿವಾಣ ಹಾಕುವ ವಿದೇಶಿ ನೀತಿ ಅನುಸರಿಸುವ ಅಗತ್ಯ ಇದೆ ಎಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಪಾಕಿಸ್ತಾನದ ಜತೆ ಮಾತುಕತೆ ಸ್ವಾಗತಾರ್ಹ

ಭಾರತ-ಪಾಕಿಸ್ತಾನಗಳ ನಡುವೆ ಮಾತುಕತೆ ಪುನರಾರಂಭವಾಗಿರುವುದನ್ನು ಕೇಂದ್ರ ಸಮಿತಿ ಸ್ವಾಗತಿಸಿದೆ. ಹೈಕಮಿಶನರುಗಳ ನೇಮಕ ಮತ್ತು ಪ್ರಯಾಣ ವ್ಯವಸ್ಥೆ ಪುನಃ ಸ್ಥಾಪನೆ ಈ ದಿಕ್ಕಿನಲ್ಲಿ ಸ್ವಾಗತಾರ್ಹ ಕ್ರಮಗಳು. ಎರಡೂ ಕಡೆ ಆಕ್ರಾಮಕ ಶಕ್ತಿಗಳು ಘರ್ಷಣೆ ಒಡ್ಡುತ್ತಿದ್ದರೂ ಬಹುಸಂಖ್ಯಾತ ಜನ ಶಾಂತಿ ಮತ್ತು ಸಾಮಾನ್ಯ ಸಂಬಂಧ ಬಯಸುತ್ತಾರೆ. ಮಾತುಕತೆ ಮುಂದುವರೆಸುವ ಪರಿಸರ ನಿರ್ಮಾಣ ಮಾಡುವತ್ತ ಗಮನ ಹರಿಸಬೇಕು ಎಂದು ಕೇಂದ್ರ ಸಮಿತಿ ಆಶಿಸಿದೆ.

ಕೋಮುವಾದಿ ಅಜೆಂಡಾ ಖಂಡನೆ

ಅಯೋಧ್ಯೆಯ ವಿವಾದದ ಬಗ್ಗೆ ನಡೆಯುತ್ತಿರುವ ನ್ಯಾಯಾಂಗ ಪ್ರಕ್ರಿಯೆಗೆ ಅಡ್ಡಗಾಲು ಹಾಕುವ ಪ್ರಯತ್ನ, ಲಿಬರ್‌ಹಾನ್ ಕಮಿಷನ್ ಮುಂದೆ ಬಾಬ್ರಿ ಮಸೀದಿ ಇದ್ದಲ್ಲಿ ಹಿಂದೆ ದೇವಸ್ಥಾನ ಇತ್ತು ಎನ್ನುವ ಹೇಳಿಕೆ, ತ್ರಿಶೂಲ ಹಂಚಿಕೆಯ ವಿ.ಹೆಚ್.ಪಿ. ಕಾರ್ಯಕ್ರಮವನ್ನು ಖಂಡಿಸದಿರುವುದು - ಮುಂತಾದ ಕೋಮುವಾದಿ ಅಜೆಂಡಾ ಮುಂದುವರೆಸುವ ಬಿಜೆಪಿ ಸರ್ಕಾರದ ನೀತಿಯನ್ನು ಕೇಂದ್ರ ಸಮಿತಿ ಕಟುವಾಗಿ ಖಂಡಿಸಿದೆ.

ತ್ರಿಶೂಲ ಹಂಚಿಕೆ ಮೇಲೆ ನಿಷೇಧ, ತೊಗಾಡಿಯಾ ಬಂಧನದ ರಾಜಸ್ತಾನದ ಕ್ರಮಗಳನ್ನು ಸ್ವಾಗತಿಸಿದ ಕೇಂದ್ರ ಸಮಿತಿ ಇಂತಹ ಕ್ರಮಗಳನ್ನು, ನೀತಿಗಳನ್ನು ಪಾಲಿಸಲು ನಿರಾಕರಿಸಿರುವ ಕೇರಳದ ಮುಖ್ಯಮಂತ್ರಿ ಎ.ಕೆ.ಆಂಟೋನಿಯವರನ್ನು ಖಂಡಿಸಿದೆ.

ಇತ್ತೀಚಿನ ಕೇಂದ್ರ ಸರ್ಕಾರದ ಮಂತ್ರಿಮಂಡಲ ವಿಸ್ತರಣೆ, ಸ್ವಾತಂತ್ರ್ಯಾನಂತರ ಅತ್ಯಂತ ದೊಡ್ಡದು ಮಾತ್ರವಲ್ಲ, ಬಿಜೆಪಿಯೇತರ ಪಕ್ಷಗಳನ್ನು ಕಡೆಗಣಿಸಿದ್ದನ್ನು ಖಂಡಿಸಿದೆ. ಬಾಬ್ರಿ ಮಸೀದಿ ನಾಶದಲ್ಲಿ ಚಾರ್ಜ್‌ಶೀಟ್‌ಗೆ ಗುರಿಯಾಗಿರುವ ಮಂತ್ರಿಗಳನ್ನು ಮಂತ್ರಿಮಂಡಲದಿಂದ ಕೈಬಿಡಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಆರ್ಥಿಕ ಪರಿಸ್ಥಿತಿ

ಪಾರ್ಲಿಮೆಂಟಿನಲ್ಲಿ ಬಹುಸಂಖ್ಯಾತರು ಹೆಚ್‌ಪಿಸಿಎಲ್, ಬಿಪಿಸಿಎಲ್ ನ ಖಾಸಗೀಕರಣಕ್ಕೆ ವಿರೋಧವಾಗಿದ್ದರೂ ಆ ನೀತಿಯನ್ನು ಸರ್ಕಾರ ಮುಂದುವರೆಸುತ್ತಿರುವುದು, ರಕ್ಷಣಾ ಉತ್ಪಾದನೆಯನ್ನು ವಿದೇಶಿ ಭಾರತೀಯ ಖಾಸಗಿ ಬಂಡವಾಳಕ್ಕೆ ತೆರೆದಿರುವುದು - ವಿದ್ಯುತ್ ಉತ್ಪಾದನೆ-ವಿತರಣೆಯನ್ನು ಖಾಸಗೀಕರಿಸುವ ಮೂಲಕ ಶ್ರೀಸಾಮಾನ್ಯನ ಮೇಲೆ ವಿದ್ಯುತ್ ಬಿಲ್‌ನ ಹೊರೆ ಹೆಚ್ಚಿಸುವ ನೀತಿ ಹೊಂದಿರುವ ವಿದ್ಯುತ್ ಬಿಲ್ಲನ್ನು ಪಾರ್ಲಿಮೆಂಟಿನಲ್ಲಿ ಪಾಸು ಮಾಡಿಸಿರುವುದು - ಮುಂತಾದ ದಿವಾಳಿಕೋರ ಆರ್ಥಿಕ ನೀತಿಯ ಮುಂದುವರಿಕೆಯನ್ನು ಕೇಂದ್ರ ಸಮಿತಿ ಖಂಡಿಸಿದೆ.

ತೀವ್ರ ಬರ ಪರಿಸ್ಥಿತಿ

ಕಳೆದ ಆರು ದಶಕಗಳಲ್ಲೇ ಪಾತಳಕ್ಕೆ ಮುಟ್ಟಿರುವ ತಲಾ ಆಹಾರದ ಲಭ್ಯತೆ,

ಜೂನ್ 7 ರಿಂದ 9 ರವರೆಗೆ ಕೊಲ್ಕತ್ತಾದಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿತು. ಸಭೆ ತೆಗೆದುಕೊಂಡ ನಿರ್ಣಯದ ಸಾರಾಂಶ ಇಲ್ಲಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಈಗಾಗಲೇ ತೀವ್ರವಾಗಿರುವ ಕೃಷಿ ಬಿಕ್ಕಟ್ಟು - ಇವು ಗ್ರಾಮೀಣ ಬಡವರನ್ನು ಕಂಗಾಲು ಮಾಡಿದೆ. ಸರ್ಕಾರ ಇದಕ್ಕೆ ಸೂಕ್ತ ಪರಿಹಾರ ಒದಗಿಸುವುದರಲ್ಲಿ ವಿಫಲವಾಗಿದೆ. ಈಗಲೂ 'ಕೂಲಿಗಾಗಿ ಕಾಳು' ಯೋಜನೆ ಕೈಗೆತ್ತಿಕೊಳ್ಳಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಗ್ರಾಮೀಣ ಬಡಜನತೆಗೆ ಸೂಕ್ತ ಪರಿಹಾರ ಕ್ರಮಕೈಗೊಳ್ಳಲು ಪಕ್ಷ ಚಳುವಳಿ ಸಂಘಟಿಸಬೇಕು ಎಂದು ಕರೆ ನೀಡಿದೆ.

ಪಶ್ಚಿಮ ಬಂಗಾಳ ಪಂಚಾಯತ ಚುನಾವಣೆಗಳು

ಭೂಸುಧಾರಣೆ ಮತ್ತು ಸ್ಥಳೀಯ ಪ್ರಜಾಪ್ರಭುತ್ವ ಆಧಾರಿತ ಪಂಚಾಯತ ವ್ಯವಸ್ಥೆ ಪಶ್ಚಿಮ ಬಂಗಾಳದ ಗ್ರಾಮೀಣ ಪ್ರದೇಶಗಳಲ್ಲಿ ಅಸ್ತಿತ್ವಕ್ಕೆ ಬಂದ ನಂತರ, ಆರನೇ ಸತತ ಬಾರಿಗೆ ಸಿಪಿಐ(ಎಂ) ಮತ್ತು ಎಡರಂಗ ಮೂರು - ಹಂತಗಳ ಪಂಚಾಯತ ಚುನಾವಣೆಗಳಲ್ಲಿ ಜಯಭೇರಿ ಬಾರಿಸಿದ್ದಕ್ಕೆ ಕೇಂದ್ರ ಸಮಿತಿ, ಪಕ್ಷದ ರಾಜ್ಯ ಸಮಿತಿ ಮತ್ತು ಎಡರಂಗಗಳನ್ನು ಅಭಿನಂದಿಸಿದೆ.


ಸಿಪಿಐ(ಎಂ) 'ಭಯೋತ್ಪಾದಕ ತಂತ್ರ'ಗಳನ್ನು ಬಳಸುತ್ತಿದೆ ಎಂಬ ಅಪಪ್ರಚಾರ, ನಿಂದನೆಗಳ ದುಃಸ್ವಪ್ನಗಳನ್ನು ಹೊಸೆದ ಮಾಧ್ಯಮಗಳ ಮತ್ತು ವಿರೋಧ ಪಕ್ಷಗಳಿಗೆ ಇದು ಸರಿಯಾದ ಉತ್ತರ. ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಬಿಜೆಪಿ-ತೃಣಮೂಲ-ಕಾಂಗ್ರೆಸ್ ಕೂಟ ಎಡರಂಗದಿಂದ ಅಧಿಕಾರ ಕಿತ್ತುಕೊಳ್ಳಲು ಮಾಡಿದ ಪ್ರಯತ್ನ ವಿಫಲವಾಗಿದೆ.

ಗೆದ್ದ ಸೀಟುಗಳಲ್ಲಿ ಶೇಕಡಾ 9 ಹೆಚ್ಚಳ ಆಗಿದ್ದು ಮತ್ತು ತ್ರಿಪುರಾ ವಿಧಾನಸಭೆ ಚುನಾವಣೆಗಳ ವಿಜಯ ಸಿಪಿಐ(ಎಂ) ಮತ್ತು ಎಡರಂಗದ ಪ್ರತಿಷ್ಠೆಯನ್ನು ಹೆಚ್ಚಿಸಿದೆ.

ಕೇರಳದಲ್ಲಿ ದಬ್ಬಾಳಿಕೆ ಖಂಡನೆ

ಮುತಂಗಾದಲ್ಲಿ ಆದಿವಾಸಿಗಳ ಮೇಲೆ ನಡೆದ ಗೋಳಿಬಾರಿನ ಬಗ್ಗೆ ನ್ಯಾಯಾಂಗ ತನಿಖೆ ಒತ್ತಾಯಿಸುತ್ತಿದ್ದ ಎಡ-ಪ್ರಜಾರಂಗದ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ಹರಿಯಬಿಟ್ಟ ಎ.ಕೆ.ಆಂಟನಿ ಸರ್ಕಾರದ ನೀತಿಯನ್ನು ಕೇಂದ್ರ ಸಮಿತಿ ಖಂಡಿಸಿದೆ.

ಯುಡಿಎಫ್ ಎಲ್ಲಾ ಕೋಮುವಾದಿ-ಜಾತಿವಾದಿ ಪಕ್ಷಗಳ ಕೂಟ. ಸಿಪಿಐ(ಎಂ)ನ್ನು ದೂರವಿಡಲು ಮತ್ತು ತನ್ನ ಅಧಿಕಾರ ಭದ್ರಪಡಿಸಿಕೊಳ್ಳಲು ಎಲ್ಲಾ ರೀತಿಯ ಕೋಮುವಾದಿ-ಜಾತಿವಾದಿ ಶಕ್ತಿಗಳನ್ನು ಸಂಪ್ರೀತಗೊಳಿಸಲು, ಕುಮ್ಮಕ್ಕು ಕೊಡಲು ಪ್ರಯತ್ನಿಸುತ್ತಿದೆ. ಈ ನೀತಿಯ ದುಷ್ಪರಿಣಾಮಗಳನ್ನು ಈಗಾಗಲೇ ರಾಜ್ಯದಲ್ಲಿ ನೋಡ ಬಹುದು. ಮರಾದ್‌ನಲ್ಲಿ ಮುಸ್ಲಿಂ ತೀವ್ರವಾದಿಗಳು 9 ಜನರನ್ನು ಕೊಲೆ ಮಾಡಿದ್ದು ಇಂತಹ ಅಪಾಯಕರ ಕರೆಗಂಟೆ ಇದು ಅದೇ ಪ್ರದೇಶದಲ್ಲಿ ಕಳೆದ ವರ್ಷ ನಡೆದ ಕೋಮುವಾದಿ ಹಿಂಸಾಚಾರಕ್ಕೆ ನಡೆದಿರುವ ಪ್ರತೀಕಾರ. ಎನ್‌ಡಿಎಫ್, ಆರೆಸ್ಸೆಸ್, ಮುಸ್ಲಿಂ - ಎಲ್ಲಾ ರೀತಿಯ ತೀವ್ರವಾದಿಗಳ ಕಾರ್ಯಾಚರಣೆಯನ್ನು ನಿಯಂತ್ರಿಸುವ ಬದಲು ಕುಮ್ಮಕ್ಕು ಕೊಡಲಾಗುತ್ತಿದೆ.



ನಿರಂತರ ಹೋರಾಟದಲ್ಲಿ

ಕೇರಳದಲ್ಲಿ ಬಲಗೊಳ್ಳುತ್ತಿರುವ ಈ ಪ್ರತಿಗಾಮಿ ಶಕ್ತಿಗಳ ವಿರುದ್ಧ ರಾಜಕೀಯ ಮತ್ತು ಸೈದ್ಧಾಂತಿಕ ಹಂತಗಳಲ್ಲಿ ಹೋರಾಡಬೇಕೆಂದು ಎಡ - ಪ್ರಜಾ ಶಕ್ತಿಗಳಿಗೆ ಕೇಂದ್ರ ಸಮಿತಿ ಕರೆ ನೀಡಿದೆ.

ಮಹಿಳಾ ಮೀಸಲಾತಿ ಮಸೂದೆ

ಕಳೆದ ಪಾರ್ಲಿಮೆಂಟು ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಪ್ರಸ್ತುತಪಡಿಸಿ, ಪಾಸು ಮಾಡಿಸಲು ಪ್ರಯತ್ನಿಸದೆ ಹೋದದ್ದಕ್ಕೆ ಕೇಂದ್ರ ಸಮಿತಿ ವಾಜಪೇಯಿ ಸರ್ಕಾರವನ್ನು ಕಟುವಾಗಿ ಖಂಡಿಸಿದೆ. ಲೋಕಸಭೆಯ ಮುಕ್ಕಾಲು ಭಾಗ ಸದಸ್ಯರು ಈ ಮಸೂದೆ ಬೆಂಬಲಿಸುತ್ತಿರುವಾಗ, ಸಹಮತದ ಬಗ್ಗೆ ಸರ್ಕಾರದ ಮಾತು ಮೋಸದ್ದು. ರಾಜಕೀಯ ಪಕ್ಷಗಳೇ ಮಹಿಳೆಯರಿಗೆ ಮೀಸಲಾತಿ ನೀಡುವುದು, ಮಹಿಳೆಯರ ಪ್ರಾತಿನಿಧ್ಯಕ್ಕೆ ಗ್ಯಾರಂಟಿ ಆಗದು. ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡಿಸಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಉತ್ತರ ಪ್ರದೇಶ ಸರ್ಕಾರದ ಬಿಕ್ಕಟ್ಟು

ಮಾಯಾವತಿ ಸರ್ಕಾರಕ್ಕೆ ರಾಷ್ಟ್ರೀಯ ಲೋಕದಳದ ಬೆಂಬಲ ವಾಪಸಾತಿಯಿಂದ ಉತ್ತರ ಪ್ರದೇಶದ ಬಿಜೆಪಿ-ಬಿಎಸ್‌ಪಿ ಸರ್ಕಾರದ ಬಹುಮತದ ಬಗ್ಗೆ ಅನುಮಾನ ಮೂಡಿಸಿದೆ. ಆದ್ದರಿಂದ ಆಳುವ ರಂಗದ ಬಹುಮತ ನಿರ್ಧರಿಸಲು ವಿಧಾನಸಭೆ ಅಧಿವೇಶನ ಕರೆಯಬೇಕು. ಸರ್ಕಾರದ ಬಹುಮತವನ್ನು ವಿಧಾನಸಭೆಯ ಅಧಿವೇಶನದಲ್ಲಿ ಮಾತ್ರ ನಿರ್ಧರಿಸುವ ಪ್ರಜಾಸತ್ತಾತ್ಮಕ ವಿಧಾನವನ್ನು ಪಾಲಿಸಬೇಕೆಂದು ಕೇಂದ್ರ ಸಮಿತಿ ಒತ್ತಾಯಿಸಿದೆ.

ಮುಂಬರುವ ವಿಧಾನಸಭೆ ಚುನಾವಣೆಗಳಲ್ಲಿ ಬಿಜೆಪಿ ಸೋಲಿಸಿ

ವಿಧಾನಸಭೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯುವುದು ಪಕ್ಷದ ಮುಖ್ಯ ಗುರಿಯಾಗಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಈ ಐದು ರಾಜ್ಯಗಳಲ್ಲಿ ಒಂದರಲ್ಲಿ (ಮಿಜೋರಾಂನಲ್ಲಿ) ಪಕ್ಷಕ್ಕೆ ಘಟಕವಿಲ್ಲ. ಉಳಿದ ನಾಲ್ಕು ರಾಜ್ಯಗಳಲ್ಲಿ ಎಡಪಕ್ಷಗಳ ಮತ್ತು ಕಾಂಗ್ರೆಸ್ಸೇತರ ಪಕ್ಷಗಳು ಕೆಲವು ಪ್ರದೇಶಗಳನ್ನು ಬಿಟ್ಟರೆ ಬಲಶಾಲಿಯಾಗಿಲ್ಲ. ಎಡಪಕ್ಷಗಳ ಮತ್ತು ಕಾಂಗ್ರೆಸ್ಸೇತರ ಜಾತ್ಯಾತೀತ ಪಕ್ಷಗಳ ಜತೆ ಚುನಾವಣಾ ಹೊಂದಾಣಿಕೆ ಮಾಡಿ ಪಕ್ಷ ಕೆಲವು ಸೀಟುಗಳಲ್ಲಿ ಸ್ಪರ್ಧಿಸಿದೆ. ಪಕ್ಷ ಸ್ವತಂತ್ರ ಚುನಾವಣಾ ಪ್ರಚಾರ ನಡೆಸಲಿದ್ದು, ಬಿಜೆಪಿ ಸೋಲಿಗೆ ಶ್ರಮಿಸುವುದು. ಈ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರಗಳ ವೈಫಲ್ಯವನ್ನು ಬಯಲಿಗೆಳೆದು, ಅವುಗಳ ಜನ - ವಿರೋಧಿ ನೀತಿಗಳನ್ನು ಪಕ್ಷ ವಿರೋಧಿಸಲಿದೆ.

ನದಿ ನೀರು ವಿವಾದ

ಚಿತ್ರಾವತಿ ನದಿಯ ಮೇಲೆ ಪರಗೋಡು ಜಲಾಶಯ ನಿರ್ಮಾಣದ ಬಗ್ಗೆ ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರಗಳ ಮಧ್ಯ ವಿವಾದ ಎದ್ದಿದೆ. ತೆಲುಗುದೇಶಂ ಪಕ್ಷ ಈ ಬಗ್ಗೆ ಚಳುವಳಿ ಸಹ ಆರಂಭಿಸಿದೆ. ಕೇಂದ್ರ ಸರ್ಕಾರ ತಕ್ಷಣ ಮಧ್ಯಪ್ರವೇಶ ಮಾಡಿ, ಎರಡೂ ರಾಜ್ಯ ಸರ್ಕಾರಗಳ ಪ್ರತಿನಿಧಿಗಳ ಸಭೆ ಕರೆದು ಮಾತುಕತೆ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯಬೇಕು. ಎರಡೂ ರಾಜ್ಯಗಳಲ್ಲಿ ಸಂಕುಚಿತ ಪ್ರಾದೇಶಿಕವಾದದ ಶಕ್ತಿಗಳಿಗೆ ಈ ಸಮಸ್ಯೆಯನ್ನು ಉಲ್ಬಣಗೊಳಿಸಲು ಅವಕಾಶ ಕೊಡಬಾರದು ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಆಗಸ್ಟ್ 16 ರಿಂದ31 ರ ವರೆಗೆ ಪ್ರಚಾರಾಂದೋಲನ

ದೇಶ ಎದುರಿಸುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಮತ್ತು ಕೇಂದ್ರ ಮತ್ತು ಹಲವು ರಾಜ್ಯಸರ್ಕಾರಗಳು ಅನುಸರಿಸುತ್ತಿರುವ ಅಪಾಯಕಾರಿ ನೀತಿಗಳನ್ನು ವಿರೋಧಿಸಲು ಆಗಸ್ಟ್ 16 ರಿಂದ 31 ರ ವರೆಗೆ ಪ್ರಚಾರಾಂದೋಲನ ನಡೆಸುವಂತೆ ಪಕ್ಷಕ್ಕೆ ಕೇಂದ್ರ ಸಮಿತಿ ಕರೆ ನೀಡಿದೆ. ಕೋಟ್ಯಾಂತರ ದುಡಿಯುವ ಜನರ ಬದುಕು ಮತ್ತು ದೇಶದ ಆರ್ಥಿಕ ಸಾರ್ವಭೌಮತೆಯನ್ನು ನಾಶ ಮಾಡಿರುವ ಆರ್ಥಿಕ ನೀತಿಗಳು, ಬಿಜೆಪಿ-ಆರೆಸ್ಸೆಸ್‌ಗಳ ಕೋಮುವಾದಿ ಅಜೆಂಡಾದ ಅಪಾಯಗಳು, ವಾಜಪೇಯಿ ಸರ್ಕಾರದ ಸಾಮ್ರಾಜ್ಯಶಾಹಿ ಪರ ನೀತಿಗಳಿಂದಾಗಿ ದೇಶದಲ್ಲಿ ಹೆಚ್ಚುತ್ತಿರುವ ಸಾಮ್ರಾಜ್ಯಶಾಹಿಯ ಪ್ರಭಾವ-ಇವುಗಳ ಬಗ್ಗೆ ಪ್ರಚಾರಾಂದೋಲನ ಜನರ ಗಮನ ಸೆಳೆಯಲಿದೆ. ಈ ಕ್ಷೇತ್ರಗಳಲ್ಲಿ ಬದಲಿ ನೀತಿಗಳನ್ನು ಜನರ ಮುಂದೆ ಪಕ್ಷ ಇಡಲಿದೆ. ಈ ಪ್ರಚಾರಾಂದೋಲನ ರಾಜ್ಯಮಟ್ಟದ ಬೃಹತ್ ರ್‍ಯಾಲಿಯಲ್ಲಿ ಕೊನೆಗೊಳ್ಳಲಿದೆ.

ಕುಡಿಯುವ ನೀರಿಗಾಗಿ ಲಾಠಿ ಏಟು

ಇಂದು ಮಳೆಯಿಲ್ಲ, ಕುಡಿಯಲು ನೀರಿಲ್ಲ. ಮಳೆ ಬಂದಾಗ ನೀರಿನ ಸಂಗ್ರಹಕ್ಕೆ ವ್ಯವಸ್ಥೆಯಿಲ್ಲ. ಸರ್ಕಾರದ ವೈಫಲ್ಯ ಮುಚ್ಚಿಹಾಕಲು ದೇವರಲ್ಲಿ ಪ್ರಾರ್ಥಿಸಲು ಸರ್ಕಾರದ ಆದೇಶ. ಗುಡಿ, ಚರ್ಚು, ಮಸೀದಿಗಳಿಗೆ ಹೋಗಿ ಬೇಡಿಕೊಳ್ಳುವ ಹೈಟೆಕ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣಾರವರ ಕಪಟನಾಟಕ. ಆದರೆ ಕಳೆದ 2-3 ವರ್ಷಗಳಿಂದ ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದ ಶಿರುಗುಪ್ಪ ತಾಲ್ಲೂಕ್ ಸಿಂಗೇರಿ ಗ್ರಾಮದ ಜನತೆ ಕುಡಿಯಲು ನೀರು ಕೊಡಿ ಎಂದು ಕೇಳಲು ಬಂದಾಗ ಕೊಟ್ಟದ್ದು ಲಾಠಿ ಏಟು. ವಿವರಗಳಿಗಾಗಿ ಮುಂದೆ ಓದಿ

ಸಿರಿಂಗೇರಿ ಒಂದು ಹಳ್ಳಿಯಾದರೂ, ಸುತ್ತಮುತ್ತ 18 ಹಳ್ಳಿಗಳಿಗೆ ಅದು ಕೇಂದ್ರ ಸ್ಥಳ. ವಾರದ ಸಂತೆ, ವ್ಯಾಪಾರ ವಹಿವಾಟು, ಸರ್ಕಾರಿ ಆಸ್ಪತ್ರೆ, ಕಂದಾಯ, ನೀರಾವರಿ, ವಿದ್ಯುತ್ ಇಲಾಖೆಗಳ ಆಫೀಸುಗಳು, ಪೊಲೀಸ್ ಠಾಣೆ, 4 ಹಿರಿಯ ಪ್ರಾಥಮಿಕ ಶಾಲೆಗಳು, 2 ಪ್ರೌಢಶಾಲೆಗಳು, ಒಂದು ಹಾಸ್ಟೇಲ್ ಮೊದಲಾದವುಗಳನ್ನು ಹೊಂದಿದ ಈ ಹಳ್ಳಿಯಲ್ಲಿ 13 ಸಾವಿರಕ್ಕೂ ಮೀರಿದ ಜನಸಂಖ್ಯೆಯಿದೆ. ಇಷ್ಟೆಲ್ಲಾ ಇದ್ದಾಗ್ಯೂ ಊರಿನ ಜನ ಇಂದಿಗೂ 2-3 ಕಿ.ಮೀ ದೂರ ಹೋಗಿ ಕುಡಿಯುವ ನೀರನ್ನು ತರಬೇಕು. ಮಹಿಳೆಯರಿಗಂತೂ ಇದು ನಿತ್ಯದ ಶಿಕ್ಷೆ. ಸುತ್ತಲೂ ಬರ ಬಿದ್ದಿರುವುದರಿಂದ ಹತ್ತಾರು ಕಿ.ಮೀ ದೂರ ಹೋಗಿ ದುಡಿದು ಬರುವ ಕೂಲಿಕಾರ ಮಹಿಳೆಯರು ರಾತ್ರಿ ಗಂಟೆ 8 ಆಗಲಿ 9 ಆಗಲಿ ಮತ್ತೆ ನೀರು ತರಲು ಹೋಗಬೇಕು. ಬೆಳಗಾದರೆ ಮತ್ತೆ ನೀರಿನ ರಂಪ. ಕುಟುಂಬಗಳಲ್ಲಿ ಕಲಹ. ಮನೆಯಲ್ಲಿ, ಓಣಿಯಲ್ಲಿ, ಹೊಲದಲ್ಲಿ, ರಸ್ತೆಯಲ್ಲಿ, ಎಲ್ಲೆಲ್ಲೂ ನೀರಿನ ಸುದ್ದಿ.

ನೀರನ್ನೇ ಬಯಸದ ಜನಪ್ರತಿನಿಧಿಗಳು

ನೀರಿಗಾಗಿ ಇಷ್ಟೊಂದು ಹಾಹಾಕಾರ ಇದ್ದಾಗ್ಯೂ ಜನಪ್ರತಿನಿಧಿಗಳಿಗೆ ಅದರ ಪರಿವೇ ಇದ್ದಂತೆ ಕಾಣುವುದಿಲ್ಲ. ಜಿಲ್ಲಾ ಪಂಚಾಯತ್ ಸದಸ್ಯರಾದ ಕೆ.ಭೀಮಲಿಂಗಪ್ಪನವರು ನೀರೇ ಕುಡಿಯುವುದಿಲ್ಲವಂತೆ. ಅವರು ಮತ್ತೆ ಏನನ್ನು ಕುಡಿಯುತ್ತಾರೆಂದು ಅವರೇ ಹೇಳಬೇಕು. ಅವರು ಜಿಲ್ಲಾ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಬೇರೆ.

ಇನ್ನು ತಾಲ್ಲೂಕ್ ಪಂಚಾಯತ್ ಸದಸ್ಯರಾದ ಅಹಮ್ಮದ್ ಸಾಬ್ ಅವರಿಗೆ ಪೊಲೀಸ್ ಸ್ಟೇಷನ್‌ನಲ್ಲಿ ಸಣ್ಣ ಪುಟ್ಟ ಕೇಸುಗಳಿರುತ್ತವೆಯಂತೆ. ಇವರಿಗೂ ನೀರಿಗೂ ಸಂಬಂಧವೇ ಇಲ್ಲವಂತೆ. ಕೇಳಿದರೆ ಅದು ಪಂಚಾಯತಿ ಜವಾಬ್ದಾರಿ ಅನ್ನುತ್ತಾರೆ.

ಗ್ರಾಮ ಪಂಚಾಯತಿ ವಿಷಯಕ್ಕೆಬಂದ್ರೆ, ಕಾಂಗ್ರೆಸ್ ಮತ್ತು ಜನತಾದಳ (ಸಂಯುಕ್ತ)ದ ಒಟ್ಟು 23 ಸದಸ್ಯರಿದ್ದಾರೆ. ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಯು ಮಾರಾಮಾರಿ ಇಲ್ಲದೆ ಮುಕ್ತಾಯವಾಗುವುದಿಲ್ಲ. ಇವರ ಕಿತ್ತಾಟ ನೀರಿಗಾಗಿಯೇ, ಜನಹಿತಕ್ಕಾಗಿಯೋ? ಅಲ್ಲ. ಕೇವಲ ಕಂಟ್ರಾಕ್ಟಿನ ಹಣದ ಪಾಲಿಗಾಗಿ.

ಎಮ್.ಎಲ್.ಎ ಶಂಕರ ರೆಡ್ಡಿಯವರಿಗಂತೂ ಹಳ್ಳಿಗಳೆಂದರೆ ಅಲರ್ಜಿ. ಯಾಕಂದ್ರೆ ಈ ಮನುಷ್ಯ ಈಗ "ಕೈಗಾರಿಕಾ ಬಂಡವಾಳ ಹೂಡಿಕೆದಾರರ ನಿಗಮ" ದ ಅಧ್ಯಕ್ಷ. ಬಂಡವಾಳದಾರರ ಹಿತಕಾಯಬೇಕಲ್ವೆ? ಅದಕ್ಕಾಗಿ ಹಳ್ಳಿ ಕಡೆಗೆ ಕಣ್ಣು ಹರಿಸುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಬೆಳಗಾದರೆ 'ಬೆಂಗಳೂರಿನಲ್ಲಿದ್ದಾರೆ' ಎನ್ನುವ ಮಾಹಿತಿ ನೀಡಲಾಗುತ್ತದೆ.

ಇಂತಹ ಅಸಮರ್ಥ ನಾಯಕರ ನಿರ್ಲಕ್ಷತನಕ್ಕೆ ಬೇಸತ್ತ ಸಿರಿಗೇರಿಯ ಬಡವರು ಗ್ರಾಮದಲ್ಲಿ ಕೃಷಿ ಕೂಲಿಕಾರರ ಸಂಘವನ್ನು ಅಸ್ತಿತ್ವಕ್ಕೆ ತಂದು ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಗಾಗಿ ಕಳೆದ ಮೂರು ವರ್ಷಗಳಿಂದ ಹೋರಾಟ ಮಾಡುತ್ತಾ ಬಂದಿದ್ದಾರೆ.

ತೀವ್ರಗೊಂಡ ಹೋರಾಟ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಸಿರಿಗೇರಿ ಗ್ರಾಮ ಘಟಕವು ಊರಿನ ಬಡವರನ್ನು ಒಂದುಗೂಡಿಸಿ ಕುಡಿಯುವ ನೀರಿಗಾಗಿ ಸತತವಾಗಿ ನಡೆಸಿದ ಧರಣಿ ಸತ್ಯಾಗ್ರಹ, ರಸ್ತೆತಡೆ, ಬಹಿರಂಗಸಭೆ, ಖಾಲಿ ಕೊಡಗಳ ಪ್ರದರ್ಶನ ಮೊದಲಾದ ಹೋರಾಟಗಳು ಸುತ್ತಮುತ್ತ ಹತ್ತಾರು ಹಳ್ಳಿಗಳ ಜನರನ್ನು ನಿಬ್ಬೆರಗಾಗುವಂತೆ ಮಾಡಿತು. ನಿರಂತರವಾಗಿ ನಡೆದ ಈ ಹೋರಾಟಗಳ ಪ್ರಭಾವದಿಂದಾಗಿ ಆ ಹಳ್ಳಿಗಳಲ್ಲೂ ಕೃಷಿ ಕೂಲಿಕಾರರ ಸಂಘದ ಸ್ಥಾಪನೆ ಸಾಧ್ಯವಾಯಿತು.

ನೀರಿನ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಲು ಸಾಧ್ಯವಾಗುವಂತಹ ಕೆಲವು ಸಲಹೆಗಳನ್ನು ಸಂಘವು ಗ್ರಾಮ ಪಂಚಾಯತ್ ಆಡಳಿತದ ಮುಂದಿಟ್ಟಿತ್ತು. ಆದರೆ ಅಧಿಕಾರಿಗಳು ಯಾವ ಸಲಹೆಗೂ ಕಿವಿಗೊಡಲಿಲ್ಲ.

ಹೋರಾಟ ಮೂರನೇ ವರ್ಷಕ್ಕೆ ಕಾಲಿಟ್ಟಿತು. ನೀರಿನ ಚಳುವಳಿಯ ಬಿಸಿ ಏರಿತು. ಸಿರುಗುಪ್ಪ ತಹಶೀಲ್ದಾರ್ ಕುಲಕರ್ಣಿ ಮತ್ತು ತೆಕ್ಕಲಕೋಟೆ ಸರ್ಕಲ್ ಇನ್ಸ್‌ಪೆಕ್ಟರ್ ಯೂಸೂಫ್ ಅವರುಗಳ ಬೆದರಿಕೆಯೂ ಹೆಚ್ಚಾಗುತ್ತಾ ಹೋಯಿತು. ಹಳ್ಳಿಯ ಜನಗಳ ಹೋರಾಟಗಳನ್ನು ದಮನ ಮಾಡುವುದು ಅವರ ಗುರಿಯಾಗಿತ್ತು. ಕಾರ್ಯಕರ್ತರಲ್ಲಿ ಭಯ ಹುಟ್ಟಿಸುವ ಅವರ ತಂತ್ರ ಫಲ ನೀಡಲಿಲ್ಲ.

"ಕುಡಿಯಲು ನೀರು ಬೇಕೆ ಬೇಕು" ಎಂಬ ಬೇಡಿಕೆ ಮುಂದಿಟ್ಟು ಸಿರಿಗೇರಿ ಪಂಚಾಯತಿ ಆಫೀಸ್ ಎದುರು ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಆರಂಭವಾಯಿತು. ಪ್ರತಿದಿನ ಹತ್ತು ಮಂದಿಯಂತೆ ಹಗಲು ರಾತ್ರಿ ಸತ್ಯಾಗ್ರಹ ನಡೆಯಿತು. ಚಳುವಳಿ 4ನೇ ದಿನಕ್ಕೆ ಕಾಲಿಟ್ಟರೂ ಜವಾಬ್ದಾರಿಯುಳ್ಳ ಯಾರೊಬ್ಬರೂ ಇತ್ತ ಕಡೆ ಸುಳಿಯಲಿಲ್ಲ. 5ನೇ ದಿನ ಗ್ರಾಮದ ಎಲ್ಲ ಕೂಲಿಕಾರರು ಕೆಲಸಕ್ಕೆ ಹೋಗದೇ ಇತರ ಜನರನ್ನು ಒಟ್ಟಿಗೆ ಸೇರಿಸಿ ಪಂಚಾಯತಿ ಆಫೀಸಿಗೆ ಮುತ್ತಿಗೆ ಹಾಕುವುದೆಂದು ನಿರ್ಧರಿಸಲಾಯಿತು. ಸುತ್ತಮುತ್ತ ಗ್ರಾಮಗಳ ಸಂಘದ ಕಾರ್ಯಕರ್ತರಿಗೂ ಆಹ್ವಾನ ನೀಡಲಾಯಿತು. ಸಿರಿಗೇರಿ, ಬೂದುಗುಪ್ಪ, ಕರೂರು, ಹಾ.ಹೊಸಳ್ಳಿ ಮೊದಲಾದ ಗ್ರಾಮಗಳಿಂದ ಸುಮಾರು ಐದಾರು ನೂರು ಜನ ಸೇರಿಬಿಟ್ಟರು. ಮಹಿಳೆಯರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಅಷ್ಟೊತ್ತಿಗಾಗಲೇ ತೆಕ್ಕಲಕೋಟೆ ಮತ್ತು ಸಿರಿಗೇರಿ ಪೋಲೀಸ್ ತುಕಡಿಗಳು ಅಣಿನೆರೆದಿದ್ದವು.

ಲಾಠಿ ಬೂಟುಗಳ ತಾಂಡವ ನೃತ್ಯ

"ಬೇಕೆ ಬೇಕು, ನೀರು, ಬೇಕು: ಬೇಕೆ ಬೇಕು, ನೀರು ಬೇಕು; ಪಂಚಾಯತಿ ಆಡಳಿತದ ವಿಳಂಬ ನೀತಿಗೆ ಧಿಕ್ಕಾರ; ಜಿಲ್ಲಾಡಳಿತಕ್ಕೆ ಧಿಕ್ಕಾರ" ಎಂಬ ಘೋಷಣೆಗಳು ಮುಗಿಲು ಮುಟ್ಟುವಂತಿದ್ದವು. ತಕ್ಷಣ ಹೋರಾಟದ ನೇತೃತ್ವ ವಹಿಸಿದವರಿಗೆ ಬಂತು ಕರೆ ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರಿಂದ ಎನ್.ಕುಮಾರ್, ಹೆಚ್.ತಿಮ್ಮಯ್ಯ, ಕೆ.ಮಲ್ಲಿ, ಮೌಲಾಲಿ, ಹುಲಿಗೆಮ್ಮ ಕಾಳಮ್ಮ ಶೇಖಮ್ಮ ಎನ್.ಶಿವಮ್ಮ ಉರುಕುಂದಪ್ಪ, ತಿಮ್ಮಪ್ಪ, ಮರಿಸ್ವಾಮಿ, ಬಿ.ಗಾದಿಲಿಂಗಪ್ಪ ಮೊದಲಾದವರು ಚಳುವಳಿಯ ನೇತೃತ್ವ ವಹಿಸಿದ್ದರು. ಮುಖಂಡರು ತಿಳಿಸುವವರೆಗೂ ಯಾರೂ ಜಾಗಬಿಟ್ಟು ಕದಲಬಾರದೆಂದು, ಎಲ್ಲರೂ ಶಾಂತಿಯಿಂದ ಇರಬೇಕು ಎಂದು ಸೂಚಿಸಲಾಯಿತು. ಎನ್.ಕುಮಾರ್, ತಿಮ್ಮಯ್ಯ, ಕೆ.ಮಲ್ಲಿ ಮತ್ತು ಮೌಲಾಲಿ ಇವರುಗಳು ಸರ್ಕಲ್ ಇನ್ಸ್‌ಪೆಕ್ಟರ್ ಮುಂದೆ ಹಾಜರಾದರು.

"ಮುಗಿಸ್ರೋ ನಿಮ್ಮ ಕಾರ್ಯಕ್ರಮ, ಇಲ್ಲಾಂದ್ರೆ ಫೋನ್ ಮಾಡಿ ರಿಜರ್ವ್ ವ್ಯಾನ್ ಕರಿಸ್ತೀನಿ, ಲಾಠಿ ಚಾರ್ಜ್ ಮಾಡ್ಸಿ, ಕೇಸ್ ಹಾಕಿ, ಜೈಲಿಗ ಕಳಿಸ್ತೀನಿ." ಕಿರುಚಿದರು ಸರ್ಕಲ್ ಇನ್ಸ್‌ಪೆಕ್ಟರ್, ಸಂಗಾತಿ ಮೌಲಾಲಿ ಅನಕ್ಷರಸ್ತ ಗೂಲ ಜೀವಿಯಾದರೂ ಅವಮಾನ ಸಹಿಸುವವರಲ್ಲ 'ಶೆಲ್ಲಾ, ಹೋರಾಟ ಮಾಡ್ಬೇಡಿ ಅಂತೀಯಲ್ಲಾ ನಮಗೆ ನೀರು ನೀನು ಕೊಡ್ತೀಯ? ಕೊಡೋ ದಮ್ಮು ನಿಂತಾಕ ಐತಾ? ಎಂದಿದ್ದೆ ತಡ. ಐದಾರು ಜನ ಪೊಲೀಸರು ಮೌಲಾಲಿ ಅವರ ಮೇಲ ಸಿಂಹಗಳಂತೆ ಮುಗಿಬಿದ್ದು ಸಿಕ್ಕಾಪಟ್ಟೆ ಹೊಡೆಯಲಾರಂಭಿಸಿದರು, ಬೂಟು ಕಾಲುಗಳಿಂದ ಒದೆಯತೊಡಗಿದರು. ಇವರ ಏಟುಗಳಿಂದ ರೊಚ್ಚಿಗೆದ್ದ ಮೌಲಾಲಿ ತನ್ನ ಬಲವಾದ ಕೈಗಳಿಂದ ತನ್ನನ್ನು ಥಳಿಸುತ್ತಿದ್ದ ಪೊಲೀಸರನ್ನು ತಳ್ಳಿದಾ ಅವರಲ್ಲಿ ನಾಲ್ಕು ಜನ ಸ್ಟೇಷನ್ ಗೇಟಿ ಹೋಗಿಬಿದ್ದರು. ನೋಡುನೋಡುತ್ತಿದ್ದಂತೆ ಜ ಸ್ಟೇಷನ್ ಒಳಗೆ ನುಗ್ಗಿದರು. ಪೊಲೀಸರು ಬೀಸಿ ಲಾಠಿಗೆ ಜನ ಮಣಿಯಲಿಲ್ಲ. ಪೊಲೀಸರಿಗೆ ಧಿಕ್ಕಾ ಹಾಕುತ್ತಾ ಸ್ಟೇಷನ್ ತುಂಬ ನಿಂತರು. ಆದ ಚಳುವಳಿ ದಾರಿ ತಪ್ಪುವುದನ್ನು ತಡೆಯಲ ಮುಖಂಡರು ಶ್ರಮಪಟ್ಟು, ಜನರನ್ ಸಮಾಧಾನಪಡಿಸಿ ಹೋರಾಟದ ಸ್ಥಳ ಕರೆತಂದರು.

ಇಷ್ಟಾದಮೇಲೆ ಸ್ಥಳಕ್ಕೆ ಆಗಮಿಸಿ ತಹಶೀಲ್ದಾರ್ ಮತ್ತು ತಾಲ್ಲೂಕ್ ಪಂಚಾಯ ಕಾರ್ಯನಿರ್ವಾಹಕರು ಮಾಜಿ ಶಾಸ ರೇವಣಸಿದ್ಧಯ್ಯನವರನ್ನು ಕರೆತಂದು ವಿವಾ ಇತ್ಯರ್ಥಪಡಿಸಲು ಮುಂದ್ಬಾದರು. ಪೊಲೀ ದೌರ್ಜನ್ಯವನ್ನು ಖಂಡಿಸಿ ಎರಡು ದಿನಗಳ ಬ ಎಸ್.ಪಿ ಮತ್ತು ಡಿ.ಸಿ.ಕಛೇರಿ ಮುಂದೆ ಪ್ರತಿಭಟ ನಡೆಸಲಾಯ್ತು. ಒಟ್ಟೂ ಹೋರಾಟ ಪ್ರತಿಫಲವಾಗಿ 2.5 ಕೋಟಿ ರೂ.ವೆಚ್ಚದ ನಿರ್ಮಾಣ ಕೆಲಸ ಪೂರ್ಣವಾಯಿತು. ಸಿರಿಗೆ ಸೇರಿದಂತೆ ನಾಲ್ಕು ಗ್ರಾಮಗಳಿಗೆ ಕುಡಿಯುವ ನೀ ಪೂರೈಕೆಗೆ ವ್ಯವಸ್ಥೆಯಾಯಿತು. ಇದರ ಜೊತೆಯ 5 ಹಳ್ಳಿಗಳಿಗೆ 8 ಲಕ್ಷ ರೂ. ಮೊತ್ತದ ಬರಪರಿಹಾ ಕಾಮಗಾರಿ ಮಂಜೂರಾಯಿತು. 4 ಕುಟುಂಬಗಳಿಗೆ ರೇಷನ್‌ಕಾರ್ಡ್, 3 ವಠಾರಗಳ ಮಹಿಳೆಯರಿಗೆ ಶೌಚಾಲಯ ನಿರ್ಮಾ ಸಾಧ್ಯವಾಯಿತು. ಪಿ.ಎಸ್.ಐ ಪವಾರ್ ಬಳ ಗಾಂಧಿ ನಗರಕ್ಕೆ ವರ್ಗಾವಣೆಯಾಯಿತು.

ಆದರೆ 9 ಜನ ಮುಖಂಡರ ಮೇಲೆ 4 ತಿಂ ಹಿಂದಿನ ಸುಳ್ಳು ಮೊಕದ್ದಮೆಗಳನ್ನು ಹಾಕಲಾಗಿ ಬಡಜನತೆಯ ಹಕ್ಕುಗಳಿಗಾಗಿ ಧೃತಿಗೆಡ ಹೋರಾಡಲು ಕೃಷಿ ಕೂಲಿಕಾರರ ಸಂ ದೃಢಸಂಕಲ್ಪ ಮಾಡಿದೆ.

- ಎನ್.ಕುಮಾರ್.ಸಿರಿಗೆ

ಅವೈಜ್ಞಾನಿಕ ಹಳದಿ ಕಾರ್ಡ್ ಮಾನದಂಡ ವಿರೋಧಿಸಿ ಪ್ರತಿಭಟನೆ

ರಾಜ್ಯ ಸರ್ಕಾರ ಹಳದಿ ರೇಷನ್ ಕಾರ್ಡ್‌ಗೆ ಅರ್ಹಬಡವರನ್ನು ಗುರುತಿಸಲು ಅನುಸರಿಸಿರುವ ಮಾನದಂಡ ಅವೈಜ್ಞಾನಿಕವಾಗಿದೆಯೆಂದು ಆರೋಪಿಸಿರುವ ಸಿ.ಪಿ.ಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವರವರು ಎಲ್ಲಾ ಬಡವರಿಗೂ ಹಳದಿ ರೇಷನ್ ಕಾರ್ಡ್ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಜೂನ್ 6 ರಂದು ಮಂಗಳೂರು ತಾಲ್ಲೂಕು ಕಛೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಬಡತನ ರೇಖೆಗಿಂತ ಕೆಳಗಿನವರಿಗೆ ಹಳದಿ ರೇಷನ್ ಕಾರ್ಡ್ ನೀಡುವ ನೆಪದಲ್ಲಿ ಹೆಚ್ಚಿನ ಬಡವರಿಗೆ ಈ ಸೌಲಭ್ಯ ದೊರಕದಂತೆ ಮಾಡಲು ಸರ್ಕಾರ ಹೊರಟಿದೆ. ಬಡವರನ್ನು ಗುರುತಿಸುವ ಮಾನದಂಡದಲ್ಲಿ ಮನೆಯಲ್ಲಿ ಫೋನ್ ಇದೆಯಾ? ಟಿ.ವಿ, ರೇಡಿಯೋ, ಫ್ಯಾನ್, ಗ್ಯಾಸ್ ಇದೆಯಾ ಎಂದು ಕೇಳಿರುವುದನ್ನು ಟೀಕಿಸಿದರು.

ಹಳದಿ ಕಾರ್ಡ್ ಒದಗಿಸಲು ಕನಿಷ್ಟ ಜುಲೈ ತಿಂಗಳತನಕ ಕಾಲಾವಕಾಶ ನೀಡಬೇಕು, ಸಾಕಷ್ಟು ಪ್ರಮಾಣದಲ್ಲಿ ಅರ್ಜಿ ಫಾರಂಗಳನ್ನು ಒದಗಿಸಬೇಕೆಂದು ಒತ್ತಾಯಿಸಿದ ಅವರು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸ್ವಯಂ ಆಸ್ತಿ ತೆರಿಗೆ ಪಾವತಿಸಬೇಕೆಂದು ಶರತ್ತನ್ನು ವಿಧಿಸುವುದು ಸರಿಯಲ್ಲವೆಂದು ಹೇಳಿದರು.

ಪಕ್ಷದ ಮೈದಾನ ಕಛೇರಿಯಿಂದ ಮೆರವಣಿಗೆ ಹೊರಟು ತಹಶೀಲ್ದಾರ್ ಕಛೇರಿ ಎದುರು ಪ್ರದರ್ಶನ ನಡೆಸಲಾಯ್ತು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣಶೆಟ್ಟಿ, ವಸಂತ ಆಚಾರಿ, ಅಬ್ರಹಾಂ ಕರ್ಕಡ, ಜಿಲ್ಲಾ ಸಮಿತಿ ಸದಸ್ಯರಾ ಯು.ಬಿ.ಲೋಕಯ್ಯ, ಮಂಜಪ್ಪ, ಸುಕುಮಾ ವಾಸುದೇವ ಆಚಾರಿ, ರಮಣಿ, ಪೂವ ಸಾಲಿಯಾನ, ಬಾಬು ದೇವಾಡಿಗ ಮುಂತಾದ ಪ್ರದರ್ಶನದ ನೇತೃತ್ವ ವಹಿಸಿದ್ದರು.



ಎಲ್ಲಾ ಬಡವರಿಗೆ ಹಳದಿ ಕಾರ್ಡ್‌ಗೆ ಒತ್ತಾಯಿಸಿ ಪ್ರದರ್ಶನ

ನ್ಯಾಯಾಲಯ ಪ್ರಕ್ರಿಯೆಯಿಂದ ದೂರ ಸರಿಯುವ ತಂತ್ರ

– ಮಸೀದಿ ನಿರ್ಮಾಣಕ್ಕೆ ಮುಂಚೆ ಮಂದಿರವಿದ್ದ ಬಗ್ಗೆ ಲವಲೇಷ ಸಾಕ್ಷಿಯನ್ನು ತೋರಲಾಗದ ಉತ್ಖನದ ವಿಫಲ ನಾಟಕದ ನಂತರ ಬಿಜೆಪಿ-ಆರ್‌ಎಸ್‌ಎಸ್ ಕೂಟ ತನ್ನ ಏಜೆಂಟರಂತೆ ಶಂಕರಚಾರ್ಯರರನ್ನು ಆಯ್ಕೆ ಮಾಡಿ ಹೊಸದಾಳ ಆರಂಭಿಸಿದೆ.

ರಾಮಮಂದಿರ ನಿರ್ಮಾಣಕ್ಕಾಗಿ ಅಯೋಧ್ಯ ವಿವಾದಿತ ಪ್ರದೇಶವನ್ನು ಕೈಗೊಪ್ಪಿಸಲು ವಾಜಪೇಯಿ ಸರ್ಕಾರದ ಬೆಂಬಲದೊಂದಿಗೆ ಮುಸಲ್ಮಾನರನ್ನು ಒಲೈಸುವ ಪ್ರಯತ್ನಗಳು ಈಚೆಗೆ ನಡೆಯುತ್ತಿವೆ.

ಕಂಚಿ ಶಂಕರಾಚಾರ್ಯ ಜಯೆಂದ್ರ ಸರಸ್ವತಿಯವರ ಇತ್ತೀಚಿನ ಹೊಸ ಪ್ರಯತ್ನಗಳು ಕೆಲವು ಮುಸ್ಲಿಂ ಮುಖಂಡರೊಂದಿಗಿನ ಮಾತುಕತೆಗೆ ಪ್ರಧಾನ ಮಂತ್ರಿಯ ಸಂಪೂರ್ಣ ಬೆಂಬಲವಿದೆ. ಇದು ಇತ್ತೀಚೆಗೆ ನಡೆದ ಜಯೇಂದ್ರ ಸರಸ್ವತಿರವರು ಶಂಕರಾಚಾರ್ಯ ಪೀಠ ಅಲಂಕರಿಸಿ 50 ವರ್ಷವಾದ ಸಂದರ್ಭದ ನೆನಪಿನ ಪ್ರಯುಕ್ತ ಏರ್ಪಡಿಸಿದ್ದ ಸಮಾರಂಭದಲ್ಲಿ ಸ್ಪಷ್ಟಗೊಂಡಿತು.

ವಾಜಪೇಯಿಯುವರು ಈ ಸಮಾರಂಭ ಉದ್ದೇಶಿಸಿ ಮಾತನಾಡುತ್ತಾ ರಾಜಕೀಯ ಪಕ್ಷಗಳನ್ನು ಹೊರತಾಗಿಸಿದ ಮಾತುಕತೆಗಳನ್ನು ನಡೆಸುವ ಮೂಲಕ ವಿವಾದ ಬಗೆಹರಿಸಲು ಕರೆ ನೀಡಿದ್ದಾರೆ ಮತ್ತು ರಾಜಕೀಯದಿಂದ ಮುಕ್ತವಾದರೆ ಈ ವಿಷಯುವನ್ನು ಬಗೆಹರಿಸಬಹುದು ಎಂಬ ವಂಚನಾತ್ಮಕ ಹೇಳಿಕೆ ನೀಡಿದ್ದಾರೆ. 1989 ರಲ್ಲಿ ಬಾಬರಿ ಮಸೀದಿ ಇದ್ದ ಜಾಗದಲ್ಲಿ ರಾಮಮಂದಿರ ನಿರ್ಮಾಣ ಮಾಡುವ ವಿ.ಹೆಚ್.ಪಿ ಚಳುವಳಿಯ ಜೊತೆ ಅವರ ಪಕ್ಷ ಸೇರಿದ್ದಾಗ್ಯೂ ವಿಷಯವನ್ನು ರಾಜಕೀಯದಿಂದ ದೂರ ಇಡಬೇಕೆಂಬ ಪ್ರಧಾನ ಮಂತ್ರಿಗಳ ನಗ್ನ ದಾರ್ಷ್ಟತೆಯ ಬಗ್ಗೆ ಯಾರಾದರೂ ಆಶ್ಚರ್ಯ ವ್ಯಕ್ತಪಡಿಸದೆ ಇರಲಾರರು.

ಬಿ.ಜೆ.ಪಿ, ಮಂದಿರ ಕಟ್ಟುವ ವಿ.ಹೆಚ್.ಪಿ. ಯ ಉದ್ದೇಶದ ಚಳುವಳಿಗೆ ತಾನು ಸಹಾಯ ಮಾಡುವುದಾಗಿ ಇತ್ತೀಚಿನ 3 ದಿನಗಳ ಡೆಲ್ಲಿ ಬೈಠಕ್‌ನಲ್ಲಿ ಆರ್.ಎಸ್.ಎಸ್.ಗೆ ಭರವಸೆ ನೀಡಿದೆ. ಮಸೀದಿ ನಿರ್ಮಾಣಕ್ಕೆ ಮುಂಚೆ ಮಂದಿರ ಇತ್ತು ಎನ್ನುವ ಲವಶೇಷ ಸಾಕ್ಷಿಯನ್ನು ತೋರಿಸಲು ವಿಫಲವಾದ ಉತ್ಖನದ ನಾಟಕದ ನಂತರ ಬಿ.ಜೆ.ಪಿ. ಈಗ ಶಂಕರಾಚಾರ್ಯರ ಮಾತುಕತೆಯ ಕೌಶಲ್ಯದ ಮೇಲೆ ಅವಲಂಬಿತರಾಗಿದ್ದಾರೆ.

ಈ ಜಯೇಂದ್ರ ಸರಸ್ವತಿಯವರೇ ಬಾಬರಿ ಮಸೀದಿ ಇದ್ದ ಜಾಗದಲ್ಲಿ ರಾಮಮಂದಿರ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ. ಇದು ಅವರೇ ಹೇಳಿಕೊಂಡಿರುವಂತೆ ಅವರ ದೀರ್ಘಕಾಲದ ಉದ್ದೇಶವಾಗಿದೆ. ಶಂಕರಾಚಾರ್ಯರವರು ಸ್ವತಃ ಮಾಧ್ಯಮಗಳಿಗೆ ಹೇಳಿರುವುದೇನೆಂದರೆ ಎರಡು ನಂಬಿಕೆಗಳ ಮುಖಂಡರುಗಳ ನಡುವೆ ಗೌರವಾನ್ವಿತ ಒಪ್ಪಂದ ಸಾಧ್ಯವಿದೆ ಅಂದರೆ ರಾಮಮಂದಿರ ನಿರ್ಮಾಣ ಮಾಡಬಹುದು ಎಂದು. ಹೀಗಾಗಿ ಅವರ ಪ್ರಸ್ತಾಪಗಳು ಅಂತಿಮವಾಗಿ ಹೇಳುವುದೇ ಏನೆಂದರೆ ಮಂದಿರ ನಿರ್ಮಾಣಕ್ಕಾಗಿ ಮುಸ್ಲಿಮರು ಹಿಂದೂಗಳಿಗೆ ಆ ಪ್ರದೇಶವನ್ನು ಬಿಟ್ಟುಕೊಡಬೇಕು. ಅದಕ್ಕೆ ಪ್ರತಿಫಲವಾಗಿ ಮುಸಲ್ಮಾನರಿಗೆ ಕಾಶಿ ಮತ್ತು ಮಥುರಾ ಮೇಲಿನ ವಿವಾದ ಎತ್ತಲಾಗುವುದಿಲ್ಲವೆಂದು ಹಾಗೂ ಪ್ರಾಚ್ಯ ವಸ್ತು ಸರ್ವೇಕ್ಷಣೆಯ ನಿಯಂತ್ರಣದಲ್ಲಿರುವ ಸುಮಾರು ನೂರು ಮಸೀದಿಗಳಲ್ಲಿ ನಮಾಜ್ ಸಲ್ಲಿಸಲು ಅವಕಾಶ ನೀಡಲಾಗುವುದೆಂದು ಭರವಸೆ ನೀಡಲಾಗುವುದು. ಶಂಕರಾಚಾರ್ಯರವರ ಪ್ರಯತ್ನ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಮಂಡಳಿಯ ಕೆಲವು ವ್ಯಕ್ತಿಗಳನ್ನು ಒಲೈಸುವ ನಿಟ್ಟಿನಲ್ಲಿ ನಿರ್ದೇಶಿಸಲ್ಪಡುತ್ತಿವೆ. ಹಾಗೆ ಮಾಡುವ ಮೂಲಕ ಶಂಕರಾಚಾರ್ಯರು ಬಿಜೆಪಿ - ಆರ್‌ಎಸ್‌ಎಸ್ ಕೂಟ ಆಯ್ಕೆ ಮಾಡಲ್ಪಟ್ಟಿರುವ ಏಜೆಂಟ್ ಆಗಿ ವರ್ತಿಸುತ್ತಿದ್ದಾರೆ.

ಯಾವುದೇ ರೀತಿಯ ಬಾಹ್ಯ ಒತ್ತಡಗಳು ಇಲ್ಲದೆ ಕೇಂದ್ರ, ಮುಸ್ಲಿಂ ಗುಂಪುಗಳು ಹಾಗೂ ತಾವು ನಡೆಸುತ್ತಿರುವ ಚರ್ಚೆಯನ್ನು ಮುಂದುವರೆಯಲು ಬಿಟ್ಟರೆ ಕೇವಲ 2 ಅಥವಾ 3 ತಿಂಗಳುಗಳಲ್ಲೇ ಅಯೋಧ್ಯೆ ವಿವಾದಕ್ಕೆ ಪರಿಹಾರ ಕಂಡುಕೊಳ್ಳಬಹುದು ಎಂದು ಶಂಕರಾಚಾರ್ಯರು ಜೂನ್ 13 ರಂದು ಮಾಧ್ಯಮಗಳಿಗೆ ಹೇಳಿದ್ದಾರೆ.


ಕಳೆದ ಒಂದು ವರ್ಷದಿಂದ ಶಂಕರಾಚಾರ್ಯ ರವರಿಂದ ನಡೆಯುತ್ತಿರುವ ಈ ಪ್ರಯತ್ನ, ಅಲಹಾಬಾದ್ ಹೈಕೋರ್ಟ್‌ನ ಲಕ್ನೋ ಪೀಠದಲ್ಲಿ ನ್ಯಾಯಾಂಗ ಪ್ರಕ್ರಿಯೆಯಲ್ಲಿರುವ ವಿಷಯವನ್ನು ದೂರ ಸೆಳೆಯುವ ಕುತಂತ್ರವಾಗಿದೆ.

ಆರ್.ಎಸ್.ಎಸ್ ಮತ್ತು ವಿ.ಹೆಚ್.ಪಿ. ಇನ್ನೂ ಒಂದು ಹೊಸ ಬೇಡಿಕೆಯನ್ನು ಎತ್ತುತ್ತಿದೆ. ಮಾತುಕತೆಯ ಮೂಲಕ ಬರುವ ಒಮ್ಮತ ಹಾಗೂ ನ್ಯಾಯಾಂಗದ ತೀರ್ಪಿನ ಹೊರತಾಗಿ ಇನ್ನೂ ಒಂದು ಮೂರನೇ ದಾರಿ ಇದೆ. ಅದೇನೆಂದರೆ ಮಂದಿರ ನಿರ್ಮಾಣಕ್ಕೆ ಅಯೋಧ್ಯಾ ವಿವಾದದ ಪ್ರದೇಶವನ್ನು ಹಸ್ತಾಂತರಿಸಲು ಶಾಸನ ತರುವುದು. ಬಿಜೆಪಿ, ವಾಜಪೇಯಿ ಸರ್ಕಾರ ತೆಗೆದು ಕೊಂಡಿರುವ ನಿಲುವನ್ನು ತಳ್ಳಿ ಹಾಕದೆ ಈ ಕ್ರಮ ವನ್ನು ಬೆಂಬಲಿಸುತ್ತಿದೆ. ಆ ರೀತಿಯ ಕಾನೂನನ್ನು ಆಗ್ರಹಿಸುವ ವಿ.ಹೆಚ್.ಪಿ ತಯಾರಿಸಿರುವ ಅರ್ಜಿಗೆ ಸಹಿ ಹಾಕಲು ತನ್ನ ಸಂಸದರಿಗೆ ತಿಳಿಸಿದೆ. ಆ ರೀತಿಯ ಶಾಸನ ಸಂಸತ್ತಿನಲ್ಲಿ ಬಿ.ಜೆ.ಪಿ.ಯೇತರ ಪಕ್ಷಗಳ ಬೆಂಬಲವಿಲ್ಲದೆ ಅಂಗೀಕಾರ ಆಗಲಾರದು. ಆದರೆ ಆ ಅರ್ಜಿಗೆ ಬೆಂಬಲ ವ್ಯಕ್ತಪಡಿಸುವುದು ಮಂದಿರ ವಿಷಯದಲ್ಲಿನ ಅದರ ನಂಬಿಕೆಯನ್ನು ಖಚಿತಪಡಿಸಿದೆ.

ಮಂದಿರ ವಿಷಯದಲ್ಲಿ ಯಾವುದೇ ಪ್ರಗತಿಯನ್ನು ತೋರಿಸಲು ವಿಫಲವಾದ ವಾಜಪೇಯಿ ಸರ್ಕಾರದಿಂದ ವಿ.ಹೆಚ್.ಪಿ. ಆಶಾಭಂಗ ದಿನೇ ದಿನೇ ಹೆಚ್ಚುತ್ತಿದೆ. ಇತ್ತೀಚಿಗಿನ ಸರ್ಕಾರದ ವಿರುದ್ಧ ಅವರ ಆಸ್ಫೋಟ ಮತ್ತು ಯಾವುದೇ ಮಾತುಕತೆಯ ಭಾಗವಾಗಿ ಕಾಶಿ ಮತ್ತು ಮಥುರಾದ ಮೇಲಿನ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳಲು ಸಿದ್ಧವಿಲ್ಲ ಎಂಬ ಕಠೋರ ನಿಲುವು ಆಶಾಭಂಗಕ್ಕೆ ಒಳಗಾಗಿರುವುದನ್ನು ತೋರಿಸುತ್ತದೆ. ವಾಜಪೇಯಿ, ಅಡ್ವಾನಿ ಮತ್ತು ಅವರ ಕಂಪನಿ ಬಗ್ಗೆ ಹೇಳುವುದಾದರೆ ವಿ.ಹೆಚ್.ಪಿ. ಹುಲಿಯ ಮೇಲಿನ ಸವಾರಿಯಿಂದ ಅಧಿಕಾರಕ್ಕೆ ಬಂದು ತಮ್ಮ ಧರ್ಮಾಂಧ ಅನುಯಾಯಿಗಳಿಗೆ ತಿಳಿಹೇಳುವುದು ಅತ್ಯಂತ ಕಷ್ಟಕರವಾದುದು ಎಂಬುದಾಗಿ ಕಂಡುಕೊಂಡು, ಅದೇ ಬಿಜೆಪಿ ಸ್ವತಃ ಸಂಸತ್ತಿನಲ್ಲಿ ಬಹುಮತ ಗಳಿಸದಿರಲು ತಡೆಒಡ್ಡಿರುವುದಾಗಿದೆ.

ಶಂಕರಾಚಾರ್ಯರ ಮಹತ್ವಾಕಾಂಕ್ಷೆಯ ಹಾಗೂ ಷಡ್ಯಂತರದಿಂದ ಅಥವಾ ವಿಶ್ವ ಹಿಂದೂ ಪರಿಷತ್ತಿನ ಬೆದರಿಕೆ ಮತ್ತು ದಬಾವಣೆಯಿಂದ ಅಯೋಧ್ಯಾ ವಿವಾದ ಬಗೆಹರಿಯಲು ಸಾಧ್ಯವಿಲ್ಲ. ವಾಜಪೇಯಿ ಸರ್ಕಾರ ಅರ್ಥಮಾಡಿಕೊಳ್ಳಬೇಕಾದ್ದು ಏನಂದರೆ 1992 ರಲ್ಲಿ ಬಾಬರೀ ಮಸೀದಿ ಧ್ವಂಸದಿಂದ ನಮ್ಮ ದೇಶ ಕಳೆದುಕೊಂಡಿರುವ ಜಾತ್ಯಾತೀತ ಸ್ವಭಾವ ಮತ್ತು ಘನತೆಯನ್ನು ಪಡೆಯುವುದು ಈ ವಿಷಯ ನ್ಯಾಯಾಲಯದ ತೀರ್ಪಿನ ಮೂಲಕವೇ ಬಗೆಹರಿದರೆ ಮಾತ್ರ ಸಾಧ್ಯವಾಗುತ್ತದೆ.

ನ್ಯಾಯಾಂಗ ಪ್ರಕ್ರಿಯೆಯಿಂದ ದೂರ ಸೆಳೆಯುವ ಯಾವುದೇ ಪ್ರಯತ್ನವನ್ನು ದೃಢ ನಿಶ್ಚಯದಿಂದ ಪರೀಕ್ಷೆಗೆ ಒಳಪಡಿಸಬೇಕಾಗಿದೆ.



ಈ ಬಲಿಯೇಕೆ?

ಜೂನ್ 3ನೇ ತಾರೀಕಿನಂದು ದೇಶಾದ್ಯಂತ ಬೀಸಿದ ತೀವ್ರ ಬಿಸಿಗಾಳಿ ಸಹಸ್ರಾರು ಮುಗ್ಧರನ್ನೇ ಬಲಿತೆಗೆದುಕೊಂಡಿತು. ನಿಖರವಾಗಿ ಹೇಳಬೇಕೆಂದರೆ 1094 ಸಾವುಗಳು ಅಧಿಕೃತವಾಗಿ ವರದಿಯಾಗಿದೆ. ಪವನಶಾಸ್ತ್ರ ಇಲಾಖೆ ನೀಡಿರುವ ನೈರುತ್ಯ ಮುಗಾರಿನ ವಿಳಂಬ ಆಗಮನದ ಮುನ್ಸೂಚನೆ ಮುಂದಿನ ದಿನಗಳ ಭೀಕರತೆಯ ಚಿತ್ರಣವನ್ನು ನಮ್ಮ ಮುಂದಿಡುತ್ತಿದೆ. ಇದು ಮತ್ತೊಂದು ಅನಾವೃಷ್ಟಿಯ ವರ್ಷಕ್ಕೆ ಕಾರಣವಾಗುವಂತಿದೆ.

ಕಳೆದ ಮುಂಗಾರು ವೈಫಲ್ಯದ ಮುಂದುವರಿದ ಭಾಗವಾಗಿ ಇಂದಿಗೂ ಆಂಧ್ರ ಪ್ರದೇಶ, ಗುಜರಾತ್, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಓರಿಸ್ಸಾ, ರಾಜಸ್ಥಾನ, ಮಧ್ಯಪ್ರದೇಶ ಮೊದಲಾದ ರಾಜ್ಯಗಳು ಇಂದಿಗೂ ಬರಪೀಡಿತ ರಾಜ್ಯಗಳಾಗಿಯೇ ಗುರುತಿಸಲ್ಪಡುತ್ತಿವೆ. ಹೀಗಾಗಿ ಗ್ರಾಮೀಣ ಭಾರತದ ಕೋಟ್ಯಾಂತರ ಜನತೆಯ ಬದುಕು ಕಡುಬಡತನದ ತುತ್ತ ತುದಿಗೇರಿ ಅಸಹನೀಯವಾಗಿದೆ. ಉದಾರೀಕರಣದ ಪ್ರತಿಪಾದಕ ಪಂಡಿತರು ಈ ದಾರುಣ ಘಾದವನ್ನು ಮುಂದಿಡುತ್ತಾರೆ. ಜೂನ್ 18 ಮತ್ತು 25 ರ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ವರದಿ ಮಾಡಿರುವಂತೆ ಗ್ರಾಮೀಣ ಜನತೆಯ ಅಸಹಾಯಕ ಬದುಕು ಯಾವ ಮಟ್ಟಕ್ಕೆ ತಲುಪಿದೆಯೆಂದರೆ, ಅವರು ಈ ಹಿಂದೆ ನಿಸರ್ಗದ ವೈಪರೀತ್ಯಗಳನ್ನು ಎದುರಿಸಲು ಅನುಸರಿಸುತ್ತಿದ್ದ ಸಹಜ ಹಾಗೂ ಸಾಂಪ್ರದಾಯಿಕ ಸಿದ್ಧತೆಗಳನ್ನು ಕೂಡ ಮಾಡಿಕೊಳ್ಳಲಾಗುತ್ತಿಲ್ಲ. ಭಾರತ ಈ ಹಿಂದೆ ಕೂಡಾ ತೀವ್ರ ತಾಪಮಾನದ ಹವಾಮಾನವನ್ನು ಎದುರಿಸಿದ್ದರೂ ಇದಕ್ಕೆ ಹೆಚ್ಚೆಚ್ಚು ಜನ ಬಲಿಯಾಗಿರುವುದು ಮಾತ್ರ ಈ ವರ್ಷವೆ. ಕಳೆದ ಶತಮಾನಗಳಲ್ಲಿ ಗ್ರಾಮೀಣ ಭಾರತದ ಸಂಪನ್ಮೂಲದ ದಾಸ್ತಾನು ಮತ್ತು ಶಕ್ತಿ ಸಂಗ್ರಾಹಕರುಗಳ ಸರಿಯಾದ ನಿರ್ವಹಣೆಯಿಲ್ಲದೆ ಸೊರಗಿ ಹೋಗಿರುವುದನ್ನು ದುರಂತಗಳ ನಿಜವಾದ ಕಾರಣವಾಗಿ ವಿವರಿಸಬಹುದು.

ಬಿಸಿ ಗಾಳಿಗೆ ಸಾವಿರ ಜನರ ಬಲಿ

ತಾಪದ ತೀವ್ರತೆಗೆ ಆಂಧ್ರಪ್ರದೇಶದ ಜನರೇ ಹೆಚ್ಚು ಬಲಿಯಾಗಿರುವುದರ ಕಾರಣವನ್ನು ನಾವು ದೂರದಲ್ಲೆಲ್ಲೂ ಹುಡುಕಬೇಕಾಗಿಲ್ಲ. ಇಲ್ಲಿ ಕಳೆದ ವರ್ಷದ ವ್ಯವಸಾಯದ ಅಭಿವೃದ್ಧಿ ಕೇವಲ 17.06 ವರದಿಗಳು ತೋರಿಸುವಂತೆ ಆಂಧ್ರಪ್ರದೇಶ ಚಿಂತಾಜನಕ ಪರಿಸ್ಥಿತಿ ಯಾವ ಹಂತಕ್ಕೆ ತಲುಪಿದೆಯೆಂದರೆ, ಅಲ್ಲಿ ಆತ್ಮಹತ್ಯೆ ಮತ್ತು ಉಪವಾಸದ ಸಾವುಗಳು ಹೆಚ್ಚುತ್ತಿರುವುದಲ್ಲದೆ ಬೃಹತ್ ಸಂಖ್ಯೆಯ ಗ್ರಾಮೀಣ ಜನತೆ ಬದುಕಿಗಾಗಿ ತಮ್ಮ ಹಳ್ಳಿಗಳಿಂದ ವಲಸೆ ಹೋಗುತ್ತಿದ್ದಾರೆ. ಆಹಾರ ನೀರು, ಉದ್ಯೋಗ ಹಾಗೂ ಬದುಕಿನ ಇತರ ಅನಿವಾರ್ಯತೆಗಳ ಪೂರೈಕೆಯ ಕೊರತೆ ಇವೆಲ್ಲದಕ್ಕೂ ಕಾರಣವಾಗಿದೆ ಮತ್ತು ವಾಸ್ತವವಾಗಿ ಇದು ಗ್ರಾಮೀಣ ಜನತೆಯ 'ಎದುರಿಸುವಿಕೆಯ ಸಹಜ ಅಂತರ್ಗತ ಶಕ್ತಿ' ಯನ್ನು ಶೋಷಿಸಿದೆ.

ದೇಶದಲ್ಲಿ ಆಹಾರ ಧಾನ್ಯಗಳ ಲಭ್ಯತೆಯ ಕೇವಲ 1991-2003 ರ ಅಂತರದಲ್ಲಿ 177 ಕಿ.ಗ್ರಾಂನಿಂದ 141.5 ಕ್ಕೆ ಇಳಿದಿದೆ. ನಿವ್ವಳ ಲಭ್ಯತೆ ಎಂದ ಕೂಡಲೇ ಅದು ನಿವ್ವಳ ಅನುಭೋಗ ಎನಿಸುವುದಿಲ್ಲ. ಸುಮಾರು 60 ಕೋಟಿ ಟನ್‌ಗಿಂತಲೂ ಹೆಚ್ಚು ಆಹಾರಧಾನ್ಯಗಳು ಗೋದಾಮಿನಲ್ಲಿ ರಾಶಿಬಿದ್ದಿದ್ದರೂ ಧಾನ್ಯಗಳ ಅನುಭೋಗ ಮಾತ್ರ ಲಭ್ಯ ಅಂಕಿ ಅಂಶಗಳಿಗಿಂತಲೂ ಕಡಿಮೆ ಇದೆ. 2002-03 ರಲ್ಲಿನ ತಲಾ ಆದಾಯದ ಲಭ್ಯತೆಯು ಬಂಗಾಳದ ಕ್ರೂರ ದುರ್ಭಿಕ್ಷವನ್ನು ಎದುರಿಸಿದ ಎರಡನೇ ಮಹಾಭಕ್ಷದ ಕಾಲಕ್ಕಿಂತಲೂ ಕಡಿಮೆಯಾಗಿದೆ. ಇದು ಗ್ರಾಮೀಣ ಹಾಗೂ ನಗರ ಭಾರತದಲ್ಲಿ ಜನತೆ ಪಡೆದುಕೊಳ್ಳುವ ಕ್ಯಾಲೋರಿಗಳ ಕಡಿತಕ್ಕೆ ಕಾರಣವಾಗಿದೆ. ಗ್ರಾಮೀಣ ಭಾರತದಲ್ಲಿ ಈ ಸೂಚ್ಯಾಂಕವು 1983-1998 ರ ಅವಧಿಯಲ್ಲಿ 100 ರಿಂದ 87ಕ್ಕೆ ಇಳಿದಿದೆ. ಇದು-1993-2003 ದ ಅವಧಿಯಲ್ಲಿನ ಭಾರತದ ಅತ್ಯಲ್ಪ ಅಂದರೆ ಕೇವಲ ಶೇ. 0.58 ಉದ್ಯೋಗದ ಬೆಳವಣಿಗೆಯನ್ನು ತೋರಿಸಿ, 1987-94 ರ ಅವಧಿಯಲ್ಲಿ ಶೇ.2.03 ಉದ್ಯೋಗದ ಬೆಳವಣಿಗೆಯ ಮಟ್ಟವನ್ನು ಹೋಲಿಸಿ ವಾಸ್ತವವನ್ನು ತೆರೆದಿಡುತ್ತದೆ.

ಈಗಾಗಲೇ ಭಾರತದ ಗ್ರಾಮೀಣ ಜನತೆಯ ಮೇಲೆ ಕಳೆದ ದಶಕಗಳಿಂದ ಹಗೆ ತೀರಿಸಿಕೊಂಡಿರುವ ಅನಾವೃಷ್ಟಿ ಈ ವರ್ಷ ಮತ್ತೆ ಗ್ರಾಮೀಣ ಭಾರತದ ಬೆನ್ನೆಲುಬನ್ನೇ ಮುರಿಯುವ ಪರಿಸ್ಥಿತಿ ಇದೆ.

ದನಕರುಗಳು ಮತ್ತು ಮೇವಿನ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಗೋವುಗಳ ರಕ್ಷಣೆಯ ಹೆಸರಿನಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಮತ್ತು ಪ್ರಚಾರ ಪಡೆಯುವ ನಾಟಕ ಒಂದು ವ್ಯಂಗ್ಯವಲ್ಲದೆ ಮತ್ತಿನ್ನೇನು?

ಸರಕಾರದ ಬೃಹತ್ ಪ್ರಮಾಣದ ಮಧ್ಯಪ್ರವೇಶಿಸುವಿಕೆ ಮಾತ್ರ ಇಂತಹ ಗ್ರಾಮೀಣ ಒತ್ತಡವನ್ನು ಸಮರ್ಪಕವಾಗಿ ನಿಭಾಯಿಸ ಬಹುದು. ಉದ್ಯೋಗಾವಕಾಶದ ಸೃಷ್ಟಿಯ ಯೋಜನೆಗಳೊಂದಿಗೆ ಸಮರ್ಪಕ ಸಂಪನ್ಮೂಲಗಳನ್ನು ಒದಗಿಸುವ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕು. ಆದರೆ ವಾಜಪೇಯಿ ಸರಕಾರ ಈ ಕ್ರಮಗಳನ್ನು ಕೈಗೊಳ್ಳುವಲ್ಲಿ ಸಂಪೂರ್ಣ ನಿರಾಸಕ್ತಿಯನ್ನು ತೋರಿಸುತ್ತದೆ. ಕೇವಲ ಅಧಿಕಾರಕ್ಕಂಟಿಕೊಂಡು ಭ್ರಷ್ಟ ಹಾಗೂ ಹೊಲಸು ರಾಜಕಾರಣದೊಂದಿಗೆ ದೇಶವನ್ನು ಲೂಟಿ ಮಾಡುವುದೇ ಇವರ ಪ್ರಥಮ ಆದ್ಯತೆಯ ಕೆಲಸವಾಗಿರುವಾಗ ಜನತೆಯ ಅಸಹನೀಯ ಬದುಕಿನತ್ತ ದೃಷ್ಟಿ ಹಾಯಿಸಲೂ ವಾಜಪೇಯಿ ಸರಕಾರಕ್ಕೆ ಸಮಯ ಎಲ್ಲಿಂದ ದೊರೆಯಬೇಕು.

ಅಮೆರಿಕಾದ ಬಾಲಂಗೋಚಿಯನ್ನಾಗಿ ಮಾ

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಆರ್‌ಎಸ್‌ಎಸ್/ ಭಾಜಪ ಕೊಟಿ ನಮ್ಮ ದೇಶದ ಪರಂಪರಾಗತ ಅಲಿಪ್ತ ನೀತಿಯನ್ನು ಬುಡಮೇಲು ಮಾಡಿ, ದೇಶವನ್ನು ಹೆಚ್ಚುಹೆಚ್ಚಾಗಿ ಸಾಮ್ರಾಜ್ಯಶಾಹಿ ಅಮೆರಿಕಾದ ತೆಕ್ಕೆಗೆ ಕೊಂಡೊಯ್ಯುವ ಪರೋಕ್ಷ ಹಾಗೂ ಪ್ರತ್ಯಕ್ಷ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅತ್ಯಂತ ವ್ಯವಸ್ಥಿತವಾಗಿ ಹೂಡಿರುವ ಈ ಸಂಚಿನ ಹತ್ತು ಹಲವು ಆಯಾಮಗಳು ದಿನೇ ದಿನೇ ಅನಾವರಣಗೊಳ್ಳುತ್ತಿವೆ ಮತ್ತ ದೇಶದ ಶಾಂತಿಪ್ರಿಯ ಹಾಗೂ ಅಲಿಪ್ತ ನೀತಿಯನ್ನು ಬೆಂಬಲಿಸುವ ಬಹುಭಾಗ ಜನತೆಯನ್ನು ಕಂಗೆಡಿಸಿವೆ. ಇತ್ತೀಚೆಗೆ ಉಪಪ್ರಧಾನಿ ಲಾಲಕೃಷ್ಣ ಅಡ್ವಾಣಿ ಅಮೆರಿಕಾ ಮತ್ತು ಬ್ರಿಟನ್‌ಗೆ ಒಂದು ವಾರದ ಭೇಟಿ ನೀಡಿದ್ದು, ಅದರ ವಿದ್ಯಮಾನಗಳನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

ಹರಕಿಷನ್ ಸಿಂಗ್ ಸುರ್ಜಿತ್

ಎಳೆಎಳೆಯಾಗಿ ವಿಶ್ಲೇಷಿಸಿದ್ದಾರೆ. ಅವರ ಲೇಖನದ ಭಾವಾನುವಾದವನ್ನು ನಮ್ಮ ಓದುಗರಿಗಾಗಿ

ರತ್ನಾಕರ ಶೆಣೈ ನೀಡಿದ್ದಾರೆ.

ಉಪಪ್ರಧಾನಿ ಲಾಲಕೃಷ್ಣ ಅಡ್ವಾಣಿಯವರ ಪ್ರಸಕ್ತ ಅಮೆರಿಕಾ ಭೇಟಿ ಬೇರೆನಿಲ್ಲದಿದ್ದರೂ, ನಮ್ಮ ದೇಶದ ಹೆಸರಿಗೆ ಕಳಂಕ ತಂದ ಘಟನೆಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಕಳೆದ ಹಲವಾರು ದಶಕಗಳಿಂದ ಸಂಘಪರಿವಾರ ನಮ್ಮ ದೇಶ ಪಾಲಿಸಿಕೊಂಡು ಬಂದಿದ್ದ ಅಲಿಪ್ತ ನೀತಿಯನ್ನು ಕೈಬಿಟ್ಟು ಅಮೆರಿಕದ ಜತೆ ಕೈ ಗೂಡಿಸಬೇಕೆಂದು ಒತ್ತಾಯ ಮಾಡುತ್ತಲೇ ಇತ್ತು. ಸಹಜವಾಗಿ ಭಾಜಪ ನೇತೃತ್ವದ ಕೇಂದ್ರ ಸರ್ಕಾರದ ಕ್ರಮಗಳ ಬಗ್ಗೆ ಚಕಿತರಾಗುವವರು ಬಹು ಕಡಿಮೆ. ಅಚ್ಚರಿಯ ಸಂಗತಿಯೆಂದರೆ ಎನ್‌ಡಿಎದ ಇತರ ಅಂಗ ಪಕ್ಷಗಳು ಅಲಿಪ್ತ ನೀತಿಯ ಪರವಾಗಿದ್ದೂ ಸಹ, ಬಾಜಪದ ಈ ನಾಚಿಕೆಗೇಡಿ ಕೃತ್ಯವನ್ನು ನೋಡಿಯೂ ಸುಮ್ಮನಿರುವುದು.

ನಮ್ಮ ದೇಶ ಅನುಸರಿಸಿಕೊಂಡು ಬಂದ ಅಲಿಪ್ತ ನೀತಿ, ಜವಾಹರಲಾಲ ನೆಹರೂ ಆಗಲೀ ಅಥವಾ ಬೇರೆ ನಾಯಕರಾಗಲೀ ಅಥವಾ ಯಾವುದೇ ಒಂದು ಪಕ್ಷವಾಗಲೀ ಪ್ರತಿಪಾದಿಸಿದ ನೀತಿಯಲ್ಲ. ಎರಡನೇ ಮಹಾಯುದ್ಧದ ನಂತರದ ಬೆಳವಣಿಗೆಗಳು ಹಾಗೂ ಅದರ ವಿದ್ಯಮಾನಗಳು ರೂಪಿಸಿದ ನೀತಿ ಅದು. ಈ ಕಾಲಘಟದಲ್ಲೇ ಜಗತ್ತಿನ ಹಲವು ದೇಶಗಳು ತಮ್ಮ ಸಾಮ್ರಾಜ್ಯಶಾಹಿ ಸಂಕೋಲೆಗಳನ್ನು ಕಳಚಿಕೊಂಡು ಸಾರ್ವಭೌಮತೆಯನ್ನು ಪಡೆದವು. ಅನತಿ ಸಮಯದಲ್ಲೇ ಇಂತಹ ನವ ಸ್ವತಂತ್ರ ದೇಶಗಳು ಜಾಗತಿಕ ರಾಜಕಾರಣದಲ್ಲಿ ದೊಡ್ಡ ಶಕ್ತಿಯಾಗಿ ಬೆಳೆದುಬಂದವು ಮತ್ತು ವಿಭಿನ್ನ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳ ಹೊರತಾಗಿಯೂ ಸ್ವತಂತ್ರ ಅಭಿವೃದ್ಧಿಯ ಸಮಾನ ಆಶಯಗಳನ್ನು ಹೊಂದಿದ್ದವು. ಸಾಮ್ರಾಜ್ಯಶಾಹಿ ದೇಶಗಳಿಂದಾದ ಅವ್ಯಾಹತ ಲೂಟಿ ಮತ್ತು ದಬ್ಬಾಳಿಕೆಯನ್ನು ಈ ನವ ಸ್ವತಂತ್ರ ದೇಶಗಳು ಅನುಭವಿಸಿದ್ದವು ಮತ್ತು ಸಹಜವಾಗಿಯೇ ಅಲಿಪ್ತ ಧೋರಣೆಯನ್ನು ತಮ್ಮದಾಗಿಸಿಕೊಂಡಿದ್ದವು. ಈ ಸನ್ನಿವೇಶದಲ್ಲೇ ಅಲಿಪ್ತ ವಿದೇಶಾಂಗ ನೀತಿ ಮೂಡಿಬಂದಿದ್ದು. ಭಾರತ-ಚೀನಾದ 'ಪಂಚಶೀಲ' ಘೋಷಣೆಯಾಗಲಿ, ಇಂಡೋನೇಶಿಯಾದಲ್ಲಿ ಜರುಗಿದ ಬಾಂಡುಂಗ್ ಸಮಾವೇಶವಾಗಲೀ ಅಥವಾ ಬೆಲ್ಗ್ರೇಡ್‌ನಲ್ಲಿ ರೂಪುತಳೆದ ಅಲಿಪ್ತ ಚಳುವಳಿಯಾಗಲೀ ಎಲ್ಲವೂ ನವ ಸ್ವತಂತ್ರ ರಾಷ್ಟ್ರಗಳ ಆಶಯಗಳ ಅಭಿವ್ಯಕ್ತಿಗಳೇ ಆಗಿದ್ದವು. ಸಹಜವಾಗಿಯೇ ಪ್ರಾರಂಭದಲ್ಲಿ ಬೆರಳೆಣಿಕೆಯಷ್ಟಿದ್ದ ಅಲಿಪ್ತ ಚಳುವಳಿಯ ಸದಸ್ಯತ್ವ ಬೆಳೆದು 113 ರಷ್ಟಾಗಿ, ವಿಶ್ವ ಸಂಸ್ಥೆಯಲ್ಲಿ ಪ್ರಬಲ ಶಕ್ತಿಯಾಗಿದ್ದೇ ಅಲ್ಲದೇ, ಸೂಯೆಜ್ ಬಿಕ್ಕಟ್ಟು ಮತ್ತು ಕಾಂಗೋ, ಕೋರಿಯಾ ಹಾಗೂ ವಿಯೆಟ್ನಾಂ ನ ವಿಷಯದಲ್ಲಿ ಮಹತ್ವದ ಪಾತ್ರ ವಹಿಸುವಂತಾಯಿತು. ಅಷ್ಟಲ್ಲದೇ ಇನ್ನೂ ಸಾಮ್ರಾಜ್ಯಶಾಹಿ ಸಂಕೋಲೆಯಲ್ಲಿದ್ದ ನಮೀಬಿಯಾದಂತಹ ದೇಶಗಳ ಸ್ವಾತಂತ್ರ್ಯಕ್ಕೂ ನಾಂದಿ ಹಾಡಿತ್ತು. ದಕ್ಷಿಣ ಆಫ್ರಿಕಾದ ಆಗಿನ ವರ್ಣದ್ವೇಷೀ ಪ್ರಭುತ್ವದ ವಿರುದ್ಧ ವಿಶ್ವವ್ಯಾಪಿ ನಿಲುವನ್ನು ರೂಪಿಸುವಲ್ಲೂ ಅಲಿಪ್ತ ಚಳುವಳಿಯ ಭೂಮಿಕೆ ಪ್ರಧಾನವಾಗಿತ್ತು.

ಅಲಿಪ್ತ ಚಳುವಳಿಯ ಮೂಲ ಸೂತ್ರಗಳಾದ - ಪ್ರತಿಯೊಂದು ದೇಶದ ಸ್ವತಂತ್ರ ಅಭಿವೃದ್ಧಿಗಾಗಿ ಕಾರ್ಯನಿರತವಾಗುವಿಕೆ; ಸೈನಿಕ ಬಲಪ್ರಯೋಗ ಅಥವಾ ಇನ್ನಾವುದೇ ಕ್ರಮಗಳ ಮೂಲಕ ಯಾವುದೇ ದೇಶವೊಂದರ ಮೇಲೆ ಹಿಡಿತ ಸಾಧಿಸಬಯಸುವ ಸಾಮ್ರಾಜ್ಯಶಾಹಿ ಪ್ರಯತ್ನಗಳ ವಿರೋಧಿಸುವಿಕೆ; ಮಿಲಿಟರಿ ಬಣಗಳಿಂದ ದೂರ ಉಳಿಯುವಿಕೆ; ದೇಶಗಳ ನಡುವಿನ ಯಾವುದೇ ವಿವಾದದ ಶಾಂತಿಯುತ ಮಾತುಕತೆಗಳ ಮೂಲಕ ಬಗೆಹರಿಸುವಿಕೆ ಮತ್ತು ಜಗತ್ತಿನೆಲ್ಲೆಡೆ ಶಾಂತಿಗಾಗಿ ಸಂಪೂರ್ಣ ನಿಶ್ಶಸ್ತ್ರೀಕರಣಕ್ಕಾಗಿ ಕರೆ - ಇವೆಲ್ಲವೂ ಅಲಿಪ್ತ ಚಳುವಳಿಯ ದಿಕ್ಸೂಚಿಗಳಾಗಿದ್ದವು.

ಭಾರತ ಅಲಿಪ್ತ ಚಳುವಳಿಯ ಪ್ರಧಾನ ಭೂಮಿಕೆಯಾಗಿ ಅತ್ಯಂತ ಹಿರಿಮೆಯನ್ನು ಗಳಿಸಿತ್ತು. ದಕ್ಷಿಣ ಆಫ್ರಿಕಾದ ನೆಲ್ಸನ್ ಮಂಡೇಲಾ ಸೆರೆಮನೆಯಿಂದ ಬಿಡುಗಡೆಯಾದ ನಂತರ ಕಾಲಿರಿಸಿದ ಮೊದಲ ಅನ್ಯದೇಶ ಭಾರತವಾಗಿದ್ದನ್ನು ನೆನಪಿಸಿಕೊಳ್ಳಬೇಕು. ಅಂತೆಯೇ ನಮೀಬಿಯಾದ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಂಡ ಭಾರತದ ನಿಯೋಗಕ್ಕೆ ದೊರಕಿದ ಅಪೂರ್ವ ಸ್ವಾಗತ ಕೂಡಾ. ಎರಡು ದಶಕಗಳ ಹಿಂದೆ ನವದೆಹಲಿಯಲ್ಲಿ ನಡೆದ ಶೃಂಗಸಭೆಯಲ್ಲಿ ಅಲಿಪ್ತ ಚಳುವಳಿಯ ನೇತೃತ್ವವನ್ನು ಫಿಡೆಲ್ ಕ್ಯಾಸ್ಟ್ರೋ ಭಾರತಕ್ಕೆ ಹಸ್ತಾಂತರಿಸಿದ ಸಂದರ್ಭದಲ್ಲಿನ ಸಂಭ್ರಮೋಲ್ಲಾಸವನ್ನು ಯಾರು ತಾನೆ ಮರೆಯಬಲ್ಲರು.

ಆದುದರಿಂದಾಗಿಯೇ ಅಲಿಪ್ತ ಧೋರಣೆ ಇಡೀ ಭಾರತ ದೇಶದ ಸಹಮತ ಜನ್ಯ ವಿದೇಶಾಂಗ ನೀತಿಯಾಗಿ ರೂಪುಗೊಂಡಿತು. ಮಾತ್ರವಲ್ಲ, ಕೆಲವರನ್ನು ಬಿಟ್ಟರೆ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಶಕ್ತಿಗಳು ಈ ನೀತಿಯನ್ನು ಬೆಂಬಲಿಸಿದ್ದವು. ಅಷ್ಟೇಕೆ 1977-79 ರಲ್ಲಿ ದೇಶದ ವಿದೇಶಾಂಗ ಸಚಿವರಾಗಿದ್ದ ಸ್ವತಃ ವಾಜಪೇಯಿಯವರೇ ಈ ನೀತಿಯ ವಿರುದ್ಧ ಸೊಲ್ಲೆತ್ತುವ ಸಾಹಸ ಮಾಡಲಿಲ್ಲ!

ಸಣ್ಣ ಪಕ್ಷಗಳ ಬೆನ್ನೇರಿ ಅಧಿಕಾರಕ್ಕೆ ಬಂದ ಭಾಜಪ ಈ ನೀತಿಯನ್ನೇ ಬುಡಮೇಲು ಮಾಡಲು ಆರಂಭಿಸಿತು. 1998 ರಲ್ಲಿ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ನಿಶ್ಶಸ್ತ್ರೀಕರಣದ ಪರವಾದ ವಿಶ್ವವ್ಯಾಪಿ ಆಶಯಗಳಿಗೆ ಆಘಾತವನ್ನು ತಂದೊಡ್ಡುವ ರೀತಿಯಲ್ಲಿ ಪರಮಾಣು ಸ್ಫೋಟ ನಡೆಸಿತು ಭಾಜಪ ಸರ್ಕಾರ. ಸಹರಾವಿ ಅರಬ್ ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವುದರ ಮೂಲಕ ಅಮೆರಿಕೆಯ ಬಾಲಂಗೋಚಿಯಾಗಿದ್ದ ಮೊರಕ್ಕೊವನ್ನು ಸಂತುಷ್ಟಗೊಳಿಸುವ ಪ್ರಯತ್ನ ನಡೆಸಿತು. ಇಸ್ರೇಲ್ ನಡೆಸಿದ ಪಾಲೇಸ್ತಿನಿಯರ ಮೇಲಿನ ಹಲ್ಲೆ ಹಾಗೂ ಮಾರಣಹೋಮಗಳ ಬಗ್ಗೆ ಯಾವುದೇ ಚಕಾರವೆತ್ತದೇ ಸುಮ್ಮನಿತ್ತು. ಅಮೆರಿಕ ಮತ್ತು ನ್ಯಾಟೋ ಪಡೆಗಳು ಯುಗೋಸ್ಲಾವಿಯಾದ ಮೇಲೆ ನಡೆಸಿದ ಧಾಳಿಯನ್ನು ಭಾರತ ಸರ್ಕಾರ ಖಂಡಿಸಲಿಲ್ಲ. ಮಾತ್ರವಲ್ಲ ಅಫಘಾನಿಸ್ತಾನದ ಮೇಲೆ ಅಮೆರಿಕ ದಾಳಿ ನಡೆಸಿದಾಗ ಸಹಾಯ ಹಸ್ತವನ್ನು ಚಾಚುವ ನಾಚಿಕೆಗೇಡಿನ ವರ್ತನೆ ತೋರಿಸಿತು ಕೂಡಾ. ಅಂತಹ ಸಹಾಯದ ಪ್ರಸ್ತಾಪ ತುಚ್ಛವಾಗಿ ತಿರಸ್ಕಾರವಾದದ್ದು ಬೇರೆಯೇ ವಿಷಯ!

ಅಮೆರಿಕ ಮತ್ತು ಬ್ರಿಟನ್ ಇರಾಕ್ ವಿರುದ್ಧ ನಡೆಸಿದ ದಾಳಿಯ ಸಂದರ್ಭದಲ್ಲಂತೂ ಭಾಜಪದ ಸಾಮ್ರಾಜ್ಯಶಾಹಿ ಪರವಾದ ಲಕ್ಷಣಗಳು ಹಿಂದೆಂದಿಗಿಂತಲೂ ನಿಖರವಾಗಿ ಬೆಳಕಿಗೆ ಬಂದವು. ದಿನಗಳು ಕಳೆದಾಗ್ಯೂ ವಾಜಪೇಯಿ ಸರ್ಕಾರ ಅಮೆರಿಕೆಯ ಧಾಳಿಯನ್ನು ಖಂಡಿಸಲೂ ಇಲ್ಲ. ಇರಾಕಿನ ನೆಲದಿಂದ ಕೂಡಲೇ ಸೈನ್ಯ ವಾಪಸಾತಿಗೆ ಒತ್ತಾಯಿಸಲೂ ಇಲ್ಲ. ವಿಶಾಲಸ್ತ
ಜನಾಕ್ರೋಶಕ್ಕೆ ಸ್ವಲ್ಪವೇ ಮಣಿದ ಸಕಾ
ಸಂಸತ್ತಿನಲ್ಲಿ ಅಮೆರಿಕ ಹಾಗೂ ಬ್ರಿಟನ್ನಿನ ಕ್ರಮಗ
'ವಿಷಾದ' ವ್ಯಕ್ತಪಡಿಸುವ (ಖಂಡಿಸಲು ಅ
ನಿಲುವಳಿ ಮಂಡಿಸಲು ಮುಂದಾಯಿತು. ಯ
ನಡೆದ ಸಂದರ್ಭದಲ್ಲೂ ಸಹ, ವಾಜಪೇ
ಸರ್ಕಾರ ಇರಾಕಿನ ದುರದೃಷ್ಟ ಜನರಿಗೆ ಬೆಂ
ನೀಡುವ ಯಾವುದೇ ಪ್ರಸ್ತಾಪ ಮಾಡಲಿಲ್ಲ.


ಈ ಸಂದರ್ಭದಲ್ಲೇ ಅಡ್ವಾಣಿಯವರ ಅಮೆ
ಭೇಟಿ ನಡೆದಿದೆ. ಅಮೆರಿಕೆಯ ಉಪಾಧ್ಯಕ್ಷ ಡ
ಚೇನಿಯ ಅತಿಥಿಯಾಗಿ ಅಡ್ವಾಣಿ ಅಮೆರಿ
ಹೋಗುವುದೆಂದು ಕಳೆದ ತಿಂಗಳಲ್ಲಿ ಅಮೆರಿ

ಅಡ್ವಾಣಿ ಅಮೆರಿಕಾ ಪ್ರವಾ

ರಕ್ಷಣಾ ಕಾರ್ಯದರ್ಶಿ ಡೋನಾಲ್ಡ್ ರಮ್ಸ್‌ಫ
ಪಾಕಿಸ್ತಾನ ಮತ್ತು ಭಾರತಕ್ಕೆ ಭೇಟಿ ನೀಡಿ
ನಿರ್ಧಾರವಾಗಿತ್ತು. ಆ ಸಮಯದಲ್ಲೇ 'ಸುಭ
ಕಾರ್ಯಕ್ಕೆ ಭಾರತದ ಸೈನ್ಯದ ತುಕಡಿಯೊಂ
ಇರಾಕಿಗೆ ಕಳುಹಿಸುವಂತೆ ಅನೌಪಚಾ
ಮನವಿಯನ್ನು ರಮ್ಸ್‌ಫೆಲ್ಡ್ ಮಾಡ
ನಿಚ್ಚಳವಾಗಿತ್ತು. ಅಂತಹ ಯಾವುದೇ ಮ
ಮಾಡಲಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿ
ಭಾರತ ಸರ್ಕಾರ, ಅದೇ ಉಸಿರಿನಲ್ಲಿ ವಿಶ್ವ
ಆದೇಶ ನೀಡಿದ್ದಲ್ಲಿ ಭಾರತ ತನ್ನ ಸೈನ್ಯವನ್ನು ಇರ
ಕಳುಹಿಸಲು ಸಿದ್ಧ ಎಂದು ಸಾರಿತು ಕೂ
ರಮ್ಸ್‌ಫೆಲ್ಡ್ ಮನವಿ ಮಾಡಿದ್ದು ನಿಜ ಎಂ
ಇದರಿಂದ ಸ್ಪಷ್ಟವಾಯಿತು.

ಬಹು ದೊಡ್ಡದೇ ಆದ ಅಡ್ವಾಣಿಯ
ನಿಯೋಗದಲ್ಲಿ ಸರ್ಕಾರಿ ಅಧಿಕಾರಿಗಳು ಮಾತ್ರ
ಅವರ ಮತ್ತು ಸಚಿವರ ಕುಟುಂಬದ ಸದ
ಇದ್ದು, ಅದು ಸರ್ಕಾರಿ ವೆಚ್ಚದಲ್ಲಿ ಸಕು
ಪ್ರವಾಸವಾಗಿತ್ತು. ಜೂನ್ 11 ರ ಏಷಿ
ಏಜ್‌ನ ವರದಿಯ ಅನುಸಾರ ಅಮೆರಿಕೆಯ
ಬ್ರಿಟನ್ನಿನ ಭಾರತೀಯ ದೂತವಾಸಗಳಿಗೆ
ಪಕ್ಷ 45 ವಾಹನಗಳು ಮತ್ತು 35 ಹೊ
ಕೋಣೆಗಳನ್ನು ಕಾದಿರಿಸಲು ಆದೇಶ ನೀಡಲಾ

ಅದೇನೇ ಇರಲಿ, ಭಾರತದ ಉಪ ಪ
ಮಾತ್ರ ವಾಷಿಂಗ್ಟನ್‌ನಲ್ಲಿ ಕಾಲಿಟ್ಟೊಡ
ಯಾವುದೇ ಎಗ್ಗಿಲ್ಲದೇ ಭಾರತದ
ತುಕಡಿಯೊಂದನ್ನು ಇರಾಕಿಗೆ ಕಳುಹಿಸುವುದ
ಕಮ್ಮಿ ಒಪ್ಪಿಯೇ ಬಿಟ್ಟರು. ಅಮೆರಿ
ನಾಯಕತ್ವದಲ್ಲಿ ಈ ತುಕಡಿ ಕ
ನಿರ್ವಹಿಸಬೇಕಾಗುತ್ತದೆ ಎಂಬ ವ
ಸಂದರ್ಭದಲ್ಲೇ ಈ ಒಪ್ಪಿಗೆ ನೀಡಿದ್ದು ಗಮ
ಇಲ್ಲಿ ನಾವು ಒಂದು ವಾಸ್ತವ ಸಂಗತಿ
ಗಮನಿಸಬೇಕಾಗುತ್ತದೆ. ಇರಾಕನ್ನು ಆಕ್ರಮಿ
ಅಮೆರಿಕೆಯ ಸೇನಾ ಪಡೆಗಳು ದಿನನಿತ್ಯ
ಇರಾಕ್ ಜನತೆಯ ಆಕ್ರೋಶವನ್ನು ಎದುರಿ
ಈ ಪರಿಸ್ಥಿತಿಯೇ ಇರಾಕಿನಲ್ಲಿ 'ಸುವ್ಯವಸ್ಥೆ
ರೂಪಿಸುವ ಸಲುವಾಗಿ ಸೇನಾ ತುಕಡಿ
ಕಳಿಸುವಂತೆ ಭಾರತ, ಪಾಕಿಸ್ತಾನ
ಪೋಲೆಂಡ್‌ಗಳಿಗೆ ಅಮೆರಿಕ ಮನವಿ ಸ
ಕಾರಣವಾಗಿದೆ. ವಾಸ್ತವವಾಗಿ ಇದು ಅ
ಹಿತಾಸಕ್ತಿಗಳು ಮತ್ತು ಅಮೆರಿಕೆಯ ಸ್ಟ್ರಾ
ಇರಾಕ್ ಜನತೆಯ ಆಕ್ರೋಶದಿಂದ
ಸಲುವಾಗಿಯೇ ನಡೆಸಿರುವ
ಅಮೆರಿಕದಾದ್ಯಂತ ವ್ಯಾಪಕ ಪ್ರತಿಭಟನೆ
ಹಾಕಿದ, ವಿಯೆಟ್ನಾಂ ಸಮರದಲ್ಲಿ ತಮ್ಮ
ಬಲ ಅನುಭವಿಸಿದ ಅಪಾರ ಪ್ರಮಾಣದ
ಹಾನಿಯನ್ನು ಅಮೆರಿಕೆಯ ನಾಯಕರು ಪ
ಅದೇ ಅನುಭವದ ಪುನಾರವರ್ತನೆ
ಸಹಜವಾಗಿಯೇ ಬೇಕಾಗಿಲ್ಲ. ಬದಲಾ



ಹುನ್ನಾರ

ಗಳ ಸೈನಿಕ ತುಕಡಿಗಳನ್ನು ಬಾಡಿಗೆ ಸೈನಿಕರಂತೆ ಯೋಗಿಸಿ ಕೊಳ್ಳುವ ಹುನ್ನಾರ ಅವರದ್ದು. ನ್ 10 ರ ಏಷಿಯನ್ ಏಜ್ ನ ನವೊಂದರ ಪ್ರಕಾರ 'ದಿನನಿತ್ಯ ಇರಾಕಿನ ತೆಯ ವಿರೋಧ ಮತ್ತು ಅದರಿಂದಾಗಿ ಭವಿಸಬೇಕಾಗಿರುವ ಹಾನಿಯನ್ನು ಗಟ್ಟಲೋಸುಗ ಅಮೆರಿಕ ತನ್ನ ಸೈನ್ಯವನ್ನು ತೆಗೆದು, ಅನ್ಯ ದೇಶಗಳ ಸೇನಾ ತುಕಡಿಗಳನ್ನು ಂಚೂಣಿಯಲ್ಲಿಡಲು ಕಾತುರವಾಗಿದೆ. ಸ್ತಾನ ಇನ್ನೂ ಯಾವುದೇ ನಿರ್ಧಾರ ರುಕೊಂಡಿಲ್ಲ. ಆದರೆ ಪೋಲಂಡಿನ ಸೇನಾ ಡಿ ಈಗಾಗಲೇ ಇರಾಕನ್ನು ಪ್ರವೇಶಿಸಿದೆ.

ದ ಹಿಂದೂ ಪತ್ರಿಕೆಯಲ್ಲಿನ ಅಮೆರಿಕೆಯ ದೂತವಾಸದ ಅಧಿಕಾರಿಗಳು ಈಗಾಗಲೇ ಭಾರತೀಯ ಸೇನೆಯ ವರಿಷ್ಟ ಕಾರಿಗಳೊಡನೆ ಸಮಾಲೋಚನೆ ಸಿದ್ದಾರೆಂದೂ, ಕೊನೆ ಪಕ್ಷ ಒಂದು ಣಾ ತುಕಡಿಯನ್ನಾದರೂ ನಿಸುವಂತೆ ಭಾರತದ ಮೇಲೆ ತ್ತಡ ಹೇರುವಲ್ಲಿ ಅಮೆರಿಕೆಯ ರುಂಭಾರ ಕಛೇರಿ ತಪಾಗಿದೆಯೆಂದೂ ವರದಿಗಳು ವೆ. ಈ ನಡುವೆ ಭಾರತೀಯ ರ, ಒಂದು ತುಕಡಿಯನ್ನು ನಿಸಲು ಸಿದ್ಧತೆಗಳನ್ನು ನಡೆಸುತ್ತಿದೆ ು ವರದಿಗಳೂ ಬಂದಿವೆ.

ವಾಷಿಂಗ್ಟನ್‌ನಲ್ಲಿದ್ದಾಗ ಅಮೆರಿಕೆಯ ್ಟ್ರೀಯ ಭದ್ರತಾ ಸಲಹಕಾರಿಣಿ ುತಿ ಕೊಂಡೊಲೀಜ್ಜಾ ರೈಸ್ ಹಾಗೂ ಅಡ್ವಾಣಿ ತುಕತೆ ನಡೆಸುತ್ತಿದ್ದಾಗ, ಅಧ್ಯಕ್ಷ ಬುಷ್ ನಕ್ಕಾಗಿ ಅಲ್ಲಿಗೆ ಆಗಮಿಸಿದರು. ಕಳೆದ ತಿಂಗಳು ೇಶ್ ಮಿಶ್ರಾರವರು ಶ್ರೀಮತಿ ರೈಸ್ ಜೊತೆ ತುಕತೆ ನಡೆಸುತ್ತಿದ್ದಾಗ ಕೂಡಾ ಬುಷ್ ಇದೇ ಅಚನಕ್ಕಾಗಿ ಅಲ್ಲಿ ಪ್ರತ್ಯಕ್ಷರಾಗಿದ್ದರು. ನಕ್ಕಾಗಿ (ಅಂದರೆ ಯಾವುದೇ ಪೂರ್ವ ರ್ಣರವಿಲ್ಲದೆ) ಆಗಮಿಸಿದ ಬುಷ್, ಸುಮಾರು ನಿಮಿಷಗಳ ಕಾಲ ಅಡ್ವಾಣಿಯವರೊಡನೆ ಾಲೋಚನೆ ನಡೆಸಿದರು. ಇದರ ಹಿಂದಿನ ೂ ರಕ್ಷಣಾ ಕಾರ್ಯದರ್ಶಿ ರಮ್ಸ್‌ಫೆಲ್ಡ್ ಸಹ ೀ ರೀತಿ ಅಚನಕ್ಕಾಗಿ ಆಗಮಿಸಿ ್ವಾಣಿಯರೊಡನೆ ಮಾತುಕತೆ ನಡೆಸಿದ್ದರು. ರಿಕೆಯ ವರಿಷ್ಟ ನೇತಾರರು ಈ ರೀತಿಯಾಗಿ ನಕ್ಕಾಗಿ ಆಗಮಿಸುವುದು ತಮಾಷೆಯ ತಿಯಾಗಿದೆ. ಏನೇ ಇರಲಿ. ಅಚಾನಕ್ಕಾಗಿ ರು ಅಡ್ವಾಣಿಯರೊಡನೆ ಮಾತನಾಡಿದ್ದು ೂ ಅವರು ಶ್ರೀಮತಿ ರೈಸ್‌ರವರೊಡನೆ ತುಕತೆಯಲ್ಲಿದ್ದಾಗ) ಅವರ ಯೋಗಕ್ಷೇಮ ರಿಸಲಿಕ್ಕಂತೂ ಅಲ್ಲ. ನಿಜವಾದ ಉದ್ದೇಶ ೇ. ಬಾಡಿಗೆ ಸೈನಿಕರನ್ನಾಗಿ ಭಾರತೀಯ ಸೇನಾ ತಿಯನ್ನು ಇರಾಕಿಗೆ ಕಳಿಸುವಂತೆ ಒತ್ತಾಯ ುವುದು. ಮೇಲ್ನೋಟಕ್ಕೇನೋ, ಭಾರತ ರ ಅಮೆರಿಕೆಯ ಒತ್ತಡಕ್ಕೆ ಮಣಿದಂತೆ ುವುದಿಲ್ಲ. ಇದರರ್ಥ ಅದು ಯಾವುದೋ ಷ್ಟ ನಿಲುವುಗಳಿಗೆ ಬದ್ಧವಾಗಿದೆ ಎಂದಲ್ಲ. ಣಿಯವರು ಮತ್ತಿತರರ ಹೇಳಿಕೆಗಳನ್ನು ಸಿದಾಗ, ಭಾರತ ಇದುವರೆಗೂ ಅಮೆರಿಕೆಯ ಯಕ್ಕೆ ಮಣಿಯದೆ ಇರಲು ಕಾರಣ, ಸ್ತಾನವನ್ನು ಭಯೋತ್ಪಾದಕ ದೇಶ ಎಂದು ಷಿಸಲು ಅಥವಾ ಅದರ ವಿರುದ್ಧ ಯಾವುದೇ ಕೈಗೊಳ್ಳಲು ಅಮೆರಿಕೆಯ ಆಡಳಿತ ತಯಾರಿಲ್ಲ ದೇ. ಅಷ್ಟೇ ಅಲ್ಲ, ಜೂನ್ 24 ರಂದು ್ ಡೇವಿಡ್‌ನಲ್ಲಿ ಜನರಲ್ ಪರ್ವೇಜ್ ರಫ್‌ರನ್ನು ಬುಷ್ ಭೇಟಿ ಮಾಡಲಿದ್ದಾರೆ

ಮತ್ತು ಭಾರತ ಸರ್ಕಾರಕ್ಕೆ ಇದು ನಡುಕ ಹುಟ್ಟಿಸಿದೆ.

ಈ ವಿಷಯದಲ್ಲಿ ಭಾರತ ಸರ್ಕಾರ ಮೀನಮೇಷ ಎಣಿಸುತ್ತಿರುವುದಕ್ಕೆ ಇನ್ನೊಂದು ಕಾರಣವೂ ಇದೆ. ಭಾರತದ ಸಂಸತ್ತು ಈಗಾಗಲೇ ಗೊತ್ತುವಳಿಯೊಂದನ್ನು ಅಂಗೀಕರಿಸಿ, ಇರಾಕ್‌ನಿಂದ ತನ್ನ ಸೈನ್ಯವನ್ನು ಅಮೆರಿಕೆ ಹಿಂತೆಗೆದುಕೊಂಡು, ವಿಶ್ವ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಇರಾಕ್‌ನ ಪುನರ್ನಿರ್ಮಾಣ ನಡೆಯುವಂತೆ ಒತ್ತಾಯಿಸಿದೆ. ಈ ಹಿನ್ನೆಲೆಯಲ್ಲಿ, ಇರಾಕಿಗೆ ಸೇನಾ ತುಕಡಿಯನ್ನು ಕಳಿಸುವುದು ಕಾನೂನು ಬಾಹಿರ ಕ್ರಮವಾಗುತ್ತದೆ. ಎನ್‌ಡಿಎನ ಅಂಗಪಕ್ಷಗಳನ್ನೊಳಗೊಂಡಂತೆ, ಎಲ್ಲಾ ಪ್ರಮುಖ ರಾಜಕೀಯ ಪಕ್ಷಗಳು, ನಮ್ಮ ಸೇನೆಯನ್ನು ಇರಾಕಿಗೆ ಕಳಿಸುವ ಪ್ರಸ್ತಾಪವನ್ನು ವಿರೋಧಿಸಿವೆ.

ಈ ನಡುವೆ ಭಾರತದಲ್ಲಿ ರಕ್ಷಣಾ ನೆಲೆಗಳನ್ನು ಸ್ಥಾಪಿಸಲು ಹಾಗೂ ಭಾರತದಲ್ಲಿರುವ ರಕ್ಷಣಾ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ



ಅಡ್ವಾಣಿ-ಅಮೆರಿಕದ ಹೋಂಲ್ಯಾಂಡ್ ಸೆಕ್ಯುರಿಟಿಯ ಕಾರ್ಯದರ್ಶಿ ಟಾಂ ರಿಡ್ಜ್

ನೀಡುವಂತೆ ಅಮೆರಿಕೆ ಭಾರತದ ಮೇಲೆ ಒತ್ತಡ ಹೇರುತ್ತಿರುವ ವರದಿಯನ್ನು ಮಾಧ್ಯಮಗಳು ಪ್ರಕಟಿಸಿವೆ. ವಿಮಾನ ನಿಲ್ದಾಣಗಳು, ನೌಕಾ ತಂಗುದಾಣಗಳು, ದುರಸ್ತಿ ಹಾಗೂ ಸಂರಕ್ಷಣಾ ಘಟಕಗಳು ಮುಂತಾದ ಆಯಕಟ್ಟಿನ ಸೌಲಭ್ಯಗಳನ್ನು ಬಳಸಿಕೊಳ್ಳಲು ಅಮೆರಿಕೆ ಉತ್ಸುಕವಾಗಿದೆ.

ಇದೆಲ್ಲವನ್ನು ಗಮನಿಸಿದಾಗ ನಿಚ್ಚಳವಾಗಿ ಕಾಣಬರುವ ಸತ್ಯವೆಂದರೆ ಭಾಜಪ ನೇತೃತ್ವದ ಸರ್ಕಾರ ಅಮೆರಿಕೆಯ ಬಾಲಂಗೋಚಿಯನ್ನಾಗಿ ಭಾರತವನ್ನು ಪರಿವರ್ತಿಸುವ ಸಕಲ ಸಿದ್ಧತೆಗಳನ್ನು ನಡೆಸಿದೆ ಮತ್ತು ಇದಕ್ಕಾಗಿ ಸೂಕ್ತ ಸಮಯವೊಂದರ ನಿರೀಕ್ಷೆಯಲ್ಲಿದೆ ಎಂಬುದು. ಇಂತಹ ನಿರ್ಲಜ್ಜ ಹಾಗೂ ಗುಲಾಮಿ ಮನೋಭಾವದ ಕೃತ್ಯಕ್ಕೆ ವಿರೋಧವನ್ನು ಆದಷ್ಟೂ ತಗ್ಗಿಸುವ ಹುನ್ನಾರ ಅವರದ್ದು.

ಇಂತಹ ಶರಣಾಗತಿಯ ಕ್ರಮಗಳನ್ನು ಸಮರ್ಥಿಸುವ ಲೇಖನ ಗಳನ್ನು ಮಾಧ್ಯಮಗಳ ಮೂಲಕ ಪ್ರಚುರ ಪಡಿಸುವ ಹಲವು ಅಂಕಣಕಾರರೂ ಇದ್ದಾರೆ. ಇದೊಂದು ವ್ಯವಹಾರಿಕ ರಾಜತಂತ್ರ ಎಂಬ ರೀತಿಯಲ್ಲಿ ಅದನ್ನು ಬಣ್ಣಿಸುವ ಕೆಲಸವನ್ನೂ ಅವರು ಮಾಡುತ್ತಾರೆ. ಸೋವಿಯತ್ ಯೂನಿಯನ್ನಿನ ಪತನದ ನಂತರ ವಿಶ್ವದ ರಾಜಕೀಯದಲ್ಲಿ ಮಹತ್ತರ ಬದಲಾವಣೆಗಳಾಗಿವೆ ನಿಜ. ಏಕಮೇವಾದ್ವಿತೀಯವಾಗಿ ಮೆರೆಯುತ್ತಿರುವ ಅಮೆರಿಕಾ ಅಭಿವೃದ್ಧಿಶೀಲ ದೇಶಗಳನ್ನು ಹೆಚ್ಚುಹೆಚ್ಚಾಗಿ ಸಂಕಷ್ಟಕ್ಕೀಡು ಮಾಡುತ್ತಿರುವುದೂ ನಿಜ.

ಇಷ್ಟಕ್ಕೇನೆ ಎಲ್ಲಾ ದೇಶಗಳು ಮತ್ತು ಅಲ್ಲಿನ ಜನ ವಿಶ್ವದ ಈ ದೊಣ್ಣೆನಾಯಕನ ಕಾಲಿಗೆ ಬೀಳಬೇಕೆಂದು ಸೂಚಿಸುವುದು ಸರಿಯಲ್ಲ. ಸ್ವತಂತ್ರ ಅಭಿವೃದ್ಧಿ, ಸಂಪೂರ್ಣ ನಿಶ್ಯಸ್ತ್ರೀಕರಣ ಮತ್ತು ವಿಶ್ವಶಾಂತಿಗಾಗಿ ನಡೆಸುತ್ತಿರುವ ಹೋರಾಟಗಳನ್ನು ಕೈಬಿಡಬೇಕೆಂದು ಪರೋಕ್ಷವಾಗಿ ಈ ಅಂಕಣಕಾರರು ಹೇಳುವುದನ್ನು ಒಪ್ಪಲುಸಾಧ್ಯವಿಲ್ಲ.

ಈ ಸನ್ನಿವೇಶದಲ್ಲಿ ಭಾರತ ನಿಜವಾಗಿಯೂ ಗಮನಾರ್ಹವಾದ ಮತ್ತು ಪ್ರಧಾನ ಪಾತ್ರವನ್ನು ಅಂತರ್ರಾಷ್ಟ್ರೀಯ ಸ್ತರದಲ್ಲಿ ವಹಿಸಬೇಕಾದ ಅಗತ್ಯವಿದೆ. ಜಗತ್ತನ್ನೇ ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ಆಳಬಯಸುವ ಅಮೆರಿಕೆಯ ದುರ್ನೀತಿಗಳ ವಿರುದ್ಧ ವಿಶ್ವವ್ಯಾಪಿ ಹೋರಾಟಗಳಿಗೆ ಚಾಲನೆ ನೀಡುವ ಜವಾಬ್ದಾರಿಯನ್ನು ಆ ಮೂಲಕ ನಿರ್ವಹಿಸಬಹುದಾಗಿತ್ತು. ಆದರೆ ಆರ್‌ಎಸ್‌ಎಸ್ ಭಾಜಪ ಕೂಟಕ್ಕೆ ಇವೆಲ್ಲಾ ಅಪಥ್ಯ. ಅಮೆರಿಕೆಯ ಬಾಲಂಗೋಚಿಯಾಗಿಯೇ ಇರಬೇಕೆಂಬ ಬಯಕೆ ಅದರದ್ದು.

ಪಾಕಿಸ್ತಾನವನ್ನು ಧಿಕ್ಕರಿಸುವ ಕಾರ್ಯವನ್ನು ಅಮೆರಿಕೆ ಮಾಡಬಹುದು ಎಂಬ ಭ್ರಮೆ ಭಾಜಪ ಸರ್ಕಾರವನ್ನು ಆವರಿಸಿದೆ. ವಾಸ್ತವ ಬೇರೆಯೆ ಇದೆ. ಅಮೆರಿಕೆ ಎಲ್ಲರನ್ನೂ ತನ್ನ ತೆಕ್ಕೆಗೆ ತೆಳೆದುಕೊಂಡು, ತನ್ನ ಅಧಿಪತ್ಯವನ್ನು ಮಾತ್ರ ಚಲಾಯಿಸುವ ದೇಶ. ಚರಿತ್ರೆ ಇದನ್ನೇ ಹಲವು ಸಂದರ್ಭಗಳಲ್ಲಿ ಸಾಬೀತುಪಡಿಸಿದೆ.

ಅಮೆರಿಕಾದ ಬಾಲಂಗೋಚಿಯಾಗುವುದರ ಬದಲಾಗಿ ರಷಿಯಾ ಮತ್ತು ಚೀನಾ ಜತೆಗಿನ ಸಂಬಂಧಗಳನ್ನು ಇನ್ನಷ್ಟು ಸುಧಾರಿಸಿ, ಅಮೆರಿಕೆಯ ಹುನ್ನಾರಗಳಿಗೆ ಹಾಗೂ ಅಧಿಪತ್ಯಕ್ಕೆ ಕಡಿವಾಣ ಹಾಕುವ ಪ್ರಯತ್ನಗಳನ್ನು ಮಾಡಬೇಕಾಗಿದೆ. ವಿಶ್ವದ ಸುಮಾರು ಶೇ 45 ರಷ್ಟು ಜನಸಂಖ್ಯೆ ಈ ಮೂರು ದೇಶಗಳಲ್ಲೇ ಇದೆ.

ಪರಸ್ಪರ ಹೊಂದಾಣಿಕೆ ಮತ್ತು ಸಹಕಾರದ ಆಧಾರದಲ್ಲಿ ಈ ವಿಶಾಲ ಜನಸ್ತೋಮವೇನಾದರೂ ಒಂದಾದ ಪಕ್ಷದಲ್ಲಿ ಇಡೀ ವಿಶ್ವದ ಸ್ವಾತಂತ್ರ್ಯಪ್ರೇಮಿ ಹಾಗೂ ಶಾಂತಿ ಪ್ರೇಮಿ ಜನತೆ ಅವರ ಕೈ ಜೋಡಿಸಿಯಾರು. ವಿಶ್ವದ ರಾಷ್ಟ್ರಗಳ ಸಾರ್ವಭೌಮತೆಯನ್ನು ಉಳಿಸಿಕೊಳ್ಳುತ್ತಾ, ವಿಶ್ವಶಾಂತಿಯನ್ನು ನೆಲೆಗೊಳಿಸುವ ದಿಟ್ಟಿನಲ್ಲಿ ದೃಢವಾದ ಹೆಜ್ಜೆಗಳನ್ನು ಇಡಲು ಇದರಿಂದ ಸಾಧ್ಯವಾಗುತ್ತದೆ.

ವಿಶ್ವದ ಹಾಗೂ ಭಾರತದಲ್ಲಿನ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಕಾರ್ಯನಿರತವಾಗಬೇಕಾಗಿರುವುದು ಈ ದಿಸೆಯಲ್ಲೇ.

●



ಅಂಕಿ ಸಂಖ್ಯೆ

ಪಾರ್ಲಿಮೆಂಟಿನಲ್ಲಿ ಮಹಿಳೆಯರು ಇಂಡಿಯಾದ ರ್‍ಯಾಂಕು 88!

ಇತ್ತೀಚೆಗೆ ವಿಶ್ವಸಂಸ್ಥೆಯ ಅಂಗಸಂಸ್ಥೆ ಯು.ಎನ್.ಡಿ.ಪಿ ಮತ್ತು ಅಂತರಾಷ್ಟ್ರೀಯ ಪಾರ್ಲಿಮೆಂಟು ಯೂನಿಯನ್ ಪಾರ್ಲಿಮೆಂಟಿನಲ್ಲಿ ಮಹಿಳೆಯರ ಬಗ್ಗೆ ನಡೆಸಿದ ಅಧ್ಯಯನದ ವಿವರಗಳನ್ನು ಪ್ರಕಟಿಸಿದೆ. ಇದು ಕೊಡುವ ಅಂಕಿ-ಸಂಖ್ಯೆಗಳ ಪ್ರಕಾರ ಪಾರ್ಲಿಮೆಂಟಿನಲ್ಲಿ ಮಹಿಳೆಯರ ಸಂಖ್ಯೆ ಸರಾಸರಿ ಶೇಕಡಾ 15 ಪಾರ್ಲಿಮೆಂಟಿನಲ್ಲಿ ಮಹಿಳೆಯರ ಶೇಕಡಾವಾರು ಕೊಟ್ಟಿರುವ ರ್‍ಯಾಂಕಿನಲ್ಲಿ ನಮ್ಮ ದೇಶದ್ದು 88ನೇ ರ್‍ಯಾಂಕು!

ಪಾರ್ಲಿಮೆಂಟಿನಲ್ಲಿ ಮಹಿಳೆಯರ ಸಂಖ್ಯೆ ಕನಿಷ್ಟ ಶೇಕಡಾ 30 ರಷ್ಟು ಇದ್ದಾಗ ಮಾತ್ರ, ಅವರು ಅರ್ಥಪೂರ್ಣವಾಗಿ ದೇಶದ ಭವಿಷ್ಯ ರೂಪಿಸಲು ಸಾಧ್ಯ. ಇದು ಸಾಧ್ಯವಾಗಿಸುವುದು ತನ್ನ ಗುರಿ ಎನ್ನುತ್ತದೆ ಯು.ಎನ್.ಡಿ.ಪಿ. ಆದರ ಇಂದು ಕೇವಲ 13 ದೇಶಗಳು ಈ ಗುರಿ ಮುಟ್ಟಿವೆ. ಮೊದಲ ಸ್ಥಾನ ಸ್ವೀಡನ್‌ನದ್ದು. ಪಾರ್ಲಿಮೆಂಟಿನಲ್ಲಿ ಮಹಿಳೆಯರು ಶೇಕಡಾವಾರು 45.3 ನಾರ್ಡಿಕ್ ದೇಶಗಳು ಎಂದು ಕರೆಯುವ ಉತ್ತರ ಯುರೋಪಿನ ದೇಶಗಳು (ಸ್ವೀಡನ್, ಡೆನ್ಮಾರ್ಕ್, ಐಸ್‌ಲೆಂಡ್, ಫಿನ್ ಲ್ಯಾಂಡ್, ನಾರ್ವೆ) ಸರಾಸರಿ ಶೇಕಡಾ 40. ಅವನ್ನು ಬಿಟ್ಟರೆ ಹೆಗ್ಗಳಿಕೆಯ ಸ್ಥಾನ ಕ್ಯೂಬಾದ್ದು (ಶೇಕಡಾ 36) ಶೇಕಡಾ 30 ಮಹಿಳೆಯರ ಪ್ರಾತಿನಿಧ್ಯ ದಾಟಿರುವ ಇತರ ದೇಶಗಳಾದ ಜರ್ಮನಿ, ಹಾಲೆಂಡ್, ದಕ್ಷಿಣ ಆಫ್ರಿಕಾ, ಕೊಸ್ಟಾರಿಕಾ, ಅರ್ಜೆಂಟೀನಾ, ಮೊಜಾಂಬಿಕ್, ಆಸ್ಟ್ರಿಯಾಗಳು. ತಾನು ಅತಿ ದೊಡ್ಡ ಪ್ರಜಾಪ್ರಭುತ್ವ ಎನ್ನುವ ಅಮೇರಿಕ, 59 ನೇ ಸ್ಥಾನದಲ್ಲಿದೆ (ಶೇಕಡಾ 14.3) ! ನಮ್ಮ ನೆರೆಯ ಪಾಕಿಸ್ತಾನ ಮತ್ತು ಚೀನಾ (ಶೇಕಡಾ 22) 32ನೇ ಸ್ಥಾನದಲ್ಲಿದ್ದು ಅಮೇರಿಕಾ, ಬ್ರಿಟನ್‌ಗಳಿಗಿಂತ (ಶೇಕಡಾ 18) ಮೇಲಿವೆ. ಆಫ್ರಿಕಾದ ಸಹರಾ ಪಕ್ಕದ 13 ಅತ್ಯಂತ ಹಿಂದುಳಿದ ದೇಶಗಳೂ (ಇದು ಜಗತ್ತಿನಲ್ಲೇ ಅತ್ಯಂತ ಬಡ ಪ್ರದೇಶ) ಮಹಿಳೆಯರ ಪ್ರಾತಿನಿಧ್ಯದಲ್ಲಿ ಅಮೇರಿಕಕ್ಕಿಂತ ಮುಂದಿವೆ.

ದೇಶದ ಬೆಳವಣಿಗೆಯ ಹಂತ, ಶ್ರೀಮಂತಿಕೆ ಪ್ರದೇಶ- ಇವ್ಯಾವುದೂ ಮಹಿಳೆಯರ ಪ್ರಾತಿನಿಧ್ಯದಲ್ಲಿ ಯಾವುದೇ ಪಾತ್ರ ವಹಿಸಿದ್ದು ಈ ಅಂಕಿಸಂಖ್ಯೆಗಳಿಂದ ಕಂಡುಬರುವುದಿಲ್ಲ. ಅರಬ್ ದೇಶಗಳು (ಸರಾಸರಿ ಶೇಕಡಾ 6), ಮತ್ತು ಉತ್ತರ ಯುರೋಪಿನ ನಾರ್ಡಿಕ್ ದೇಶಗಳ (ಶೇಕಡಾ 40) ಅಪವಾದ ಬಿಟ್ಟರೆ ಎಲ್ಲಾ ಪ್ರಮುಖ ಪ್ರದೇಶಗಳ ಸರಾಸರಿ ಶೇಕಡಾ 14-17. ಗಮನಾರ್ಹ ಅಂಶವೆಂದರೆ ಶೇಕಡಾ 30 ದಾಟಿರುವ ಹೆಚ್ಚಿನ ದೇಶಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಮೀಸಲಾತಿ ಇದೆ. ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಲು, ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ ಹೆಚ್ಚಿಸಲು ನಿರ್ದಿಷ್ಟ ಕ್ರಮಗಳ ಅಗತ್ಯ ಇದೆ ಎಂದು ತೋರಿಸುತ್ತದೆ.

ಕೇಬಲ್ ಟಿವಿ ಪ್ರಸಾರ ನಿಯಂತ್ರಣ ದೇಶದ ಮುಂದಿರುವ ಅತ್ಯಂತ ಗಂಭೀರ ಸಮಸ್ಯೆಯೇ? ಕೆಲವು ತಿಂಗಳ ಹಿಂದೆ ವಂತಿಗೆ ಚಾನಲ್‌ಗಳಿಗೆ ಸೆಟ್ ಟಾಪ್ ಬಾಕ್ಸ್ ವ್ಯವಸ್ಥೆ ಕಡ್ಡಾಯ ಮಾಡಿ ಕಾನೂನನ್ನು ಅತ್ಯಂತ ತರಾತುರಿಯಲ್ಲಿ ತಂದು, ಈಗ ಜುಲೈ 15 ರೊಳಗೆ ಅದನ್ನು ನಾಲ್ಕು ಮಹಾನಗರಗಳಲ್ಲಿ ಜಾರಿಯ ಗಡುವು ನಿಗದಿ ಮಾಡಲಾಗಿದೆ. ಯಾಕೀ ಆತುರ? ಇದರ ಉದ್ದೇಶವೇನು? ಈ ತರಾತುರಿಯ ಹಿಂದೆ ಬಳಕೆದಾರರ ಹಿತಾಸಕ್ತಿ ಕಾಪಾಡುವ ಉದ್ದೇಶವಂತೂ ಇಲ್ಲ. ಹಾಗಾದರೆ ಇನ್ಯಾವ ಕಾಣದ ಕೈ ಈ ನಾಟಕ ಆಡಿಸುತ್ತಿದೆ? ಈ ಬಗ್ಗೆ ವಿಶ್ಲೇಷಿಸುವ ಲೇಖನ.

ಸೆಟ್ - ಟಾಪ್ ಬಾಕ್ಸ್ ಯಾಕೀ ಆತುರ?

ಶರತ್‌ಚಂದ್ರ

ಟಿವಿಯ ಮೇಲೆ ಕೂರಬೇಕಾಗಿರುವ ಸೆಟ್-ಟಾಪ್‌ಬಾಕ್ಸ್, ಟಿವಿಯೊಳಗೆ ದಿನಾ ಸುದ್ದಿ ಮಾಡುತ್ತಿದೆ. ಸಂಬಂಧಿತ ಮಂತ್ರಿ ಮಾತ್ರವಲ್ಲ, ಬಿಜೆಪಿ ಅಧ್ಯಕ್ಷ, ಉಪಪ್ರಧಾನಿ, ಪ್ರಧಾನಿ ಈ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. ದೇಶದ ಮುಂದಿರುವ ಅತ್ಯಂತ ಗಂಭೀರ ಸಮಸ್ಯೆಯೋ ಎಂಬಂತೆ ಈ ಬಗ್ಗೆ ಮಾತನಾಡುತ್ತಾರೆ. ಇದು ಕೇಬಲ್ ಟಿವಿ ಬಳಕೆದಾರರ ಹಿತರಕ್ಷಣೆಗೆ ಎನ್‌ಡಿಎ ಸರ್ಕಾರ 'ವೀರಾವೇಶ'ದಿಂದ ತರುತ್ತಿರುವ ಕ್ರಮ ಎಂದು ಟಾಂಟಾಂ ಮಾಡುತ್ತಿದ್ದರೂ ಎಲ್ಲೋ ಇವರಿಗೆಲ್ಲಾ ಬಳಕೆದಾರ ಇದು ತನ್ನ ವಿರುದ್ಧ ಕ್ರಮ ಎಂದು ತಿರುಗಿ ಬೀಳುತ್ತಾನೆ ಎಂಬ ಭಯ ಇದ್ದ ಹಾಗೆ ಕಾಣುತ್ತದೆ. ನಾಲ್ಕೈದು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗಳು ಒಂದು ಕಡೆ, ಇನ್ನೇನು ಬಂದೇಬಿಟ್ಟಿರುವ ಪಾರ್ಲಿಮೆಂಟು ಚುನಾವಣೆಗಳಲ್ಲಿ ಮತದಾರ ಯಾವ ವಿಷಯದ ಬಗೆಗೆಲ್ಲಾ ತಿರುಗಿ ಬೀಳಬಹುದು ಎಂಬ ಬಗ್ಗೆ ನಾಯಕರು ರಾತ್ರಿ ಕಾಣುವ ದುಸ್ವಪ್ನಗಳಿಗೆ ಬೆಳಿಗ್ಗೆ ಬೆಚ್ಚಿ ಬೀಳುತ್ತಿದ್ದಾರೆ. ಸೆಟ್ -ಟಾಪ್ ಬಾಕ್ಸ್ ಒಂದು ಚುನಾವಣಾ ವಿಷಯವಾಗಬಹುದೋ ಎಂದು ಇವರೆಲ್ಲಾ ಆತಂಕದಿಂದ ಇದ್ದಾರೆ.

ಜುಲೈ 15 ರಿಂದ ನಾಲ್ಕು ಮಹಾನಗರಗಳಲ್ಲಿ ಇದು ಜಾರಿಯಾಗಬೇಕು. ಆಮೇಲೆ ಅದನ್ನು ದೇಶದಾದ್ಯಂತ ವಿಸ್ತರಿಸಲಾಗುವುದು. ಇದು ಸರ್ಕಾರದ ಧೋರಣೆ. ಆದರೆ ಇದರ ಜಾರಿಯತ್ತ ಯಾವುದೇ ನಿರ್ದಿಷ್ಟ ಕ್ರಮ ಕಾಣುತ್ತಿಲ್ಲ. ಲಕ್ಷಾಂತರ ಸೆಟ್-ಟಾಪ್ ಬಾಕ್ಸ್‌ಗಳ ಅಗತ್ಯ ಇದೆ. ಅದರ ಸ್ಥಳೀಯಉತ್ಪಾದನೆಯತ್ತ ಯಾವುದೇ ಪ್ರಯತ್ನವಿಲ್ಲ. ಈ ಬಾಕ್ಸ್‌ಗಳಿಗೆ ಆಮದು ಮಾಡಲು ಕಸ್ಟಮ್ಸ್ ಸುಂಕ ಕಡಿಮೆ ಮಾಡಿದೆ ಅಷ್ಟೆ.

ತಿಂಗಳ ಕೇಬಲ್ ಬಿಲ್ 200 ರಿಂದ 500 ರೂ. ವರೆಗೆ?

ಬಳಕೆದಾರರ ಆತಂಕ ದಿನೇ ದಿನೇ ಜಾಸ್ತಿಯಾಗುತ್ತಿದೆ. ಕೇಬಲ್ ವಿತರಕರ ಒತ್ತಡದಿಂದ ಕೆಲವು ತಿಂಗಳುಗಳ ಹಿಂದೆ ಈ ಕಾನೂನು ತಂದಾಗಲೇ ಬಳಕೆದಾರರಿಗೆ ಸಂಶಯವಿತ್ತು, ಸರ್ಕಾರದ ಉದ್ದೇಶಗಳ ಬಗ್ಗೆ. ಬಳಕೆದಾರರಿಗೆ ಹೆಚ್ಚಿನ ಆಯ್ಕೆ ಕೊಟ್ಟು, ಅವರು ನೋಡುವ ಚಾನಲ್‌ಗಳಿಗೆ ಮಾತ್ರ ಬೆಲೆ ತೆರುವ - ಘೋಷಿತ ಉದ್ದೇಶ ಸಾಧನೆಯಾಗುವ ಬಗ್ಗೆ ಬಲವಾದ ಗುಮಾನಿಗಳು ಇದ್ದವು. ಅವು ನಿಜವಾಗುತ್ತಿವೆ. ಇದು ಮುಖ್ಯವಾಗಿ ಹಲವು ಚಾನಲ್‌ಗಳು ಒಂದು ಗುಚ್ಛವಾಗಿ ಮಾತ್ರ ಲಭ್ಯವಿರುವುದು. ಝೀ, ಸ್ಟಾರ್, ಸೋನಿ, ಇಂತಹ ಮುಖ್ಯ 'ಗುಚ್ಛ'ಗಳು. ಉದಾಹರಣೆಗೆ ಝೀಯ ಒಂದು ಚಾನಲ್ ಮಾತ್ರ ಬಳಕೆದಾರ ಆಯ್ಕೆಗೆ ಅವಕಾಶವಿಲ್ಲ. ಅದೇ ರೀತಿ ಸ್ಟಾರ್‌ನ್ಯೂಸ್ ಅಥವಾ ಎನ್‌ಡಿ ಟಿವಿ (ಸೋನಿ ಗುಚ್ಛದಲ್ಲಿ) ಮಾತ್ರ ಆಯ್ಕೆ ಮಾಡುವಂತಿಲ್ಲ. ಈ ಪ್ರತಿಯೊಂದು ಗುಚ್ಛಕ್ಕೆ 70 ರೂ. ಬೆಲೆ ತೇರಬೇಕಾಗಬಹುದು ಬಳಕೆದಾರ. ಇತ್ತೀಚೆಗೆ ಚಾನೆಲ್ ಕಂಪನಿಗಳ ಬೆಲೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈಗ ಜನಪ್ರಿಯವಾಗಿರುವ ಮತ್ತು ಹೆಚ್ಚಾಗಿ ಲಭ್ಯವಿರುವ ಚಾನಲ್‌ಗಳಿಗೆ 500 ರೂ. ಪ್ರತಿತಿಂಗಳು ತೆರಬೇಕಾಗಬಹುದು. ಈಗ ಸಾಮಾನ್ಯವಾಗಿ ರೂ. 200 ತೆರಲಾಗುತ್ತಿದೆ. ಅಂದರೆ ಎರಡುವರೆ ಪಟ್ಟು ಬೆಲೆ ಹೆಚ್ಚಾಗಬಹುದು. ಈ ವ್ಯವಸ್ಥೆ ಬಳಕೆದಾರ-ಪರ ಆಗಬೇಕಾದರೆ ಸರ್ಕಾರ ಮೊದಲು ಮಾಡಬೇಕಾದ್ದು ಪ್ರತಿಯೊಂದು ಚಾನಲ್‌ಗೆ ಪ್ರತ್ಯೇಕ ಬೆಲೆ ನಿಗದಿ ಮಾಡಬೇಕು ಎಂದು ಚಾನಲ್ ಮಾಲಕರಿಗೆ ಹೇಳುವುದು. ಕಾನೂನು ಪ್ರಕಾರ ಅದನ್ನು ಅನಿವಾರ್ಯ ಮಾಡುವುದು. ಅಂದರೆ ಒಂದು ಚಾನಲ್ ಬೇಕಾದರೆ ಇಡೀ ಗುಚ್ಛಕ್ಕೆ ವಂತಿಗೆ ಕೊಡಬೇಕು ಎಂಬ ಚಾನಲ್ ಮಾಲಕರು ಹೊರಿಸುತ್ತಿರುವ ವ್ಯವಸ್ಥೆಯನ್ನು ನಿರಾಕರಿಸುವುದು.

ಮುಕ್ತ ಚಾನಲ್‌ಗಳಿಗೆ, ಬಾಕ್ಸ್‌ಗೆ ಎಷ್ಟು ತೆರಬೇಕು?

ಇದು ಸಾಲದೆಂಬಂತೆ ಯಾವುದೇ ವಂತಿಗೆ ಚಾನಲ್‌ಗಳನ್ನು ಕೊಳ್ಳಲು ಇಷ್ಟಪಡದ ಬಳಕೆದಾರನಿಗೆ ಎಷ್ಟು ಮತ್ತು ಯಾವ ಚಾನಲ್‌ಗಳನ್ನು ಕೊಡಲಾಗುವುದು ಎಂಬ ಬಗೆಗೂ ತೀವ್ರ ಆತಂಕ ಇದೆ. ಸರಕಾರವೇನೋ 30 ಚಾನಲ್‌ಗಳನ್ನು 70 ರೂ.ಗೆ ಕಡ್ಡಾಯವಾಗಿ ಕೊಡಬೇಕೆಂದು ತಾಕೀತು ಮಾಡಿದೆ. ಅದೇ ರೀತಿ ವಂತಿಗೆ ಚಾನಲ್‌ಗಳನ್ನು ಕೊಳ್ಳಲು ಇಷ್ಟಪಡದ ಬಳಕೆದಾರನಿಗೆ ಬಾಕ್ಸ್ ಕೊಳ್ಳುವುದು ಕಡ್ಡಾಯವಾಗಬಾರದು ಎಂತಲೂ ಸರ್ಕಾರ ಹೇಳುತ್ತಿದೆ. ಆದರೆ ಇವೆರಡಕ್ಕೂ ಕೇಬಲ್‌ವಾಲಾಗಳು ಬಿಡುತ್ತಿಲ್ಲ. ಇದಕ್ಕೆ ಸರ್ಕಾರ ಕೇಬಲ್‌ವಾಲಾಗಳನ್ನು ಒಪ್ಪಿಸಿದ್ದರೂ ಆ 30 ಚಾನಲ್‌ಗಳು ಯಾವುದು ಎಂದು ಇನ್ನೂ ಬಗೆಹರಿಯದ ವಿಷಯ. ಇದು ಮುಖ್ಯವಾಗಿ ಮಹಾನಗರಗಳಲ್ಲಿ ವಾಸಿಸುತ್ತಿರುವ ಹೊರರಾಜ್ಯಗಳ ಭಾಷಿಕರಿಗೆ ಆತಂಕದ ವಿಷಯ. ಈಗಲೇ ಕೆಲವು ಕೇಬಲ್‌ವಾಲಾಗಳ ಕೆಲವು ಪ್ರಾದೇಶಿಕ ಚಾನಲ್‌ಗಳನ್ನು ಹಾಕುವುದಿಲ್ಲ. ಅಲ್ಲದೆ ಈ 'ಮುಕ್ತ' ಚಾನಲ್‌ಗಳನ್ನು 'ಎಸ್ ಬಾಂಡ್' ನಂತಹ ಕನಿಷ್ಟ ಗುಣಮಟ್ಟದಲ್ಲಿ ಹಾಕಿ ಕೇಬಲ್‌ವಾಲಾ ಅದನ್ನು ನಿರ್ಲಕ್ಷಿಸಬಹುದು ಎಂಬ ಆತಂಕವೂ ಇದೆ. ಇದಲ್ಲದೆ ಸೆಟ್ -ಟಾಪ್ ಬಾಕ್ಸ್‌ನ ಬೆಲೆಯ ಪ್ರಶ್ನೆ ಇದ್ದೇ ಇದೆ. ಮೂರು ಸಾವಿರದಿಂದ ಏಳು ಸಾವಿರದವರೆಗೆ ಬಳಕೆದಾರ ಬೆಲೆ ತೆರಬೇಕಾದೀತು. ಇಲ್ಲವೆ ಈ 'ಬಾಕ್ಸ್'ಗಳನ್ನು ಬಾಡಿಗೆಗೆ ಅಥವಾ ಕಂತುಗಳಲ್ಲಿ ಕೊಡಲಾಗುವುದು. ಇದರ ಅರ್ಥ ತಿಂಗಳ ಬಳಕೆದಾರ ರೂ. 200 ರಿಂದ 700 ರವರೆಗೆ ತೆರಬೇಕಾದೀತು. ಈ ಬಗೆಗೂ ಸರ್ಕಾರ ನಿರ್ದಿಷ್ಟ ನಿರ್ದೇಶನಗಳನ್ನು ನೀಡಿಲ್ಲ. ಇದಲ್ಲದೆ ಸೆಟ್-ಟಾಪ್ ಬಾಕ್ಸ್‌ಗಳಲ್ಲಿ 'ಸ್ಟಾಂಡರ್ಡ್' ಇಲ್ಲದಿರುವುದರಿಂದ ಬಳಕೆದಾರ ಮನೆ ಬದಲಾಯಿಸಿದರೆ, ಆತ ಬಾಕ್ಸ್ ಒಯ್ಯುವಂತಿಲ್ಲ. ಅದು ಕೆಲಸ ಮಾಡದಿರಬಹುದು. ಆದ್ದರಿಂದ 'ಬಾಕ್ಸ್' ಬಾಡಿಗೆ ವ್ಯವಸ್ಥೆ ಖಾಯಂ ಆಗುವ ಸಾಧ್ಯತೆ ಇದೆ. ಅಂದರೆ ಪುನಃ ಬಳಕೆದಾರನ ತಿಂಗಳ ಕೇಬಲ್ ಬಿಲ್ ಏರುತ್ತದೆ. ಇದು ಸಾಲದೆಂಬಂತೆ 'ಬಾಕ್ಸ್' ನ ತಂತ್ರಜ್ಞಾನ ಬದಲಾದಂತೆ ಹೊಸ ಹೊಸ ಮಾಡೆಲ್‌ಗಳು (ಹೆಚ್ಚುಹೆಚ್ಚು ಕ್ಷಮತೆ ಇರುವ) ಬಾಕ್ಸ್‌ಗಳು ಬರುತ್ತವೆ. ಪ್ರತಿಬಾರಿ ಬಳಕೆದಾರನ ಕಿಸೆಗೇ ಕತ್ತರಿ.

ಯಾಕೀ ಆತುರ?

ಸರ್ಕಾರವೇ ನಿಗದಿಪಡಿಸಿದ ಗಡುವು ಹತ್ತಿರ ಬರುತ್ತಿದ್ದು, ಸರ್ಕಾರ ಕೇಬಲ್‌ವಾಲಾಗಳು, ಚಾನೆಲ್ ಮಾಲಕರು ಜತೆ ಹಲವು ಸಭೆ ನಡೆಸಿದ್ದು ಯಾವುದೇ ಒಪ್ಪಂದಕ್ಕೆ ಬರಲಾಗಿಲ್ಲ. ದೆಹಲಿ ಮತ್ತಿತರ ರಾಜ್ಯ ಚುನಾವಣೆಗಳು ಹತ್ತಿರವಿರುವುದರಿಂದ ಬಳಕೆದಾರರ ಹಿತಾಸಕ್ತಿ ಕಾಪಾಡಲು ಏನೂ ಮಾಡಲು ಸಿದ್ಧ. ಕೇಬಲ್ ಆಪರೇಟರ್, ಚಾನೆಲ್ ಮಾಲಕರಿಗೆ ಸೂಕ್ತ ನಿರ್ದೇಶನ ನೀಡಲಾಗುವುದು ಎಂದೆಲ್ಲಾ 'ವೀರಾವೇಶ' ದಿಂದ ಮಾತನಾಡುತ್ತಿದೆ. ಬಿಜೆಪಿ, ಶಿವಸೇನಾದ ದೆಹಲಿ, ಮುಂಬಯಿ ನಾಯಕರುಗಳಿಗೆ ಕೂಡಾ ಚುನಾವಣೆ ಮೇಲೆ ಕಣ್ಣಿಟ್ಟು 'ಬಾಕ್ಸ್' ವ್ಯವಸ್ಥೆ ಬಳಕೆದಾರರ ಹಿತಾಸಕ್ತಿಗೆ ಅನುಗುಣವಾಗಿಲ್ಲ ಎಂದೆಲ್ಲಾ ಹು... ಗದ್ದಲ ಎಬ್ಬಿಸಿದ್ದಾರೆ. ಸೆಟ್-ಟಾಪ್ ಬಾಕ್ಸ್‌ನ ಇಡೀವ್ಯವಸ್ಥೆ ಬೇಕೆ ಎಂಬ ಬಗ್ಗೆ ಎನ್‌ಡಿಎ ಸರ್ಕಾರ ಪಕ್ಷಗಳೊಳಗೆ ವಿವಾದ ಎದ್ದು, ಅದು... ಪ್ರಧಾನಮಂತ್ರಿಯವರಿಗೆ ಹೋಗಿದೆ. ಸೆಟ್-ಟಾಪ್ ಬಾಕ್ಸ್ ವ್ಯವಸ್ಥೆ ಕೈಬಿಡುವ ಪ್ರಶ್ನೆ ಇಲ್ಲ. ಆದರೆ ಬಳಕೆದಾರನ ತಿಂಗಳ ಬಿಲ್ ಈಗಿನದ್ದಕ್ಕಿಂತ (ಸುಮಾರು ರೂ. 200) ಹೆಚ್ಚಾ... ಆಗದಂತೆ ನೋಡಬೇಕು ಎಂದು ಪ್ರಧಾನಿ ಆದೇಶ ನೀಡಿದ್ದಾರೆ. ಆದರೆ ನಾವು ಈಗಾಗಲೇ ನೋಡಿದಂತೆ ಇದಕ್ಕೆ ಬೇಕಾದ ಹಲವು ಮಹತ್ವದ ಮಗ್ಗಲುಗಳ ಬಗ್ಗೆ ಏನೂ ಮಾಡಿಲ್ಲ.

ಹಾಗಾದರೆ ಚುನಾವಣೆ ಸಮಯದಲ್ಲಿ ಜನರ ಕೋಪಕ್ಕೆ ತುತ್ತಾಗಬಹುದಾದ ಇಂತಹ ಕ್ರಮಕ್ಕೆ ಏಕೀ ಈ ಆತುರ? ಇದಕ್ಕೆ ಮುಖ್ಯ ಕಾರಣ ಹಲವು ವಾಣಿಜ್ಯ ಹಿತಾಸಕ್ತಿಗಳು ಬೇ... ಬೇರೆ ಕಾರಣಗಳಿಗೆ ಈ 'ಬಾಕ್ಸ್' ಬಯಸುತ್ತ... ಈ ಸರ್ಕಾರ ವಾಣಿಜ್ಯ ಹಿತಾಸಕ್ತಿಗಳ ಕೈಗೊಂ... ಅವರಿಗೆ ಮಾತ್ರವಲ್ಲ ಸರ್ಕಾರಕ್ಕೂ ತನ್ನದೇ ... ಹಿತಾಸಕ್ತಿಗಳಿವೆ.

ಕಾಮಧೇನು 'ಬಾಕ್ಸ್'

ಎಲ್ಲರಿಗೂ ಗೊತ್ತಿರುವ ಹಾಗೆ, ಈ ಸರ್ಕಾ... ಈ ಬಾಕ್ಸ್ ಕಡ್ಡಾಯಮಾಡುವ ಮಸೂದೆ ತಂದಿದ್ದೇ ಕೇಬಲ್‌ವಾಲಾಗಳ ಒತ್ತಡದಿಂದ. ಕೇಬಲ್‌ವಾಲಾಗಳು ಮುಷ್ಕರ ಹೂಡಿದ್ದರು. ಮಸೂದೆಯನ್ನು ವಿರೋಧಿಸುವ ಪಕ್ಷದ ಸದಸ್ಯರ 'ಕೇಬಲ್' ಕಟ್ ಮಾಡುವ ಬೆದರಿ... ಹಾಕಿದ್ದರು. ಸರ್ಕಾರವೂ ಕೇಬಲ್‌ವಾಲಾಗಳ ಜತೆ ಶಾಮೀಲಾಗಿರುವ ಎಲ್ಲಾ ಲಕ್ಷಣಗಳನ್ನು ಪ್ರದರ್ಶಿಸಿತ್ತು. ಸಾರ್ವಜನಿಕ ಹಿತಾಸಕ್ತಿಯನ್ನು ವಾಣಿಜ್ಯ ಹಿತಾಸಕ್ತಿಗಳಿಗೆ ಬಲಿಕೊಡುವ ಎನ್‌ಡಿಎ ಸರ್ಕಾರದ ದುರಭ್ಯಾಸದ ಅಸಹ್ಯ, ಅಸಭ್ಯ ಪ್ರದರ್ಶನ ಅದಾಗಿತ್ತು.

ಇಲ್ಲಿ ಕೇಬಲ್‌ವಾಲಾಗಳು ಈಗ, ನೆರೆಹೊರೆಯ ಹುಡುಗರು ನಡೆಸುವ ಕಾಲೋನಿಯೊಳಗಿನ ವ್ಯವಹಾರ ಅಲ್ಲ ಎಂದುಗಮನಿಸಬೇಕು. ಕಳೆದ ಕೆಲವು ವರ್ಷಗಳಲ್ಲಿ ಇದು ದೊಡ್ಡ ವಹಿವಾಟು. ನೆರೆಹೊರೆಯ ಕೇಬಲ್‌ವಾಲಾಗಳು ದೊಡ್ಡ ಮಲ್ಟಿ ಸಿಸ್ಟಮ್ ಆಪರೇಟರ್(MSO) ಎಂಬ ದೊಡ್ಡ ತಿಮಿಂಗಲಗಳ ಏಜೆಂಟರು ಅಷ್ಟೆ. ಇಂತಹ MSOಗಳು ದೊಡ್ಡ ಕಂಪನಿಗಳ... ಇಂಥ ಕೆಲವು ದೊಡ್ಡ ಚಾನಲ್ ಕಂಪನಿಗಳು ಬಂಡವಾಳ ಹೂಡಿವೆ. ಇದಕ್ಕೆ ಸಿಟಿ ಕೇಬಲ್ ಉದಾಹರಣೆ. ಝಿ ಚಾನಲ್ ಸಿಟಿ ಕೇಬಲ್‌ನಲ್ಲಿ ಬಂಡವಾಳ ಹೂಡಿದೆ. ತಮಿಳುನಾಡಿನಲ್ಲಿ ಸನ್ ನೆಟ್‌ವರ್ಕ್‌ಗೆ ತನ್ನದೇ ಕೇಬಲ್ ಆಪರೇಟರ್ ಕಂಪನಿಗಳಿವೆ. ಹಲವುಕಡೆ ಹ... ವಿಷಯಗಳಲ್ಲಿ ಕೇಬಲ್ ಆಪರೇಟರ್‌ಗಳಿಗೂ ಚಾಲನ್... ಕಂಪನಿಗಳಿಗೂ ಘರ್ಷಣೆಯು... ಇದೆ. ಇನ್ನೊಂದು ಕಡೆ ಜಾಹೀರಾತುದಾರರು ಬಾಕ್ಸ್ ಮೂಲಕ ಪ್ರ... ಚಾನಲನ್ನು ನಿಖರವಾಗಿ ನೋಡುತ್ತಾರೆ ಎಂ... ಅಂಕಿ-ಸಂಖ್ಯೆ ನಿರೀಕ್ಷಿಸುತ್ತಾರೆ.

ಕೇಬಲ್ ಆಪರೇಟರುಗಳು ಬಳಕೆದಾರ... ಪ್ರತಿ ತಿಂಗಳ ವಂತಿಗೆ ಮತ್ತು ತಮ್ಮ ಆದಾ... ಹೆಚ್ಚಿಸಲು ಬಯಸುತ್ತಿದ್ದಾರೆ. ಚಾನಲ್ ಕಂಪನಿಗಳು ವಂತಿಗೆ ಚಾನಲ್‌ಗಳ ವ್ಯವಸ್ಥೆಯನ್ನು ದೇಶದಾದ್ಯಂತ ತರಲು ಪ್ರಯತ್ನಿಸುತ್ತಿದ್ದಾರೆ. ಅವರ ಹಿತಾಸಕ್ತಿಯು... ಬಳಕೆದಾರನಿಂದ ಆದಷ್ಟು ಹೆಚ್ಚಿಗೆ



(ಮುಂದಿನ ಪು...

ಸುಲಿಯುವುದೇ. ಇವರಲ್ಲದೆ ಕೇಬಲ್ ಮೂಲಕ ವಿಡಿಯೋ, ಫೋನು, ಇಂಟರ್‌ನೆಟ್, ಬ್ಯಾಂಕಿಂಗ್ ಮುಂತಾದ ಸೇವೆ ಒದಗಿಸುವ ವ್ಯವಸ್ಥೆ ಬಾಕ್ಸ್ ಮೂಲಕ ಸಾಧ್ಯ. ಇಂತಹ ಸೇವೆಗಳಿಗೆ ವಂತಿಗೆ ಮೂಲಕ ಹಣ ವಸೂಲು ಮಾಡಲು ಈ ಬಾಕ್ಸ್ ಸಹಾಯ ಮಾಡುತ್ತದೆ. ರಿಲೆಯನ್ಸ್ ಮತ್ತು ಹಿಂದುಜಾ ಮೊದಲಾದ ದೊಡ್ಡ ತಿಮಿಂಗಲಗಳು ಇಂತಹ ಸೇವೆಗಳನ್ನು ಒದಗಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಹೀಗೆ ಎಲ್ಲರಿಗೂ ಈ 'ಬಾಕ್ಸ್' ಕಾಮಧೇನು. ಸರ್ಕಾರಕ್ಕೆ ಈ ಎಲ್ಲಾ ಹಿತಾಸಕ್ತಿಗಳ ಪರವಾಗಿ 'ಬಾಕ್ಸ್' ನ್ನು ಕಡ್ಡಾಯ ಮಾಡಲು ಹೊರಟಿರುವುದು. ಮನೆಗಳಿಗೆ ಏನು ಹೋಗುತ್ತದೆ ಎಂಬುದನ್ನು ನಿಯಂತ್ರಿಸುವ ಬಾಕ್ಸ್ ಇದ್ದ ಮೇಲೆ ಸರ್ಕಾರಕ್ಕೆ ಬೇಕಾದಾಗ 'ಬೇಡವಾದ' ಚಾನಲ್‌ಗಳನ್ನು ಸೆನ್ಸಾರ್ ಮಾಡುವುದು, ಸರ್ಕಾರಿ ಪ್ರಚಾರದ ಮಾಧ್ಯಮವಾದ ದೂರದರ್ಶನವನ್ನು ಕಡ್ಡಾಯ ಮಾಡುವುದು ಇತ್ಯಾದಿ - ಸರ್ಕಾರದ ಹಿತಾಸಕ್ತಿ. ಇವ್ಯಾವವೂ ಬಳಕೆದಾರ ಅಥವಾ ಒಟ್ಟಾರೆ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದವು ಅಲ್ಲ ಎಂಬುದನ್ನು ಗಮನಿಸಬೇಕು.

ಬಳಕೆದಾರ, ಸಾರ್ವಜನಿಕ ಹಿತಾಸಕ್ತಿಗೆ ತಿಲಾಂಜಲಿ

ಈ ಎಲ್ಲಾ ಹಿತಾಸಕ್ತಿಗಳ ನಿರೀಕ್ಷೆ 'ಬಾಕ್ಸ್'ನಿಂದ ಬೇರೆ ಬೇರೆ ಮಾತ್ರವಲ್ಲ ಹಲವು ಬಾರಿ ಪರಸ್ಪರ ವಿರುದ್ಧವಾಗಿರುವವು. ಈ ಎಲ್ಲವನ್ನು ಬಳಕೆದಾರ, ಸಾರ್ವಜನಿಕ ಹಿತಾಸಕ್ತಿಯಿಂದ ನಿರ್ವಹಿಸಿ, ಸರಿಯಾದ ನೀತಿ ರೂಪಿಸುವುದು ಸರ್ಕಾರದ ಕರ್ತವ್ಯ. ಆದರೆ ಇಂತಹದನ್ನು ಈ ಎನ್‌ಡಿಎ ಸರ್ಕಾರದಿಂದ ನಿರೀಕ್ಷಿಸುವುದು ಸಾಧ್ಯವೇ?

ಸೆಟ್-ಟಾಪ್ ಬಾಕ್ಸ್ ಸಾರ್ವಜನಿಕ ಸಂಪರ್ಕ ಅಂತರ್‌ರಚನೆ ದೃಷ್ಟಿಯಿಂದ ಪ್ರಮುಖ ಅಂಗವೇ. ಆದರೆ ಅದರ ಬೆಲೆ ಬಳಕೆದಾರ ತೆರಬೇಕೆ ಎಂಬುದು ಪ್ರಶ್ನೆ. ಇದು ಸಾರ್ವಜನಿಕ ಸಂಪರ್ಕ ವ್ಯವಸ್ಥೆಯ ಭಾಗವಾದರೆ ಅದನ್ನು ನಡೆಸುವ ಕಂಪನಿಗಳು(ಸಾರ್ವಜನಿಕ ಅಥವಾ ಖಾಸಗಿ) ಅದರ ಬೆಲೆ ತೆರಬೇಕಲ್ಲವೆ?

ಇದಲ್ಲದೆ ಇಂತಹ ಒಂದು ಆಧುನಿಕ ಸಾರ್ವಜನಿಕ ಸಂಪರ್ಕ ವ್ಯವಸ್ಥೆಯನ್ನು ಯೋಜನಾಬದ್ಧವಾಗಿ ಜಾರಿಗೆ ತರುವುದು ಮತ್ತು ಅದರಲ್ಲಿ ಬಳಕೆದಾರನ ಹಿತಾಸಕ್ತಿ ಕಾಪಾಡುವುದು ಸರ್ಕಾರದ ಕರ್ತವ್ಯವಲ್ಲವೇ? ಇಂತಹ ಕೆಲಸ ತರಾತುರಿಯಿಂದ ಸಾಧ್ಯವೇ? ದೇಶದ ಅಗತ್ಯಗಳಿಗೆ ಅನುಗುಣವಾದ ಸೆಟ್-ಟಾಪ್ ಬಾಕ್ಸ್‌ನ್ನು ಸ್ಥಳೀಯವಾಗಿ ತಯಾರಿಸುವುದು ಅಗತ್ಯವಲ್ಲವೇ?

ಇದಕ್ಕೆ ವ್ಯತಿರಿಕ್ತವಾಗಿ ಈ ಹೊಸ ಸಂಪರ್ಕ ವ್ಯವಸ್ಥೆಯನ್ನು ಕೆಲವು ಕಂಪನಿಗಳು ತಮ್ಮ ಏಕಸ್ವಾಮ್ಯ ಮಾಡಿ, ಭಾರಿ ಲಾಭ ಪಡೆಯುವ ಹುನ್ನಾರದಲ್ಲಿವೆ. ಸಂಪರ್ಕ ಮತ್ತು ಮಾಧ್ಯಮ ವ್ಯವಸ್ಥೆಯಲ್ಲಿ ಏಕಸ್ವಾಮ್ಯ ತಲೆ ಎತ್ತದಂತೆ ತಡೆಯುವುದು ಸರ್ಕಾರದ ನೀತಿಯಾಗಬೇಕಿತ್ತು. ಆದರೆ ಸರ್ಕಾರವೇ ಈ ಏಕಸ್ವಾಮ್ಯ ಬಯಸುವ ಶಕ್ತಿಗಳ ಕೈಗೊಂಬೆಯಾಗಿದೆ. 'ಬಾಕ್ಸ್' ವಿವಾದದ ಹಿಂದಿರುವ ತರಾತುರಿ, ಗೊಂದಲ ಸರ್ಕಾರವನ್ನು ಬಯಲುಗೊಳಿಸಿದೆ.

ಬಳಕೆದಾರ ಸಂಘಟನೆಗಳು, ರಾಜಕೀಯ ಶಕ್ತಿಗಳು 'ಬಾಕ್ಸ್' ಹಿಂದಿರುವ ಈ ಸರ್ಕಾರದ ಗೋಸುಂಬೆತನವನ್ನು ಬಲುಗೊಳಿಸಬೇಕು. ಆಧುನಿಕ ಪ್ರಜಾಸತ್ತಾತ್ಮಕ ಸಾರ್ವಜನಿಕ ಸಂಪರ್ಕ-ಮಾಧ್ಯಮ ವ್ಯವಸ್ಥೆಯನ್ನು ಸ್ಥಾಪಿಸುವ ನೀತಿಗೆ ಹೋರಾಡಬೇಕು. 'ಬಾಕ್ಸ್'ನ ಹೆಸರಲ್ಲಿ ಬಳಕೆದಾರನನ್ನು ದೋಚುವ ಹುನ್ನಾರಕ್ಕೆ ಪ್ರತಿರೋಧ ಇದರ ಮೊದಲ ಭಾಗ.

ಗ್ರಾಮೀಣ ಕೃಪಾಂಕ ನೌಕರರ ಬೃಹತ್ ರ್‍ಯಾಲಿ

ಸಂವಿಧಾನ ವಿಧಿ 31(ಬಿ) ಅಡಿಯಲ್ಲಿ ಶಾಸನ ರೂಪಿಸಲು ಒತ್ತಾಯ

ಜುಲೈ 1 ರಿಂದ ಜಿಲ್ಲಾ ಕೇಂದ್ರಗಳಲ್ಲಿ ಉಪವಾಸ ಸತ್ಯಾಗ್ರಹ

ಗ್ರಾಮೀಣ ಕೃಪಾಂಕ ನೌಕರರ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ) ಹಾಗೂ ಗ್ರಾಮೀಣ ಕೃಪಾಂಕ ನೌಕರರ ಹೋರಾಟ ಸಮಿತಿ ನೇತೃತ್ವದಲ್ಲಿ ಜೂನ್ 20 ರಂದು ಬೃಹತ್ ಮೆರವಣಿಗೆ ನಡೆಯಿತು. ಬೆಂಗಳೂರು ನಗರದ ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆಯು ಅಂತ್ಯದಲ್ಲಿ ಬಸವೇಶ್ವರ ವೃತ್ತದಲ್ಲಿ ಬೃಹತ್ ಬಹಿರಂಗ ಸಭೆ ನಡೆಯಿತು.

ನ್ಯಾಯಮೂರ್ತಿ ಹೆಚ್.ಜಿ. ಬಾಲಕೃಷ್ಣರವರು ಸಭೆಯನ್ನುದ್ದೇಶಿಸಿ ಮಾತನಾಡಿ ಸಂವಿಧಾನದ ಅಧಿ ನಿಯಮ 31(ಬಿ) ಅಡಿಯಲ್ಲಿ ರಾಜ್ಯ ಸರ್ಕಾರ ಶಾಸನ ರೂಪಿಸಿ, ಸಂವಿಧಾನದ ಷೆಡ್ಯೂಲ್ 9 ಕ್ಕೆ ಸೇರಿಸುವ ಮೂಲಕ ನೌಕರರ ಬದುಕನ್ನು ರಕ್ಷಿಸಬಹುದು ಮತ್ತು ಗ್ರಾಮೀಣ ಕೃಪಾಂಕವನ್ನು ರಕ್ಷಿಸಬಹುದು ಎಂದರು. ಸಭೆಯು ಇದೇ ಬೇಡಿಕೆಯನ್ನು ಸರ್ವಾನುಮತದಿಂದ ಅಂಗೀಕರಿಸಿ ಅದರ ಜಾರಿಗೆ ಒತ್ತಾಯಿಸಿತು. ಬಾಲಕೃಷ್ಣರವರು ನಮ್ಮ ಸರ್ಕಾರಗಳಿಗೆ ದೂರದೃಷ್ಟಿ ಮತ್ತು ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ ಎಂದು ಟೀಕಿಸಿದರು. ದೇಶದ ಜನಸಂಖ್ಯೆಯ ಶೇ.70 ಭಾಗ ಜನತೆ ಗ್ರಾಮೀಣ ಜನತೆ, ಗ್ರಾಮೀಣ ಕೃಪಾಂಕ ಅವಕಾಶವಂಚಿತರಿಗೆ ಸೌಲಭ್ಯ ವಂಚಿತರಿಗೆ ರಕ್ಷಣಾತ್ಮಕ ತಾರತಮ್ಯ. ನಮ್ಮ ಸಂವಿಧಾನದ ಮೂಲಭೂತ ತತ್ವಗಳಾದ ಸಮಾಜವಾದದ ಆಶಯಕ್ಕೆ ಪೂರಕವಾದದ್ದು. ಶಾಸನಕ್ಕಾಗಿ ಜನತೆ ಇರುವುದಲ್ಲ, ಜನತೆಗಾಗಿ ಶಾಸನ ಎಂದರು.

ರಾಜ್ಯ ಸರ್ಕಾರದ ಪರವಾಗಿ ಸಚಿವ ಡಿ.ಬಿ.ಚಂದ್ರೇಗೌಡರು ರ್‍ಯಾಲಿ ಉದ್ದೇಶಿಸಿ ಮಾತನಾಡಿ ಜುಲೈ 9ಕ್ಕೆ ವಿಧಾನಸಭಾ ಅಧಿವೇಶನ ಕರೆದಿರುವುದರಿಂದ ಸುಗ್ರೀವಾಜ್ಞೆ ಹೊರಡಿಸಲಾಗದು, 31(ಬಿ) ಅಡಿ ಶಾಸನ ರಚನೆ ವಿಚಾರವನ್ನು ಪರಿಶೀಲಿಸುವುದಾಗಿ ತಿಳಿಸಿದರು. ಸಂವಿಧಾನ ತಿದ್ದುಪಡಿ ಕೇಂದ್ರ ಸರ್ಕಾರದ ಹೊಣೆಯಾಗಿದ್ದು ಈ ಜವಾಬ್ದಾರಿ ನಿರ್ವಹಿಸಲು ಕೇಂದ್ರ ಸರ್ಕಾರ ಸಿದ್ಧವಿದೆಯೇ ಎಂಬ ಅನುಮಾನ ವ್ಯಕ್ತಪಡಿಸಿದರು. ಪರಿಷತ ಪಟ್ಟಿಯ ನಂತರ ಸುಮಾರು 4 ಸಾವಿರ ನೌಕರರು ಮಾತ್ರ ಉದ್ಯೋಗ ವಂಚಿತರಾಗಲಿದ್ದು ಅವರನ್ನು ಉದ್ಯೋಗದಿಂದ ಬಿಡುಗಡೆ ಮಾಡಿ ವಿಶೇಷ ನಿಯಮ ರೂಪಿಸಿ ಮರಳಿ ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿದರು.

ಸರ್ಕಾರದ ಈ ಅತಂತ್ರ ಧೋರಣೆಯ ವಿರುದ್ಧ, ಸರ್ಕಾರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂದು ಸಭೆಯು ಸರ್ವಾನುಮತದಿಂದ ಒತ್ತಾಯಿಸಿತು. ಹಾಗೂ ಈ ಮೇಲ್ಕಂಡ ಬೇಡಿಕೆಗಾಗಿ ಒತ್ತಾಯಿಸಿ ಜುಲೈ 1 ರಿಂದ ಅನಿರ್ದಿಷ್ಟಾವಧಿಯಾಗಿ ಎಲ್ಲಾ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ ನಡೆಸಲು ಸಭೆಯು ತೀರ್ಮಾನಿಸಿತು. ಹಾಗೂ ರಾಜ್ಯ ಸರ್ಕಾರವು ಸುಪ್ರಿಂ ಕೋರ್ಟ್ ತೀರ್ಪಿನ ಜಾರಿಗೆ ಮತ್ತಷ್ಟು ಸಮಯಾವಕಾಶ ಪಡೆಯಲು ತುರ್ತಾಗಿ ಮುಂದಾಗಬೇಕೆಂದು ಒತ್ತಾಯಿಸಿತು.

ಅಖಿಲ ಕರ್ನಾಟಕ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಯು.ಡಿ.ನರಸಿಂಹಯ್ಯ, ಕಾರ್ಯದರ್ಶಿ ಸಚ್ಚಿದಾನಂದಮೂರ್ತಿ, ಸಚಿವಾಲಯ ನೌಕರರ ಸಂಘಟನೆಯ ಅಧ್ಯಕ್ಷರಾದ ಮಠಪತಿಯವರು, ಸಿಐಟಿಯು ನ ಎಸ್.ಪ್ರಸನ್ನಕುಮಾರ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಚಂದ್ರಪ್ಪ ಹೊಸ್ಕೇರಾ ಭಾಗವಹಿಸಿದ್ದರು. ಕೃಪಾಂಕ ನೌಕರರ ಕ್ರಿಯಾ ಸಮಿತಿಯ ಮುಖಂಡರಾದ ಮಲ್ಲಿಕಾರ್ಜುನ, ಡಾ. ನಾರಾಯಣ ಪವಾರ್, ಸತೀಶ್, ನಾಗರಾಜು, ಡಾ. ಜಗದೀಶ್, ಲಕ್ಷ್ಮಿನಾರಾಯಣ ಹೆಗಡೆ, ವೀರಣ್ಣ ಇಂಡಿ ಭೀಮಾಶೀಶ್. ವೈ. ಸಿ ಟಿ ಮನಿ ಮುಂತಾದವರು ರ್‍ಯಾಲಿಯ ನೇತೃತ್ವ ವಹಿಸಿದ್ದರು.



ಕರಡು 'ಕರ್ನಾಟಕ ಗ್ರಾಮೀಣ ಕೃಪಾಂಕ ಸುಗ್ರೀವಾಜ್ಞೆ -2003' ಅನ್ನು ರೂಪಿಸಿ ಸರ್ಕಾರಕ್ಕೆ ಸಲ್ಲಿಸಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆ.ಎನ್.ಉಮೇಶ್‌ರವರು ರಾಮಕೃಷ್ಣ ಆಯೋಗದ ಶಿಫಾರಸ್ಸಿನಂತೆ ಗ್ರಾಮೀಣ ಅಭ್ಯರ್ಥಿಗಳಿಗೆ ನೀಡುತ್ತಿರುವ ಒಳ ಮೀಸಲಾತಿಯೇ ಆಗಲಿ, - ಈಗ ಹೇಳಲಾಗುತ್ತಿರುವ ಸುಮಾರು 4 ಸಾವಿರ ನೌಕರರ ಮರು ನೇಮಕಾತಿಯೇ ಆಗಲಿ, ಈ ವಿಚಾರ ನ್ಯಾಯಾಲಯದ ಮೆಟ್ಟಿಲು ಹತ್ತಿದಲ್ಲಿ ನಿಲ್ಲುವ ಸಾಧ್ಯತೆ ಕಡಿಮೆ. ಇದಕ್ಕೆ ಬದಲಿಗೆ ಸರ್ಕಾರ ಸಮಸ್ಯೆಗೆ ಶಾಶ್ವತ ಪರಿಹಾರ ರೂಪಿಸಲು ಮುಂದಾಗಬೇಕೆಂದು ಒತ್ತಾಯಿಸಿದರು.

ಪ್ರಾಂತ ರೈತ ಸಂಘದ ಪ್ರ.ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿ ಗ್ರಾಮೀಣ ಕೃಪಾಂಕ ನೌಕರರು ಎದೆಗುಂದದೆ ಧೈರ್ಯವಾಗಿ ಪರಿಸ್ಥಿತಿಯನ್ನು ಎದುರಿಸಬೇಕೆಂದು ಕರೆನೀಡಿದರು. ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ರಾಮಕೃಷ್ಣ ಮಾತನಾಡಿ ಸರ್ಕಾರದ ಕ್ರಮದ ಬಗೆಗೆ ಭ್ರಮೆ ಇರಿಸಿಕೊಳ್ಳದೇ ಚಳುವಳಿಗೆ ಮುಂದಾಗಬೇಕೆಂದು ಕರೆ ನೀಡಿದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಯು.ಡಿ.ನರಸಿಂಹಯ್ಯ ಕೃಪಾಂಕ ನೌಕರರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಎಸ್.ಎಫ್.ಐ ರಾಜ್ಯ ಅಧ್ಯಕ್ಷ ಕೆ.ಎಸ್.ಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು. ಎಸ್.ಎಫ್.ಐ ರಾಜ್ಯ ಉಪಾಧ್ಯಕ್ಷರಾದ ಬಿ.ರಾಜಶೇಖರ್ ಮೂರ್ತಿ ಸ್ವಾಗತಿಸಿದರು. ಡಿ.ವೈ.ಎಫ್.ಐ ರಾಜ್ಯ ಉಪಾಧ್ಯಕ್ಷರಾದ ಲಕ್ಷ್ಮಿ ಕುಮಾರ್‌ರವರು ವಂದಿಸಿದರು.

ಸಚಿವ ಸಂಪುಟದ ತೀರ್ಮಾನ ಕೃಪಾಂಕ ನೌಕರರನ್ನು ರಕ್ಷಿಸಿತೆ?

ಜೂನ್ 20' ರ ಕೃಪಾಂಕ ನೌಕರರ ಬೆಂಗಳೂರು ಚಲೋಗೆ ಮುನ್ನಾ ದಿನ 19 ರಂದು ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಮೊದಲ ಬಾರಿಗೆ ಅಧಿಕೃತವಾಗಿ ಕೃಪಾಂಕ ನೌಕರರ ಸಮಸ್ಯೆ ಕುರಿತು ಚರ್ಚಿಸಿದೆ. ಕೃಪಾಂಕ ನೌಕರರ ಸಮಸ್ಯೆಯ ಬಿಕ್ಕಟ್ಟಿಗೆ ಪರಿಹಾರ ಎಂಬಂತೆ ತಮ್ಮ 'ಸೂತ್ರ'ವನ್ನು ಘೋಷಿಸಿದೆ.

ಸರ್ಕಾರದ ಈ ಸೂತ್ರದಂತೆ, ಕೋರ್ಟ್ ಆದೇಶದ ಅನ್ವಯ 98-99' ರ ಸಾಲಿನ ನೇಮಕಾತಿಗಳಿಗೆ ಅರ್ಜಿಸಲ್ಲಿಸಿದ್ದ ಅಭ್ಯರ್ಥಿಗಳು ಹಾಗೂ ಕೃಪಾಂಕ ಪಡೆದವರೆಲ್ಲರ ಮರುಪಟ್ಟಿಯನ್ನು ಅರ್ಹತೆ ಆಧಾರದಲ್ಲಿ ಮಾಡಲಾಗುವುದು. ಈ ಪಟ್ಟಿಯ ಮೇರೆಗೆ ಸುಮಾರು 9000 ಕೃಪಾಂಕ ನೌಕರರು ಅರ್ಹತೆ ಮೇರೆಗೆ ನೌಕರಿಯಲ್ಲಿಯೇ ಉಳಿಯುತ್ತಾರೆ. ಉಳಿದಂತೆ ಸುಮಾರು 4500 ಕೃಪಾಂಕ ನೌಕರರನ್ನು ಕೆಲಸದಿಂದ ವಜಾ ಮಾಡಿ, ಆನಂತರ ವಿಶೇಷ ನಿಯಮಾವಳಿಗಳನ್ನು ರೂಪಿಸಿ ಮತ್ತೆ ಮರು ನೇಮಕ ಮಾಡಿಕೊಳ್ಳುವುದಾಗಿ ಹೇಳಿದೆ. ಈ ಮೂಲಕ ಕೋರ್ಟ್ ಆದೇಶವನ್ನು ಪಾಲಿಸಿದಂತೆಯೂ ಆಗುತ್ತದೆ ಮತ್ತು ನೌಕರರನ್ನು ರಕ್ಷಿಸಿದಂತೆಯೂ ಆಗುತ್ತದೆ ಎಂದು ಹೇಳುತ್ತಿದೆ.

ಈ ಕುರಿತು ಅನೇಕ ಪತ್ರಿಕೆಗಳು ಸಂಪಾದಕೀಯ ಬರೆದು, ಸೂಕ್ತ ತೀರ್ಮಾನ ಆದರೆ ತಡವಾಗಿದೆ. ಈ ತೀರ್ಮಾನವನ್ನು ಮುಂಚಿತವಾಗಿಯೇ ಕೈಗೊಳ್ಳಬೇಕಿತ್ತೆಂದು ಹೇಳಿವೆ.


ಆದರೆ ಸರ್ಕಾರ ಹೇಳಿರುವಷ್ಟು ಸುಲಭದ ಕ್ರಮ ಇದಾಗುವುದೇ? ಎಂಬುದೇ ಪ್ರಸ್ತುತ ಪ್ರಶ್ನೆ. ಅರ್ಹತೆ ಆಧಾರದಲ್ಲಿ ನೌಕರಿಯಲ್ಲಿ ಉಳಿಯುವ ಸುಮಾರು 9000 ನೌಕರರು ತಾವಿರುವ ಹುದ್ದೆಗಳಲ್ಲಿಯೇ ಉಳಿಯುತ್ತಾರೆಯೆ? ಅವರ ಈವರೆಗಿನ ಸೇವೆ, ಸೌಲಭ್ಯ- ಭತ್ಯೆಗಳು ಉಳಿಯುತ್ತಾವೆಯೇ? ಅಥವಾ ಅವರನ್ನು ಸಹಾ ಸೇವೆಯಿಂದ ಬಿಡುಗಡೆ ಮಾಡಿ ಮರುನೇಮಕ ಮಾಡಿಕೊಳ್ಳಬೇಕೆ? ಎಂಬುದು ಇನ್ನೂ ಸ್ಪಷ್ಟಗೊಳ್ಳಬೇಕಿದೆ. ಒಂದು ವೇಳೆ 9000 ಸಾವಿರ ನೌಕರರ ಈವರೆಗಿನ ಸೇವೆಯನ್ನು ಪರಿಗಣಿಸುವುದಾದರೆ, ಉಳಿದಂತೆ ಅರ್ಹತೆ ಆಧಾರದಲ್ಲಿ ಈಗ ಹೊಸದಾಗಿ ನೇಮಕಗೊಳ್ಳುವ ಕೃಪಾಂಕ ರಹಿತ ಅಭ್ಯರ್ಥಿಗಳಿಗೇಕೆ ಅದು ಲಭ್ಯವಾಗಬಾರದು ಎಂಬ ಪ್ರಶ್ನೆ ಏಳಬಹುದು. ಕೋರ್ಟ್ ಆದೇಶದ ಮೇರೆಗೆ ಕೃಪಾಂಕ ನೌಕರರ ಸೇವೆಯೇ ಕಾನೂನುಬಾಹಿರವಾಗಿರುವಾಗ, ಅದನ್ನು ಹೇಗೆ ಪರಿಗಣಿಸಲು ಸಾಧ್ಯ ಎಂಬುದು ಕಾನೂನು ತೊಡಕುಗಳನ್ನು ಉಂಟುಮಾಡಲಿವೆ. ಪರಿಣಾಮವಾಗಿ ಅರ್ಹತೆ ಆಧಾರದಲ್ಲಿ ಸೇವೆಯಲ್ಲಿ ಉಳಿಯುವ 9000 ನೌಕರರನ್ನು ಸಹಾ ಬಿಡುಗಡೆ ಮಾಡಿ, ಮರುನೇಮಕ ಮಾಡಿಕೊಳ್ಳಬೇಕಾಗಿ ಬರಬಹುದು.

ಉಳಿದಂತೆ ಅರ್ಹತಾ ಪಟ್ಟಿಯಲ್ಲಿ ಉಳಿಯದ 4500 ನೌಕರರನ್ನು ವಜಾ ಮಾಡಿ ಮರುನೇಮಕ ಮಾಡುವ ಸಂಬಂಧಿಸಿದಂತೆ ಸರ್ಕಾರ ರೂಪಿಸುವ "ವಿಶೇಷ ನಿಯಮಾವಳಿಗಳನ್ನು" ಯಾರಾದರೂ

ಪುಟ 11 ಕ್ಕೆ

ಇತಿಹಾಸದ ಪುಟಗಳಿಂದ

ದಲಿತ ಚಳುವಳಿಗೆ ಹೆಸರಾದ ಮಹಾರಾಷ್ಟ್ರದಲ್ಲಿ ಹಲವಾರು ನಾಯಕರು ಆಗಿಹೋಗಿದ್ದಾರೆ. ಜ್ಯೋತಿಬಾಫುಲೆ, ಡಾ.ಬಿ.ಆರ್.ಅಂಬೇಡ್ಕರ್ ಮುಂತಾದವರು. ಹಲವಾರು ದಲಿತ ಮುಖಂಡರು ದಲಿತ ಚಳುವಳಿಯನ್ನು ಕಮ್ಯುನಿಸ್ಟ್ ಚಳುವಳಿಯೊಂದಿಗೆ ಬೆಸೆದರು. ಆದರೆ ಅವರು ಬೆಳಕಿಗೆ ಬಾರದಿರುವುದು ವಿಪರ್ಯಾಸ. ಅಂತಹ ಹೆಸರಾಂತ ಮುಖಂಡ ಆರ್.ಬಿ.ಮೋರೆಯವರ ಜನ್ಮಶತಾಬ್ಧಿ ಈ ವರುಷ.



ದಲಿತ ಚಳುವಳಿ ಕಟ್ಟಿದ ಕಮ್ಯುನಿಸ್ಟ್ ಕಾಮ್ರೇಡ್ ಆರ್.ಬಿ.ಮೋರೆ

ಡಾ.ಬಿ.ಆರ್.ಅಂಬೇಡ್ಕರ್‌ರವರೊಂದಿಗೆ ಮಹಾಡ್ ಕೆರೆ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಮೋರೆಯವರು ಹುಟ್ಟಿದ್ದು ಮಹಾರಾಷ್ಟ್ರದ ರಾಯ್‌ಗಢ್ ಜಿಲ್ಲೆಯ ಮಹಾಡ್ ಹೋಬಳಿಯ ಲಾಡಲ್ಲಿ ಎಂಬ ಗ್ರಾಮದಲ್ಲಿ. ಅವರು ಪರಿಶಿಷ್ಟ ಜಾತಿಯ ಮಹಾರ್ ಜನಾಂಗದವರಾಗಿದ್ದರು.

11ನೇ ವಯಸ್ಸಿನಲ್ಲಿ ಅಸ್ಪೃಶ್ಯತೆ ವಿರುದ್ಧ ಚಳುವಳಿ:

ಬ್ರಿಟೀಷರ ಸೇವೆಯಲ್ಲಿದ್ದ ದಲಿತರ ಮಕ್ಕಳಿಗೆಂದೇ ಮಹಾರ್ ಹೋಬಳಿಯ ದಾಸ್‌ಗಾಂವ್ ಗ್ರಾಮದಲ್ಲಿ ಪ್ರತ್ಯೇಕ ಪ್ರಾಥಮಿಕ ಶಾಲೆಯೊಂದಿತ್ತು. ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಮೋರೆ ಸ್ಕಾಲರ್‌ಶಿಪ್ ಪಡೆದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಮಹಾಡ್‌ನಲ್ಲಿರುವ ಹೈಸ್ಕೂಲಿಗೆ ಸೇರಬೇಕೆಂದು ಬಯಸಿದರೆ, ಅಸ್ಪೃಶ್ಯರು ಎಂಬ ಕಾರಣಕ್ಕೆ ಅವರನ್ನು ಶಾಲೆಗೆ ಸೇರಿಸಿಕೊಳ್ಳಲಿಲ್ಲ. ಇದರ ವಿರುದ್ಧ ಸ್ಥಳೀಯ ಸಮಾಜ ಸುಧಾರಕರ ನೆರವಿನಿಂದ ಬ್ರಿಟೀಷ್ ಸರಕಾರಕ್ಕೆ, ಜಿಲ್ಲಾ ಕಲೆಕ್ಟರ್‌ರಿಗೆ ಪತ್ರ ಬರೆದು, ಸ್ಥಳೀಯ ಪತ್ರಿಕೆಗಳಿಗೆ ಪತ್ರದ ಪ್ರತಿಯನ್ನು ಬಿಡುಗಡೆಗೊಳಿಸಿದಾಗ ಹೈಸ್ಕೂಲಿನವರು ಮೋರೆಯವರನ್ನು ಶಾಲೆಗೆ ಸೇರಿಸಿಕೊಂಡರು. ಇದು ಅವರ ಪ್ರಥಮ ಯಶಸ್ವಿ ಹೋರಾಟ.

ಅಂದಿನ ಕಾಲದಲ್ಲಿ ಮೇಲ್ಜಾತಿ ಹಿಂದೂಗಳೊಂದಿಗೆ ದಲಿತರು ಒಂದೇ ಬಸ್ಸಿನಲ್ಲಿ ಪ್ರಯಾಣಿಸುವಂತಿರಲಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಯಾವುದೇ ವಸ್ತುಗಳನ್ನು ಮಾರುವಂತಿರಲಿಲ್ಲ. ಇದರ ವಿರುದ್ಧ ಹೋರಾಡಿ ಜಯ ಸಾಧಿಸಿದ ಮೋರೆ, ದಲಿತರಿಗಾಗಿ ಪ್ರತ್ಯೇಕ ಹೋಟೆಲೊಂದನ್ನು ನಡೆಸಿದರು. ಸೈನ್ಯದಿಂದ ನಿವೃತ್ತರಾದ ದಲಿತರು ಮತ್ತು ದಲಿತ ಚಳುವಳಿಯ ಕಾರ್ಯಕರ್ತರು ಸೇರುವ ನೆಲೆಯಾಗಿ ಇದು ಮಾರ್ಪಟ್ಟಿತು. ಈ ಸ್ಥಳವೇ ಹೆಸರಾಂತ ಮಹಾಡ್ ಕೆರೆ ಸತ್ಯಾಗ್ರಹಕ್ಕೆ ರೂಪುರೇಷೆ ನೀಡುವ ಕೇಂದ್ರವಾಯಿತು.

ಮಹಾಡ್ ಕೆರೆ ಸತ್ಯಾಗ್ರಹ:

1923 ರಲ್ಲಿ ಹೆಸರಾಂತ ಸಮಾಜ ಸುಧಾರಕ ಸಿ.ಕೆ.ಬೋಲೆ ಅವರ ಹೋರಾಟದ ಫಲವಾಗಿ ಮುಂಬೈ ವಿಧಾನಪರಿಷತ್ತಿನಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿ, ಪ್ರಪ್ರಥಮ ಬಾರಿಗೆ ಸಾರ್ವಜನಿಕ ಕೆರೆ, ಬಾವಿ, ಧರ್ಮಶಾಲಾ ಮತ್ತು ಇತರೆ ಸಾರ್ವಜನಿಕ ಸ್ಥಳಗಳಿಗೆ ದಲಿತರ ಪ್ರವೇಶವನ್ನು ಮುಕ್ತಗೊಳಿಸಲಾಯಿತು. ಇದರಿಂದ ಉತ್ತೇಜಿತರಾದ ಕಾಮ್ರೇಡ್ ಮೋರೆಯವರು 1926, ಡಿಸೆಂಬರ್ 4 ರಂದು ಅವರ ಗ್ರಾಮವಾದ ದಾಸ್‌ಗಾಂವ್ ನಲ್ಲಿರುವ ಕ್ರಾಫರ್ಡ್‌ನ ಕೆರೆಗೆ ದಲಿತರಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸಿ ಅದರಲ್ಲಿಯೂ ಯಶಸ್ವಿಯಾದರು. ಇದರಿಂದ ಇಡೀ ರಾಯಗಢ ಜಿಲ್ಲೆಯಲ್ಲಿ ದಲಿತರ ನಡುವೆ ಹೊಸ ಉಲ್ಲಾಸ, ಸ್ಫೂರ್ತಿ ಮೂಡಿತು.

ನಂತರ ಮಹಾಡ್‌ನಲ್ಲಿರುವ ಚೌವ್‌ದಾರ್ ಕೆರೆಗೂ ದಲಿತರಿಗೆ ಪ್ರವೇಶ ನೀಡಬೇಕೆಂದು ಒತ್ತಾಯಿಸಿ ಸಮಾವೇಶ ನಡೆಸಲಾಯಿತು. ಈ ಸಮಾವೇಶಕ್ಕೆ ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಆಹ್ವಾನಿಸಲಾಗಿತ್ತು. ಮಾರ್ಚ್ 19, 1927 ರಂದು ನಡೆದ ಈ ಬೃಹತ್ ಸಮಾವೇಶದಲ್ಲಿ ಮುಂಬೈ, ಥಾಣೆ, ಕೊಲಾಬ ಮತ್ತು ರತ್ನಗಿರಿ ಜಿಲ್ಲೆಗಳಿಂದ ಸಾಧಾರಣ 5000 ಕ್ಕೂ ಹೆಚ್ಚು ದಲಿತರು ಭಾಗವಹಿಸಿದ್ದರು. ಕಾಮ್ರೇಡ್ ಆರ್.ಬಿ.ಮೋರೆಯವರು ಸೂತ್ರಧಾರಿಯಾಗಿದ್ದ ಈ ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಅವರು ಮಾಡಿದ ಭಾಷಣದಿಂದ ಸ್ಫೂರ್ತಿಗೊಂಡ ದಲಿತರು ಶತಮಾನಗಳಿಂದ ನಿಷೇಧಿಸಲ್ಪಟ್ಟಿದ್ದ ಮಹಾಡ್ ಕೆರೆಗೆ ನುಗ್ಗಿದರು. ಅಲ್ಲಿನ ನೀರು ಕುಡಿಯುವುದರ ಮೂಲಕ ಶತಮಾನಗಳಿಂದ ಅಸ್ತಿತ್ವದಲ್ಲಿದ್ದ ಕಟ್ಟುಪಾಡಿನ ಕಟ್ಟೆಯನ್ನೊಡೆದರು.

ಇದರಿಂದ ರೋಷಗೊಂಡ ಮೇಲ್ಜಾತಿಯ ಹಿಂದೂಗಳು ಇಲ್ಲಸಲ್ಲದ ಅಪಪ್ರಚಾರ ನಡೆಸಿ, ದಲಿತರ ಮೇಲೆ ದೌರ್ಜನ್ಯ ನಡೆಸಿದರು. ಡಾ. ಅಂಬೇಡ್ಕರ್ ಮಧ್ಯಪ್ರವೇಶಿಸಿ ಸರಕಾರಕ್ಕೆ ಬರೆದು ಪರಿಸ್ಥಿತಿಯನ್ನು ಹತೋಟಿಗೆ ತರುವಲ್ಲಿ ನೆರವಾದರು. ಈ ಚಳುವಳಿಯಿಂದಾಗಿ ಡಾ. ಅಂಬೇಡ್ಕರ್ ದೇಶದಾದ್ಯಂತ ಖ್ಯಾತಿಗೆ ಬಂದರು.

ಡಾ. ಅಂಬೇಡ್ಕರ ಅವರು ಗೌರವಿಸುತ್ತಿದ್ದ ವ್ಯಕ್ತಿ

ಆರ್.ಬಿ.ಮೋರೆಯವರು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ ನಂತರವೂ ಅಂಬೇಡ್ಕರ್ ಅವರಿಗೆ ಪ್ರಿಯರಾಗಿದ್ದರು. ಒಮ್ಮೆ ಮುಂಬೈನ ಒಂದು ಸಾರ್ವಜನಿಕ ಸಭೆಯಲ್ಲಿ ಡಾ. ಅಂಬೇಡ್ಕರ್ ಮಾತನಾಡುತ್ತಿದ್ದರು. ಆಗ ಅವರು ವೈಸರಾಯ್ ಅವರ ಕಾರ್ಯಕಾರಿ ಮಂಡಳಿ (ಇಂದಿನ ಕೇಂದ್ರ ಸಚಿವ ಸ್ಥಾನಕ್ಕೆ ಸಮಾನ)ಯ ಸದಸ್ಯರಾಗಿದ್ದರು. ಕಾಮ್ರೇಡ್ ಮೋರೆಯವರು ದೂರದಲ್ಲಿ ಜನರ ನಡುವಿನಲ್ಲಿದ್ದರು. ಇದನ್ನು ಗಮನಿಸಿದ ಡಾ. ಅಂಬೇಡ್ಕರ್‌ರವರು ಮೋರೆಯವರನ್ನು ವೇದಿಕೆಗೆ ಬರಲು ಸೂಚಿಸಿದರು. ಮೋರೆಯವರು ಒಪ್ಪದಿದ್ದಾಗ, ಅವರನ್ನು ಎತ್ತಿಕೊಂಡು ಬರುವಂತೆ ತನ್ನ ಕಾರ್ಯಕರ್ತರಿಗೆ ಸೂಚಿಸಿದಾಗ ಮೋರೆ ಬೇರೆ ದಾರಿ ಇಲ್ಲದೆ ವೇದಿಕೆಗೆ ಹೋದರು. ಆಗ ಅಂಬೇಡ್ಕರ್ ಮೋರೆಯವರನ್ನು ಸಭಿಕರಿಗೆ ಪರಿಚಯಿಸಿದ ರೀತಿ ಹೃದಯಸ್ಪರ್ಶಿಯಾಗಿತ್ತು. "ಇವರು ಆರ್.ಬಿ.ಮೋರೆ. ಅತಿಗಣ್ಯ ವ್ಯಕ್ತಿ (Very great man). ನಾನು ರಾಜಕೀಯಕ್ಕೆ ಪ್ರವೇಶಿಸಲು ಕಾರಣರಾದ ಕೆಲವೇ ವ್ಯಕ್ತಿಗಳಲ್ಲಿ ಮೋರೆ ಕೂಡಾ ಒಬ್ಬರು".

(ದತ್ತಾ ಕೇಳ್ಕರ್ ಎಂಬುವರು ಬರೆದ ಆತ್ಮಶೋಧ ಎಂಬ ಪುಸ್ತಕದಲ್ಲಿ ಮೇಲಿನ ಅಂಶವನ್ನು ನಮೂದಿಸಲಾಗಿದೆ.)

1937 ಮತ್ತು 1946 ಡಾ. ಅಂಬೇಡ್ಕರ್ ಅವರು ತಮ್ಮ ಪಕ್ಷದ ವತಿಯಿಂದ ಚುನಾವಣೆಗೆ ಸ್ಪರ್ಧಿಸಲು ಮೋರೆಯವರಿಗೆ ಆಹ್ವಾನಿಸಿದರು. ಕಟ್ಟಾ ಕಮ್ಯುನಿಸ್ಟರಾಗಿದ್ದ ಮೋರೆಯವರು ಅತಿ ವಿನಿಯದಿಂದ ಆಹ್ವಾನವನ್ನು ಒಪ್ಪಲಿಲ್ಲ. ಅಂಬೇಡ್ಕರ್ ಅವರು ಆರಂಭಿಸಿದ ಹಲವಾರು ಪತ್ರಿಕೆಗಳಿಗೆ ಮೋರೆಯವರು ಲೇಖನ ಬರೆಯುತ್ತಿದ್ದರು. ಅದರಲ್ಲೊಂದು 'ಜನತಾ' ಎಂಬ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರೂ ಆಗಿದ್ದರು.

ಕಾರ್ಮಿಕ ಮತ್ತು ರೈತ ಹೋರಾಟದ ಮುಖಂಡ

ಅಖಿಲ ಬಾರತ ಕಿಸಾನ್ ಸಭಾ(AIKS) ದ ಸ್ಥಾಪನಾ ಸಮ್ಮೇಳನ (1936) ವು ಲಕ್ನೋದಲ್ಲಿ ಜರುಗಿದ್ದಾಗ ಆರ್.ಬಿ.ಮೋರೆ ಅದರಲ್ಲಿ ಭಾಗವಹಿಸಿದ್ದರು. 1938 ರಲ್ಲಿ ಅಂಬೇಡ್ಕರ್‌ರವರ ಸ್ವತಂತ್ರ ಕಾರ್ಮಿಕ ಪಕ್ಷ (Independent Labour Party) ದ ನೇತೃತ್ವದಲ್ಲಿ ಶಾಮರಾವ್ ಪರುಳೇಕರ್ ರವರು (ಆಗ ಅವರು ಕಮ್ಯುನಿಸ್ಟ್ ಪಕ್ಷ ಸೇರಿರಲಿಲ್ಲ) ರೈತರ ಬೃಹತ್ ಪ್ರತಿಭಟನೆ ನಡೆಸಿದಾಗ, ಮೋರೆಯವರು ಅದರಲ್ಲಿ ಭಾಗವಹಿಸಿದ್ದು ಮಾತ್ರವಲ್ಲದೆ, ಇತರ ಕಮ್ಯುನಿಸ್ಟ್ ಮುಖಂಡರು ಭಾಗವಹಿಸುವಂತೆ ಮಾಡಿದರು.

ಅದೇ ಸಂದರ್ಭದಲ್ಲಿ ಮುಂಬೈ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷವು ಕಾರ್ಮಿಕರ ವಿರುದ್ಧ ಕರಾಳ ಮಸೂದೆಯನ್ನು ಜಾರಿಗೆ ತಂದಾಗ ಕಮ್ಯುನಿಸ್ಟ್ ಪಕ್ಷ ಮತ್ತು ಐ.ಎಲ್.ಪಿ(ಅಂಬೇಡ್ಕರ್‌ರವರ) ಜಂಟಿಯಾಗಿ ನಡೆಸಿದ ಪ್ರತಿಭಟನೆಯಲ್ಲಿ ಮೋರೆಯವರು ಪ್ರಮುಖ ಪಾತ್ರವಹಿಸಿದ್ದರು. ಈ ಪ್ರತಿಭಟನೆ ಅಕ್ಟೋಬರ್ ಕ್ರಾಂತಿಯ ದಿನಾಚರಣೆಯಂದೇ ನಡೆದದ್ದು (1938 ನವೆಂಬರ್ 7) ವಿಶೇಷ.

1945 ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ILO) ಸಮ್ಮೇಳನದಲ್ಲಿ ಭಾಗವಹಿಸಿದ ಮೋರೆ ದಲಿತ ಕಾರ್ಮಿಕರು ಅನುಭವಿಸುತ್ತಿರುವ ಬವಣೆಯನ್ನು ಉದಾಹರಣೆ ಸಹಿತ ವಿವರಿಸಿದರು. ಅದೇ ಸಂದರ್ಭದಲ್ಲಿ ದಲಿತರಿಗೆ ಮೀಸಲಾತಿ ಅಗತ್ಯ ಎಂಬುದನ್ನು ಅವರು ಒತ್ತಾಯಪೂರ್ವಕವಾಗಿ ಹೇಳಿದರು. ಅಂದರೆ ಮೀಸಲಾತಿ ಜಾರಿಯಾಗುವ 5 ವರ್ಷಗಳ ಮೊದಲೇ ಅದರ ಅಗತ್ಯತೆಯನ್ನು ಕಂಡುಕೊಂಡಿದ್ದರು.

ಜೀವನ್ ಮಾರ್ಗನ ಪತ್ರಿಕೆ ಆರಂಭ

1964 ರಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ಕಮ್ಯುನಿಸ್ಟ್ ಚಳುವಳಿ ಇಬ್ಭಾಗ ಹೊಂದಿದಾಗ ಮೋರೆ ಸಿಪಿಐ(ಎಂ) ನೊಂದಿಗೆ ಗುರುತಿಸಿಕೊಂಡರು ಮಾತ್ರವಲ್ಲದೆ, ರಾಜ್ಯ ಸಮಿತಿಯ ಸದಸ್ಯರೂ ಆಗಿದ್ದರು. ಕೇಂದ್ರದ ಕಾಂಗ್ರೆಸ್ ಸರ್ಕಾರ ದೇಶದೆಲ್ಲೆಡೆ ನಡೆಸಿದಂತೆ ಮಹಾರಾಷ್ಟ್ರದಲ್ಲೂ ಸಿಪಿಐ(ಎಂ) ಮುಖಂಡರನ್ನು ಜೈಲಿನಲ್ಲಿರಿಸಿದ್ದರು. ಕಾಮ್ರೇಡ್ ಮೋರೆ ದೃಢತೆಯಿಂದ ಜನರನ್ನು ಎಚ್ಚರಿಸಲು ಸಿಪಿಐ(ಎಂ)ನ ಮುಖವಾಣಿಯಾಗಿ ಜೀವನ್ ಮಾರ್ಗ ಎಂಬ ಪತ್ರಿಕೆಯನ್ನು ಆರಂಭಿಸಿದರು. ಅದು ಇಂದಿಗೂ ಸಿಪಿಐ(ಎಂ)ನ ಮುಖಪತ್ರಿಕೆಯಾಗಿಯೇ ಇದೆ. ಇನ್ನೊಂದು ವಿಶೇಷವೆಂದರೆ ಈ ಪತ್ರಿಕೆ ಆರಂಭವಾದುದು 1965 ರ ಏಪ್ರಿಲ್ 14 ರಂದು. ಅಂಬೇಡ್ಕರ್‌ರವರ ಜನ್ಮ ದಿನಾಚರಣೆಯ ಸಂದರ್ಭ.

ಮಾರ್ಚ್ 1,1903 ರಂದು ಜನಿಸಿದ ಆರ್.ಬಿ.ಮೋರೆಯವರ ಜನ್ಮ ಶತಾಬ್ದಿಯನ್ನು ಸಿಪಿಐ(ಎಂ)ನ ಮಹಾರಾಷ್ಟ್ರದ ರಾಜ್ಯ ಸಮಿತಿ ವಿವಿಧ ಕಾರ್ಯಕ್ರಮಗಳ ಮೂಲಕ ಆಚರಿಸುತ್ತಿದೆ.

55 ವರ್ಷಗಳ ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ದಲಿತ ವಿಮೋಚನೆ ಪೂರ್ಣ ಯಶಸ್ಸನ್ನು ಸಾಧಿಸಿಲ್ಲ ಎನ್ನುವುದನ್ನು ಅರಿತ ಪ್ರಗತಿಪರ ಚಿಂತಕರಿಗೆ, ದಲಿತ ಚಳುವಳಿಯನ್ನು ಕಮ್ಯುನಿಸ್ಟ್ ಚಳುವಳಿಯೊಂದಿಗೆ ಬೆಸೆದ, ಡಾ. ಅಂಬೇಡ್ಕರ್ ಅವರಿಗೆ ಪ್ರಿಯರಾಗಿದ್ದ ಆರ್.ಬಿ.ಮೋರೆ ಸ್ಫೂರ್ತಿಯ ಸೆಲೆಯಾಗುತ್ತಾರೆ.

ಅಂಕಿ ಸಂಖ್ಯೆ

ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷಿತತೆ

ಕೆಲಸದ ಸ್ಥಳದಲ್ಲಿ ಕಾರ್ಮಿಕರ ಸುರಕ್ಷಿತತೆ ತೀವ್ರವಾದ ಆರ್ಥಿಕ-ಸಾಮಾಜಿಕ ಸಮಸ್ಯೆ ಎಂದು ಬಹಳ ಜನರಿಗೆ ಗೊತ್ತಿಲ್ಲ. ಈ ಬಗ್ಗೆ ಬೆಚ್ಚಿ ಬೀಳಿಸುವ ಅಂಕಿಸಂಖ್ಯೆಗಳು ಇಲ್ಲಿವೆ:

ಪ್ರತಿವರ್ಷ ಇಪ್ಪತ್ತು ಲಕ್ಷ (ಪ್ರತಿದಿನ ಐದು ಸಾವಿರ) ಕಾರ್ಮಿಕರು ಅಪಘಾತ ಮತ್ತು ಕೆಲಸ- ಸಂಬಂಧ, ಮರಣಾಂತಿಕ ಕಾರಣಗಳಿಂದ ಸಾಯುತ್ತಿದ್ದಾರೆ.

ಪ್ರತಿ ವರ್ಷ 27 ಕೋಟಿ ಅಪಘಾತಗಳು ಕೆಲಸದ ಸ್ಥಳದಲ್ಲಿ ಜರುಗುತ್ತವೆ.

ಪ್ರತಿವರ್ಷ 16 ಕೋಟಿ ಕಾರ್ಮಿಕರು ಕೆಲಸ- ಸಂಬಂಧ ರೋಗಗಳಿಗೆ ಗುರಿಯಾಗುತ್ತಿದ್ದಾರೆ.

ಪ್ರತಿವರ್ಷ 12 ಸಾವಿರ ಮಕ್ಕಳು ಕೆಲಸದ ಸ್ಥಳದಲ್ಲಿ ಸಾವಿಗೆ ಗುರಿಯಾಗುತ್ತಾರೆ.

ಅಪಾಯಕಾರಿ ರಾಸಾಯನಿಕಗಳಿಗೆ ಪ್ರತಿವರ್ಷ ಮೂರುವರೆ ಲಕ್ಷ ಕಾರ್ಮಿಕರು ಬಲಿಯಾಗುತ್ತಾರೆ.

ಒಟ್ಟಾರೆ ಉತ್ಪಾದನೆಯಲ್ಲಿ ಕೆಲಸ- ಸಂಬಂಧಿ ಅಪಘಾತ ಮತ್ತು ರೋಗಗಳಿಂದ ಶೇಕಡಾ ರಷ್ಟು ನಷ್ಟವಾಗುತ್ತಿದೆ.

ಫ್ರಾನ್ಸ್‌ನಲ್ಲಿ ಪೆನ್ಶನ್ ಕಡಿತದ ವಿರುದ್ಧ ಮುಷ್ಕರಗಳ ಅಲೆ

ಜಗತ್ತಿನೊಂದು ಸುತ್ತು

ಶರತ್‌ಚಂದ್ರ

ಫ್ರಾನ್ಸ್ ಕಳೆದ ಒಂದು ತಿಂಗಳಿನಿಂದ ಸರ್ಕಾರದ ...ನ್ಶನ್ ಮತ್ತಿತರ ಕಲ್ಯಾಣ ಯೋಜನೆಗಳ ಕಡಿತದ ...ತಿಯ ಬಗ್ಗೆ ರಣಾಂಗಣವಾಗಿದೆ. ಫ್ರಾನ್ಸ್‌ನಲ್ಲಿ ...ರ್ಕಾರದ ಈ ನೀತಿಯ ವಿರುದ್ಧ ಮುಷ್ಕರ, ...ರ್ವತ್ರಿಕ ಪ್ರತಿರೋಧದ ಅಲೆ ಹಬ್ಬಿದೆ. ಇತ್ತೀಚೆಗೆ ...ೂನ್ 10) ನಡೆದ ಭಾರಿ ಪ್ರದರ್ಶನದಲ್ಲಿ ಎರಡು ಲಕ್ಷ ಜನ ಭಾಗವಹಿಸಿದ್ದರು. ಇಡೀ ದೇಶದ ಎಲ್ಲಾ ನಗರ-ಪಟ್ಟಣಗಳನ್ನು ಸೇರಿಸಿದರೆ ಸುಮಾರು 15 ಲಕ್ಷ ಜನ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಮೇ 13 ರಂದು ನಡೆದ ದೇಶವ್ಯಾಪಿ ಪ್ರತಿಭಟನೆಯಲ್ಲಿ ಹತ್ತು ಲಕ್ಷ ಜನ ಭಾಗವಹಿಸಿದ್ದರು. ಫ್ರಾನ್ಸ್‌ನ 8ಲಕ್ಷ ಶಿಕ್ಷಕರು ಈ ಚಳುವಳಿಯ ನಾಯಕತ್ವ ವಹಿಸಿದ್ದಾರೆ.



...ನೌಕರರ ...ಪ್ರತಿಭಟನೆಯ ...ಂದು ದೃಶ್ಯ

ಇದರ ನಂತರ ಪೆನ್ಶನ್ ಕಡಿತದ ವಿರುದ್ಧ ಮುಷ್ಕರದ ಅಲೆ ಎದ್ದಿದೆ. ಜೂನ್ 3 ರಿಂದ ಪ್ಯಾರಿಸ್ ಮೆಟ್ರೋ, ರೈಲ್ವೆ ನೌಕರರು ಮುಷ್ಕರ ಹೂಡಿದ್ದಾರೆ.

ಸರ್ಕಾರ ಪೆನ್ಶನ್ ವ್ಯವಸ್ಥೆಯಲ್ಲಿ ಸುಧಾರಣೆ ('ವಿನಾಶ' ಎಂದು ಓದಿಕೊಳ್ಳಬಹುದು) ತರಲು ಒಂದು ಮಸೂದೆ ತಂದಿದೆ. ಪಾರ್ಲಿಮೆಂಟಿನ ಎದುರು. ಸರ್ಕಾರಕ್ಕೆ ಬಹುಮತ ಇದ್ದು, ಅದನ್ನು ಪಾಸು ಮಾಡಿಯೇ ತೀರುತ್ತೇವೆ ಎಂದು ಪ್ರಧಾನಿ -ಸರ್ಕಾರ ಹಠ ಹಿಡಿದಿವೆ. ಅಧ್ಯಕ್ಷರ ಬೆಂಬಲವೂ ಇದೆ ಇದಕ್ಕೆ. ಆದರೆ ಎಡಪಂಥೀಯ ಪಕ್ಷಗಳು ಪಾರ್ಲಿಮೆಂಟಿನಲ್ಲಿ ಅದರ ವಿರುದ್ಧ ಹೋರಾಡುತ್ತಿವೆ. ಈ ಬೇಸಿಗೆಯೊಳಗೆ ಪೆನ್ಶನ್ ವ್ಯವಸ್ಥೆ ಬದಲಾಯಿಸುತ್ತೇವೆ ಎಂದು ಫ್ರೆಂಚ್ ಸರ್ಕಾರ ಹಠ ಹಿಡಿದಿದೆ. ಫ್ರೆಂಚ್ ಕಾರ್ಮಿಕ ವರ್ಗ ಸಹ ಪೆನ್ಶನ್ ವ್ಯವಸ್ಥೆಯ ನಾಶ ಆಗಗೊಡುವುದಿಲ್ಲ ಎಂದು ಪಣ ತೊಟ್ಟಿದೆ. ಇಂತಹ ಹಣಾಹಣಿ(ಫ್ರೆಂಚ್ ಕಾರ್ಮಿಕವರ್ಗ ಮತ್ತು ಸರ್ಕಾರದ ಮಧ್ಯೆ) ಹೊಸತಲ್ಲ. 1995 ರಲ್ಲಿ ಪೆನ್ಶನ್ ವ್ಯವಸ್ಥೆ ಬಗ್ಗೆ ಇಂತಹ ಹಣಾಹಣಿಯಲ್ಲಿ ಹಲವು ವಾರಗಳ ಮುಷ್ಕರದ ನಂತರ ಸರ್ಕಾರ ಸೋತಿತ್ತು ಮಾತ್ರವಲ್ಲ, ಬಿದ್ದು ಹೋಗಿತ್ತು.

ಆಸ್ಟ್ರೀಯಾದಲ್ಲೂ ಪೆನ್ಶನ್ ವ್ಯವಸ್ಥೆಯಲ್ಲಿ ಭಾರಿ ಕಡಿತ ಮಾಡುವ ವಿರುದ್ಧ ಮುಷ್ಕರ ಆರಂಭವಾಗಿದೆ. ಜರ್ಮನಿಯಲ್ಲಿ 'ಏಜೆಂಡಾ 2010' ಎಂಬ ಹೆಸರಲ್ಲಿ ಪೆನ್ಶನ್ ಮತ್ತಿತರ ಕಲ್ಯಾಣ ಕ್ರಮಗಳಲ್ಲಿ ಕಡಿತದ ಹೊಸ ಪ್ರಸ್ತಾವವನ್ನು ಸರ್ಕಾರ ಮಂಡಿಸಿದೆ. ಇದರ ವಿರುದ್ಧ ಕಾರ್ಮಿಕ ವರ್ಗದ ಕಾರ್ಯಾಚರಣೆ ಆರಂಭವಾಗಿದೆ.

ಪಾಕಿಸ್ತಾನದಲ್ಲಿ ಸೈನ್ಯದ ಭೂಗ್ರಹಣ ವಿರುದ್ಧ ರೈತರ ಹೋರಾಟ

ಒಕಾರಾ ಪಾಕಿಸ್ತಾನದ ಪಂಜಾಬಿನ ಒಂದು ಪ್ರದೇಶ. ಇತ್ತೀಚೆಗೆ ಅದು ಭಾರಿ ಸುದ್ದಿಯಲ್ಲಿದೆ. ಪಾಕಿಸ್ತಾನಿ ಸೈನ್ಯದ ಜನರಲ್‌ಗಳ ವಿರುದ್ಧ ರೈತರ ಬಂಡಾಯ, ಸೈನ್ಯದ ಜತೆ ರೈತರ ಘರ್ಷಣೆ ಸುದ್ದಿಯಾಗುವುದಕ್ಕೆ ಕಾರಣ. ಒಕಾರಾದಲ್ಲಿ ರೈತರ ಹೋರಾಟ ಸೈನ್ಯದ ಜನರಲ್‌ಗಳ ವಿರುದ್ಧ. ನೇರವಾಗಿಯಾದರೂ ತಾವು ಪ್ರಜಾಪ್ರಭುತ್ವ ರಕ್ಷಿಸಲು ಸೈನ್ಯದ ಸರ್ವಾಧಿಕಾರ ವಿರುದ್ಧ ಹೋರಾಡುತ್ತಿದ್ದೇವೆ ಎನ್ನುವ ಪ್ರಮುಖ ರಾಜಕೀಯ ಪಕ್ಷಗಳಾಗಲೀ, ಮಾಧ್ಯಮಗಳಾಗಲೀ ಬೆಂಬಲ-ಪ್ರಚಾರ ನೀಡಿಲ್ಲ. ಆದರೆ ಈಗ ರೈತರು ಸೈನ್ಯದ ವಿರುದ್ಧ ಹೋರಾಡುತ್ತಿರುವುದರಿಂದ ಪತ್ರಿಕೆಗಳಿಗೆ ಅದನ್ನು ನಿರ್ಲಕ್ಷಿಸಲು ಸಾಧ್ಯವಾಗುತ್ತಿಲ್ಲ.

ಒಕಾರಾದಲ್ಲಿ 1874 ಗೇಣಿದಾರರ ಕಾನೂನು ಪ್ರಕಾರ ಭೂಮಿ ಮಾಲಕತ್ವ ಪಡೆದ ರೈತರು ಇದ್ದ ಪ್ರದೇಶ. 1999 ರ ಮಿಲಿಟರಿ ಕ್ಷಿಪ್ರಕ್ರಾಂತಿ ನಂತರ ಜನರಲ್ ಮುಷರಫ್ ಒಕಾರಾದಲ್ಲಿನ ಫಲವತ್ತಾದ ಭೂಮಿಯನ್ನು ಅವರ ವಿಧೇಯ ಜನರಲ್‌ಗಳಿಗೆ ಭಕ್ಷೀಸಾಗಿ ಕೊಟ್ಟ. ಆದರೆ ಈ ಭೂಮಿ ಅಲ್ಲಿನ ರೈತರಿಗೆ ಸೇರಿದ್ದು ಎಂದು ಮರೆತುಬಿಟ್ಟ. ಇದನ್ನು ಮಿಲಿಟರಿ ಫಾರ್ಮುಗಳು ಎಂದುಜನ ಕರೆಯ ಹತ್ತಿದರು. ಮಿಲಿಟರಿ ಸರ್ಕಾರ ಅಲ್ಲಿನ ರೈತರನ್ನು ಮಾಲಕತ್ವ ಬಿಟ್ಟು ಸಾಗುವಳಿ ಮಾಡಲು 'ಲೀಸ್'ಗೆ ಪಡೆಯುವಂತೆ ಮನವೊಲಿಸಲು ಪ್ರಯತ್ನಿಸಿತು.

ಆದರೆ ಅದು ವಿಫಲವಾದಾಗ ಸೈನಿಕರ ತುಕಡಿ ಯನ್ನೊಂದು ಕಳಿಸಿದೆ. ಆದರೆ ಅದಕ್ಕೆ ಬೆದರದೆ ಹೋರಾಟ ಮುಂದುವರೆದಿದೆ. ಸೈನಿಕರ ತುಕಡಿಗಳು ರೈತರ ಮನೆ ಮನೆಗೆ ಹೋಗಿ ರೈತರಿಂದ 'ಲೀಸ್' ಗೆ ಬಲಾತ್ಕಾರವಾಗಿ ಸಹಿ ಹಾಕಿಸಿಕೊಳ್ಳುವ ಪ್ರಯತ್ನ ದಲ್ಲಿದೆ. ಆದರೆ ಅದೂ ಈವರೆಗೆ ಫಲಕೊಟ್ಟಿಲ್ಲ.

ಮಿಲಿಟರಿ ಸರ್ಕಾರದ ಈ ಪ್ರಯತ್ನಕ್ಕೆ 'ಅಂಜುಮನ್ - ಮಝುದೀನ್-ಎ-ಪಂಜಾಬ್' ಎಂಬ ರೈತ ಸಂಘಟನೆ ಪ್ರತಿರೋಧ ಒಡ್ಡಿದೆ. 'ಮಾಲಕೀಜ್ ಯಾ ಮೌತ್' (ಮಾಲಕತ್ವ ಅಥವಾ ಮರಣ) ಈ ಸಂಘಟನೆಯ ಘೋಷಣೆ. ಈ ಸಂಘಟನೆಯಡಿ ರೈತರು ಜನರಲ್ ಪರವೇಜ್ ಸರ್ಕಾರದ ದಬ್ಬಾಳಿಕೆಗೆ ಸವಾಲು ಹಾಕಿದ್ದಾರೆ. ತಮ್ಮ ಭೂಮಿ ಬಿಟ್ಟುಕೊಡುವುದಿಲ್ಲ ಎಂದು ಪಣ ತೊಟ್ಟಿದ್ದಾರೆ. ರೈತರ ದೃಢ ಹೋರಾಟಕ್ಕೆ ನಿಧಾನವಾಗಿಯಾದರೂ ಇತರ ಪ್ರಜಾಸತ್ತಾತ್ಮಕ ವ್ಯಕ್ತಿಗಳ/ ಸಂಘಟನೆಗಳ ಬೆಂಬಲ ದೊರಕುತ್ತಿದೆ.

ಅಡ್ಮಿರಲ್ ಬೊಖಾರಿ ಎಂಬ ಮಾಜಿ ಸೇನಾಧಿಕಾರಿ ಒಕಾರಾದ ರೈತರಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ಮಾಧ್ಯಮಗಳು ಈಗ ರೈತರ ಹೋರಾಟಕ್ಕೆ ಬೆಂಬಲಿಸಿವೆ. ಸರ್ಕಾರದ ದಬ್ಬಾಳಿಕೆ ಖಂಡಿಸಿವೆ.

..........ಕೃಪಾಂಕ ನೌಕರರನ್ನು ರಕ್ಷಿಸಿತೆ?

...ಟ 8 ರಿಂದ

...ನ್ನಿಸಿದಲ್ಲಿ ಅದೂ ಸಹಾ ಕಾನೂನಿನ ಪರೀಕ್ಷೆಯಲ್ಲಿ ...ಲ್ಲದು. ಹಾಗಾಗಿ 4500 ನೌಕರರ ಮರುನೇಮಕದ ...ಶ ಮತ್ತೆ ಅತಂತ್ರಕ್ಕೆ ಸಿಲುಕುತ್ತವೆ.

ಈ ಹಿನ್ನೆಲೆಯಲ್ಲಿ ಸಚೀವ ಸಂಪುಟದ ...ರ್ಮಾನ ಕೃಪಾಂಕ ನೌಕರರ ಸಮಸ್ಯೆ- ಬಿಕ್ಕಟ್ಟನ್ನು ...ಹರಿಸಲಿದೆ ಎಂದು ಯಾರಾದರೂ ಸಹಜವಾಗಿ ...ವಿಸಿ ಅದಕ್ಕೆ ಮೆಚ್ಚಿಗೆ ಸೂಚಿಸಿದಲ್ಲಿ ಅದು ...ುರದ ತೀರ್ಮಾನವಾದೀತು.

...ಶ್ವತ ಪರಿಹಾರ ಬಯಸದ ಸರ್ಕಾರ

ಎಲ್ಲಾ ಕೃಪಾಂಕ ನೌಕರರನ್ನು ಒಟ್ಟಾರೆಯಾಗಿ ...ಸಲು ಹಾಗೂ ಮುಂದೆಯೂ ಕೃಪಾಂಕ ಸೌಲಭ್ಯ ...ಗಿಸುವ ಕ್ರಮಕ್ಕೆ ಸಂವಿಧಾನಾತ್ಮಕ ಸಂರಕ್ಷಣೆ ...ಕೆಯಲು ಸಂವಿಧಾನದ 31(ಬಿ) ಅಡಿ ...ಗ್ರೀವಾಜ್ಞೆ ಹೊರಡಿಸಿ 9ನೇ ಶೆಡ್ಯೂಲಿಗೆ ಸೇರಿಸಿ ...ಬ ಶಾಶ್ವತ ಪರಿಹಾರದ ಬೇಡಿಕೆಯನ್ನು ...ುವರೆಗೆ ರಾಜ್ಯ ಸರ್ಕಾರ ಅಧಿಕೃತವಾಗಿ ...ಸ್ಕರಿಸಿಲ್ಲ, ಆದರೆ 20' ರ ರ್‍ಯಾಲಿಯಲ್ಲಿ ಕಾನೂನು ...ವರ ಮುಂದೆ ಈ ಬೇಡಿಕೆಯನ್ನು ...ಸ್ತಾಯಿಸಿದಾಗ, ಅವರು ಹೇಳಿದ ಉತ್ತರ ಎಂದರೆ ...ೈ 9. ಕ್ಕೆ ಅಧಿವೇಶನ ಕರೆದುಬಿಟ್ಟಿದ್ದೇವೆ. ...ಗಿ ಒಮ್ಮೆ ಅಧಿವೇಶನ ಕರೆದ ಮೇಲೆ ...ಗ್ರೀವಾಜ್ಞೆ' ಹೊರಡಿಸಲು ಸಾಧ್ಯವಾಗದು ...ಬಂದಾಗಿದೆ. ಅಂದರೆ ಸುಗ್ರೀವಾಜ್ಞೆ ಹೊರಡಿಸುವುದನ್ನು ತಡೆಯಲೆಂದೇ ಅದಿವೇಶನ ಕರೆದಂತಾಗಿದೆ.

ಇದರ ಜೊತೆಯಲ್ಲಿ ಸರ್ಕಾರ ಸಲ್ಲಿಸಿರುವ ಮರುಪರಿಶೀಲನಾ ಅರ್ಜಿ ಸುಪ್ರಿಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರುವುದು ಜುಲೈ 7 ರಂದು, ಆದರೆ ಕೃಪಾಂಕ ನೌಕರರನ್ನು ವಜಾ ಮಾಡಲು ಸುಪ್ರಿಂ ಕೋರ್ಟ್ ನೀಡಿರುವ ಗಡುವು ಜುಲೈ 6, ಬಹುತೇಕ ಜುಲೈ 5 ರೊಳಗೆ ನೌಕರರನ್ನು ವಜಾ ಮಾಡಬೇಕಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಲು ಇದ್ದ ಅವಕಾಶಕ್ಕೆ ಅದಿವೇಶನ ಕರೆದು ಅಡ್ಡಗಾಲಾಕಿದೆ. ಜೂನ್ 19'ರ ಸಚಿವ ಸಂಪುಟದ ತೀರ್ಮಾನವನ್ನು ಸುಪ್ರಿಂ ಕೋರ್ಟ್‌ಗೆ ತಿಳಿಸಿ, ಮತ್ತಷ್ಟು ಕಾಲಾವಕಾಶ ಕೇಳುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಸುಪ್ರಿಂ ಕೋರ್ಟ್ ಕಾಲಾವಕಾಶ ನೀಡುತ್ತದೆಯೆ ಎಂಬುದು ಮತ್ತೊಂದು ಆತಂಕದ ವಿಷಯವಾಗಿದೆ.

ಅಂತಿಮವಾಗಿ ಎಲ್ಲಾ ಕೃಪಾಂಕ ನೌಕರರ ರಕ್ಷಣೆ ಮಾಡಲು ರಾಜ್ಯ ಸರ್ಕಾರಕ್ಕೆ ಬದ್ಧತೆ ಇದ್ದಲ್ಲಿ ಜುಲೈ 9 ರಿಂದ ಪ್ರಾರಂಭವಾಗಲಿರುವ ಅದಿವೇಶನದಲ್ಲಾದರೂ ಸಂವಿಧಾನದ 31(ಬಿ) ಅಡಿ ಮಸೂದೆ ಮಂಡಿಸಿ, ಅಂಗೀಕರಿಸಿ ಶಾಸನ ಮಾಡಬೇಕಿದೆ, ಹಾಗೂ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಸದರಿ ಶಾಸನವನ್ನು ಸಂವಿಧಾನದ 9ನೇ ಶೆಡ್ಯೂಲಿಗೆ ಸೇರಿಸಲು ಮುಂದಾಗಬೇಕಿದೆ.

ಕೃಪಾಂಕ ನೌಕರರು ಇರುವುದು ಎಷ್ಟು?

ಕೋರ್ಟ್ ಆದೇಶ ಬಂದಾಗ ಕೃಪಾಂಕ ನೌಕರರ ಸಂಖ್ಯೆ 13,500 ಎಂದು ತಿಳಿಯಲಾಯಿತು. ಮೇ 27 ರ ದುಂಡು ಮೇಜಿನ ಸಭೆಯಲ್ಲಿ ಕಾನೂನು ಸಚಿವರು ತಿಳಿಸಿದ್ದು ಸಂಖ್ಯೆ ನಿಖರವಾಗಿ 13270 ಎಂದು. ಆನಂತರ ಜೂನ್ 20' ರ ಬೆಂಗಳೂರು ಚಲೋ ಉದ್ದೇಶಿಸಿ ಮಾತನಾಡುತ್ತಾ ಅವರು ತಿಳಿಸಿದ್ದು ಇತ್ತೀಚಿನ ವರದಿ ಮೇರೆಗೆ ಗ್ರಾಮೀಣ ಕೃಪಾಂಕ ನೌಕರರ ಸಂಖ್ಯೆ 13,780 ಎಂದು ಹೀಗೆ ಬದಲಾಗುತ್ತಿರುವ ಸಂಖ್ಯೆ ಗಮನಿಸಿದರೆ ಜುಲೈ 5 ರ ವೇಳೆಗೆ ನೌಕರಿ ಕಳೆದುಕೊಳ್ಳುವವರನ್ನು ಲೆಕ್ಕ ಹಾಕಿದಾಗಲೇ ನಿಜವಾದ ಸಂಖ್ಯೆ ಗೊತ್ತಾಗುವುದಿರಬೇಕು?

- ಕೆ.ಎನ್.ಉಮೇಶ್

ಸಿಐಟಿಯು ಗೆಲುವು

ಇತ್ತೀಚೆಗೆ ನಡೆದ ಭದ್ರಾವತಿಯ ವಿಐಎಸ್‌ಎಲ್ ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಿ.ಐ.ಟಿ.ಯು ವಿನ ಕಾಂ.ಎಲ್. ರಂಗೇಗೌಡರು ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ.

ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಯಿಂದಾಗಿ ವಿ.ಐ.ಎಸ್.ಎಲ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವ ಹುನ್ನಾರದ ಹಿನ್ನೆಲೆಯಲ್ಲಿ ಈ ಚುನಾವಣೆಗೆ ಮಹತ್ವ ಬಂದಿತ್ತು. ಖಾಸಗೀಕರಣದ ವಿರುದ್ಧ ಹೋರಾಡುವ ಸಮರ್ಥ ನಾಯಕತ್ವ ಬಯಸಿ ಕಾರ್ಮಿಕರು ಸಿ.ಐ.ಟಿ.ಯು ವನ್ನು ಆಯ್ಕೆಮಾಡಿಕೊಂಡಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನ ಉಮಾಪತಿಯೇ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ತಯಾರಿ ನಡೆಸಿದ್ದರು. ಆದರೆ ಗೆಲ್ಲುವುದು ಸಾಧ್ಯವೇಂದಾಯಿತು, ಚುನಾವಣೆಯಿಂದ ಹಿಂದೆಸರಿದು, ಬಿಜೆಪಿ ಮತ್ತು ಕಾಂಗ್ರೆ (ಅಸ್ಲ್ರ್ ಪಾಶಾ ಗುಂಪು)ಗಳು ವಿಜೇಂದ್ರ ಎಂಬುವವರನ್ನು ನಿಲ್ಲಿಸಿ ಸಿ.ಐ.ಟಿ.ಯು. ಅಭ್ಯರ್ಥಿಯನ್ನು ಸೋಲಿಸಲು ಭಾರಿ ಪ್ರಯತ್ನ ನಡೆಸಿದ್ದರು. ಲಕ್ಷಾಂತರ ರೂಪಾಯಿಗಳ ಹಣ, ಹೆಂಡ, ಕಂಡಗಳನ್ನು ಹಂಚಿದರು, ಅನಧಿಕೃತ ಕರಪತ್ರಗಳನ್ನು ಬಿಡುಗಡೆ ಮಾಡಿ ಅಪಪ್ರಚಾರ ನಡೆಸಿದ್ದರು ಆದರೂ ಕಾರ್ಮಿಕವರ್ಗ ಎಚ್ಚೆತ್ತು ಈ ಬಾರಿ ಅಧ್ಯಕ್ಷಗಾದಿಗೆ ಸಿ.ಐ.ಟಿ.ಯು. ಅಭ್ಯರ್ಥಿಯನ್ನೇ ಆಯ್ಕೆ ಮಾಡಿದ್ದಾರೆ. ಉಳಿದಂತೆ ಖಾಸಗೀಕರಣ ವಿರೋಧಿಸುವ ಧುರೀಣರನ್ನೇ ಆಯ್ಕೆ ಮಾಡಿದ್ದಾರೆ, ಇದರಿಂದಾಗಿ ವಿ.ಐ.ಎಸ್.ಎಲ್. ರಕ್ಷಣೆಯ ಹೋರಾಟ ಮುಂದುವರೆಯುತ್ತದೆ



ಕೆ.ಜಿ.ಕೃಷ್ಣಮೂರ್ತಿಯವರಿಂದ ಉದ್ಘಾಟನೆ

ಚಿಂತನದ 'ಪಾಠ ನಾಟಕ ರೆಪರ್ಟರಿ'

'ಚಿಂತನ ಉತ್ತರ' ಕನ್ನಡವು ತನ್ನ ದಶವಾರ್ನೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಮಹಾತ್ವಾಕಾಂಕ್ಷೆ ಯೋಜನೆಯಾದ ಮಕ್ಕಳ ಪಾಠನಾಟಕ ರೆಪರ್ಟರಿ ಹೊನ್ನಾವರದಲ್ಲಿ ಪ್ರಾಯೋಗಿಕ ಪ್ರದರ್ಶನದೊಂದಿಗೆ ಉದ್ಘಾಟನೆಗೊಂಡಿತು. ಹೊನ್ನಾವರದ ನ್ಯೂ ಇಂಗ್ಲಿಷ್ ಸ್ಕೂಲಿನ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ರಂಗತಜ್ಞ ಕಿನ್ನರಮೇಶ- ತುಮಲಿಯ ನಿರ್ದೇಶಕ ಕೆ.ಜಿ.ಕೃಷ್ಣ ಮೂರ್ತಿಯವರು 'ಪಾಠ ನಾಟಕ ರೆಪರ್ಟರಿ' ಎನ್ನುವ ಸುತ್ತೋಲೆ ಸುರುಳಿಯನ್ನು ಬಿಚ್ಚುವುದರೊಂದಿಗೆ ವಿಶಿಷ್ಟವಾಗಿ ಉದ್ಘಾಟಿಸಿ ಮಾತನಾಡುತ್ತಾ "ಶಾಲಾ ಶಿಕ್ಷಣದಲ್ಲಿ ನಾಟಕವನ್ನು ಅಳವಡಿಸಿ ಶಿಕ್ಷಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕೆಂದು ಸರಕಾರ ಬಯಸಿದೆ. ಅದಕ್ಕಿಂತ ಹಿಂದೆಯೇ ಅಂಥ ಪ್ರಯೋಗಗಳು ಆಗಿವೆ. ನಾಟಕದಿಂದ ಮಕ್ಕಳು ರಂಗಶಿಕ್ಷಣದ ಅನೇಕ ಸಂಗತಿಗಳನ್ನು ಕಲಿಯುತ್ತಾರೆ. ಜೀವನ ಉತ್ತಮವಾಗುವುದು ಇದರಿಂದ. ಶಿಕ್ಷಣ ಎಂದರೆ ಕೇವಲ ಅಂಕಗಳಿಕೆಯ ಶಿಕ್ಷಣವಲ್ಲ. ಅಮೇರಿಕಾಕ್ಕೆ ಹೋಗುವುದೇ ಗುರಿ ಆದರೆ, ನಿಸರ್ಗದಿಂದ ಮನುಷ್ಯ ದೂರ ಹೋದಂತೆ ಜೀವನ ಬರಡಾಗುತ್ತದೆ. ಇಂದು ನಗರ ಪ್ರದೇಶದಲ್ಲಿ ಮಗುವಿಗೆ ಹಕ್ಕಿ ಎಂದರೆ ಏನು ಎಂದೇ ಅರಿವಿರುವುದಿಲ್ಲ. ಹಕ್ಕಿ ಎಂದರೆ ವಿಮಾನದ ಹಾಗೇ ಇರುತ್ತದೆ ಎಂದು ಹೇಳುತ್ತಾರೆ. ಇದು ವಿಪರ್ಯಾಸ ಹಕ್ಕಿಯ ಮುಖಾಂತರ ವಿಮಾನದ ಪರಿಚಯ ಆಗಬೇಕೇ ಹೊರತು ವಿಮಾನದ ಮೂಲಕ ಹಕ್ಕಿಯ ಪರಿಚಯವಲ್ಲ ಎಂದರು. ಮಕ್ಕಳ ನಾಟಕದ ಮೂಲಕ ಅವರ ವ್ಯಕ್ತಿತ್ವದ ವಿಕಾಸಕ್ಕೆ ಬೇರೆ ಬೇರೆ ಆಯಾಮಗಳು ದೊರಕುತ್ತವೆ. ಇಲ್ಲಿ ಮಾದರಿಗಾಗಿ ಮಾಡುವ ರೆಪರ್ಟರಿ ಒಂದು ವಿನೂತನ ಪ್ರಯೋಗ. ಇಡೀ ರಾಜ್ಯದಲ್ಲಿ ಮಕ್ಕಳ ಪಾಠವನ್ನೇ ನಾಟಕಕ್ಕೆ ಅಳವಡಿಸಿಕೊಂಡು ಒಂದು ರೆಪರ್ಟರಿ ಇರುವುದು ಇದೇ ಮೊದಲು. ಇದನ್ನು ಕಲಿಕೆಯಲ್ಲಿ ಶಿಕ್ಷಕರು ಹೇಗೆ ಅಳವಡಿಸಿಕೊಳ್ಳಬೇಕೆಂಬುದರ ಬಗ್ಗೆ ಚಿಂತನೆ ನಡೆಯಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಮೂರ್ತಿದೇರಾಜೆ ಮಾತನಾಡಿ "ಇಲ್ಲಿ ಪ್ರಾಥಮಿಕ ಶಾಲೆಯ ಪಾಠಗಳನ್ನು ಆರಿಸಿಕೊಂಡು ನಾಟಕಕ್ಕೆ ಅಳವಡಿಸಲಾಗಿದೆ. ನಮ್ಮಲ್ಲಿ ಮಕ್ಕಳಿಗೆ ಹೇಳಿಕೊಟ್ಟಷ್ಟು ತಿಳಿಯದು ಎನ್ನುತ್ತಾರೆ. ಆದರೆ ನಾಟಕ ಆದ ಪಾಠ ಬಹಳ ಪರಿಣಾಮಕಾರಿ. ನಮ್ಮ ಶಿಕ್ಷಕರು ಯಾವುದನ್ನು ನಾಟಕ ಮೂಲಕ ಹೇಳಿದ್ದಾರೋ ಅದೇ ಇಂದಿಗೂ ನೆನಪಿದೆ. ನಾಟಕದ ಮೂಲಕ ಪಾಠ ಎನ್ನುವುದು ಮಕ್ಕಳಿಗೆ ಮಾತ್ರ ಎಂದು ತಿಳಿಯಬೇಕಿಲ್ಲ. ಎಲ್ಲಾ ಹಂತದ ಶಿಕ್ಷಣದಲ್ಲೂ ಇದು ಪರಿಣಾಮಕಾರಿ. ಹಲವು ಅಂಶಗಳನ್ನು ಭಾಷಣದಿಂದ ತಿಳಿಸಲಾಗದು. ಅದು ನಾಟಕದ ಕ್ರಿಯೆಯಿಂದ ಚೆನ್ನಾಗಿ ತಿಳಿಯುತ್ತವೆ. ಆದ್ದರಿಂದ ಶಿಕ್ಷಣದಲ್ಲಿ ಪಾಠಗಳು ನಾಟಕಕ್ಕೆ ಅಳವಡಿಸುವುದೂ ಬಹಳ ಪರಿಣಾಮಕಾರಿ ... ಇಂತಹ ಪ್ರಯೋಗ ನಡೆಯುತ್ತಿರುವ ... ಸ್ವಾಗತಾರ್ಹ. ಪ್ರತಿ ಜಿಲ್ಲೆಯಲ್ಲಿ, ತಾಲ್ಲೂ... ಒಂದರಂತೆ ಇಂತಹ ರೆಪ... ಹುಟ್ಟಿಕೊಳ್ಳಬೇಕು" ಎಂದರು.

ಅಧ್ಯಕ್ಷತೆ ವಹಿಸಿ ಮಾತನಾ... ಡಾ.ಆರ್.ವಿ.ಭಂಡಾರಿಯವರು "ಇಲ್ಲಿ ... ಪ್ರಯೋಗಗಳನ್ನು ಹೇಗೆ ವರ್ಗದಲ್ಲಿ ... ಅಳವಡಿಸುವುದು ಎಂದು ಚಿಂತಿಸಬೇಕು. ...

ಇದೊಂದು ಮಾದರಿಯೇ ಹೊರತು ಅಂ... ಅಲ್ಲ. ನಮ್ಮ ನಾಡಿನಲ್ಲಿ ಅಲ್ಲಲ್ಲಿ ...

ಈ ಪ್ರಯೋಗ ನಡೆಯುತ್ತಿದೆ. ಜಿಲ್ಲೆ... ಸಹ. ಇಂಥವು ಹಲವು ಪ್ರಯೋಗವಾಗಬೇ... ಅಂದರೆ ಈ ಕ್ಷೇತ್ರ ಸಮೃದ್ಧಿಯಾಗುತ್ತದೆ. ಇ... ಗೆಳೆಯರು ಬಹಳ ಪರಿಶ್ರಮದಿಂದ ಈ ಪ್ರ... ವನ್ನು ಸಿದ್ಧಪಡಿಸಿದ್ದಾರೆ. ಇದಕ್ಕೆ ಪಾಲಕ ವ... ಶಿಕ್ಷಕವರ್ಗದ ಮತ್ತು ಇಲಾಖೆಯ ಸಹ... ಸಹಕಾರ ಅಗತ್ಯವಾಗಿದೆ' ಎಂದರು.

"ಇಲ್ಲಿಯ ಪಾಠಗಳು ನಾಟಕ ... ತಾಳುವುದರ ಮೂಲಕ ಪಠ್ಯದ ಭಿನ್ನ... ಸಾಧ್ಯತೆಗಳನ್ನು, ಅನುಭವಗಳನ್ನು ಧ್ವನಿಸು... ಹಾಗೂ ದೊರಕುವ ರಂಗಾನುಭವ ರಂಗ ... ಮತ್ತು ಶಿಕ್ಷಣದಲ್ಲಿ ರಂಗಭೂಮಿ ಈ ... ಅನುಭವಗಳನ್ನು ನಮಗೆ ದೊರಕಿಸಿಕೊ... ಎಂಬ ನಂಬಿಕೆ ನಮ್ಮದು" ಎಂದು ಪ್ರಾಸ್ತಾವಿ... ಮಾತನಾಡಿದ ಕಿರಣಭಟ್ಟ ಹೇಳಿದರು.

ಶ್ರೀಪಾದ ಭಟ್ಟ ಕಾರ್ಯಕ್ರಮ ನಿರ್ವಹಿ... ಚಿಂತನದ ಸಂಚಾಲಕ ವಿಠ್ಠಲ ಭಂ... ಸ್ವಾಗತಿಸಿದರು.

- ವಿಠ್ಠಲ ಭಂ...

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಮಕ್ಕಳ ರಂಗಭೂಮಿ ಚಟುವಟಿಕೆಗಳು ಲಾಗಾಯ್ತಿನಿಂದಲೂ ನಡೆದು ಬಂದಿವೆ. ಹಳೆಯ ಪೀಳಿಗೆಯ ಶಿಕ್ಷಕರನೇಕರು ಮಕ್ಕಳನ್ನೇ ಮುಖ್ಯವಾಗಿಟ್ಟುಕೊಂಡು ಹಲವು ತೆರನಾದ ಚಟುವಟಿಕೆಗಳನ್ನು ನಡೆಸಿದ್ದಿದೆ. ಇತ್ತೀಚಿಗೆ ಮಕ್ಕಳ ರಂಗಭೂಮಿ' ಎಂಬ ಪ್ರಕಾರ ಹುಟ್ಟಿಕೊಂಡ ಮೇಲೆ ಕೆಲವಾರು ಜನ ಇಂಥ ರಂಗ ಭೂಮಿಯನ್ನೇ ಚಟುವಟಿಕೆಯ ಕೇಂದ್ರ ವಾಗಿಟ್ಟುಕೊಂಡು ಹಲವಾರು ಪ್ರಯೋಗಗಳನ್ನು ನಡೆಸಿದ್ದಾರೆ.


ಇಂಥ ಸಂದರ್ಭದಲ್ಲಿಯೇ ಶಿಕ್ಷಣಕ್ಕಾಗಿ ರಂಗಭೂಮಿಯನ್ನು ಬಳಸುವ ಯೋಚನೆ ಬಂದದ್ದು. ನಿಜವಾದ ಶಾಲೆಯೊಂದರ ಚಟುವಟಿಕೆ ರಂಗಚಟುವಟಿಕೆಯ ಸ್ವರೂಪವನ್ನು ಹೊಂದಿರುತ್ತದೆ. ರಂಗಭೂಮಿ ಎಂದರೆ ನಟ, ಪಠ್ಯವೊಂದನ್ನು ಪ್ರೇಕ್ಷಕರಿಗೆ ಸಂವಹನಗೊಳಿಸುವ ಕ್ರಿಯೆ. ಶಿಕ್ಷಕ ವಿದ್ಯಾರ್ಥಿಗಳಿಗೆ ಪಠ್ಯವನ್ನು ಸಂವಹನಗೊಳಿಸುವ ಕ್ರಿಯೆ, ರಂಗಕ್ರಿಯೆಯ ಮೂಲ ಮಾದರಿ ಎನ್ನಬಹುದು. ಸಂವಹನದ ಅಂತಿಮ ಸಾಧ್ಯತೆ ರಂಗಭೂಮಿಯದು. 'ರಂಗಭೂಮಿಯೊಂದೇ ಶಿಕ್ಷಣದ ಅಪಾರ ಸಾಧ್ಯತೆಗಳನ್ನು ಸಾಧ್ಯವಾಗಿಸಬಲ್ಲದು" ಎಂಬ ತಾತ್ವಿಕ ಗ್ರಹಿಕೆಯ ಹಿನ್ನೆಲೆಯಲ್ಲಿ ಪಾಠ - ನಾಟಕ' ದ ಯೋಜನೆ ರೂಪುಗೊಂಡಿದ್ದು. 1990 ರ ಹೊತ್ತಿಗೇನೆ ಶಿರಸಿಯನ್ನು ಕೇಂದ್ರವಾಗಿಟ್ಟು ಕೊಂಡು ಶಿರಸಿ ಮತ್ತು ಸುತ್ತಲಿನ ಹಲವೆಡೆ ಪಾಠ - ನಾಟಕದ ಪ್ರಯೋಗಗಳನ್ನು ನಡೆಸಲಾಗಿತ್ತು. 'ರಂಗಸಂಗ' ದ ಗೆಳೆಯರು ಅಂಥ ಮಹತ್ವದ ಪ್ರಯತ್ನ ಮಾಡಿ ಸೈ ಎನಿಸಿಕೊಂಡಿದ್ದರು. ಅಂದಿನ ಅವರ ಕನಸುಗಳು ನಿಜವಾಗುತ್ತಿರುವ, ಸರಕಾರ 'ರಂಗಮುಖೇನ ಶಿಕ್ಷಣ' ದ ಯೋಜನೆ ಹಾಕಿಕೊಂಡು ಕಾರ್ಯಪ್ರವೃತ್ತವಾಗಿರುವ ಹೊತ್ತಿಗೆ 'ಪಾಠ ನಾಟಕ ರೆಪರ್ಟರಿ' ಹುಟ್ಟಿಕೊಂಡಿದೆ. ಇದು 'ಚಿಂತನ ಉತ್ತರಕನ್ನಡದ ದಶಮಾನೋತ್ಸವದ ಮಹತ್ವದ ಯೋಜನೆ.

ಪಾಠ-ನಾಟಕ ರೆಪರ್ಟರಿ ಎಂಟು ಕಲಾವಿದರ ತಂಡ. ಎಲ್ಲರೂ ಪದವಿ ಪಡೆದ ಕಲಾವಿದರು. ಇವರೆಲ್ಲ ಸೇರಿ ತಿಂಗಳುಗಟ್ಟಲೆ ನಾಟಕಗಳನ್ನು ಕಲಿತು ಪಾಠ-ನಾಟಕಗಳನ್ನು ಸಿದ್ಧಪಡಿಸಿ ಕೊಂಡಿದ್ದಾರೆ. ಈ ರೆಪರ್ಟರಿ ಹಳ್ಳಿ-ಹಳ್ಳಿಗಳಿಗೆ, ಶಾಲೆ ಶಾಲೆಗಳಿಗೆ ಹೋಗಿ ಶಾಲಾ ಬಯಲನ್ನೇ ರಂಗಸ್ಥಳವಾಗಿಸಿಕೊಂಡು ಪ್ರಾಥಮಿಕ ಶಾಲೆಯ ಪಠ್ಯಗಳಿಂದ ಆಯ್ದ ನಾಲ್ಕು ಪಾಠಗಳನ್ನು, ಕೆಲವು ಪದ್ಯಗಳನ್ನು ಮಕ್ಕಳೆದುರು ಅಭಿನಯಿಸುತ್ತದೆ. ಪ್ರದರ್ಶನಾನಂತರ ಶಿಕ್ಷಕರು, ಮಕ್ಕಳೊಂದಿಗೆ ಸಂವಾದಿಸುತ್ತದೆ. ಪಾಠಗಳನ್ನು ರಂಗಭೂಮಿಯ ಮೂಲಕ ಕಲಿಯಬಹುದಾದ ಸಾಧ್ಯತೆಗಳ ಕುರಿತು ಚರ್ಚಿಸುತ್ತದೆ. ತಂಡ ತನ್ನೊಂದಿಗೆ ಪಾಠಕ್ಕೆ ಸಂಬಂಧಿಸಿದ ಕೆಲವು ಸರಳವಾದ ಚಿತ್ರಗಳನ್ನು ಮಕ್ಕಳ ಪುಸ್ತಕಗಳನ್ನು ಒಯ್ದು ಪ್ರದರ್ಶಿಸುವುದರ ಮೂಲಕ ಪಾಠ ಕಲಿಸಬಹುದಾದ ಇತರ ಸಾಧ್ಯತೆಗಳು ಮತ್ತು ಪೂರಕವಾದ ಓದನ್ನೂ ಮಕ್ಕಳೆದುರು ತೆರೆದಿಡುತ್ತದೆ. ಜಿಲ್ಲೆಯಲ್ಲಿ ಮಾತ್ರವಲ್ಲದೆ ಹೊರಜಿಲ್ಲೆಯಲ್ಲಿಯೂ ಪ್ರದರ್ಶನ ಕೊಡಲು ತಂಡ ಸಿದ್ಧವಿದೆ.

ನಾಟಕವಾದ 'ಪಾಠ'ಗಳು ಪ್ರಾಥಮಿಕ ಶಾಲೆಯ ಕನ್ನಡ ಪುಸ್ತಕದಿಂದ ಆಯ್ದುಕೊಂಡವು ಈ ನಾಟಕಗಳ ನಿರ್ದೇಶಕರು ಕಿರಣ ಭಟ್ ಮತ್ತು ಶ್ರೀಪಾದ ಭಟ್.

'ಅಜ್ಜಿಯ ಜಂಭ'ವನ್ನು ಡಾ.ಆರ್.ವಿ. ಭಂಡಾರಿ ನಾಟಕವಾಗಿಸಿದ್ದಾರೆ. ತನ್ನ ಕೋಳಿ ಕೂಗೋದ್ರಿಂದಲೇ ಬೆಳಗಾಗ್ತದೆ ಎಂದು ಜಂಭ ಪಟ್ಟುಕೊಂಡು ಕೊನೆಗೆ ಬೇಸ್ತುಬೀಳುವ ಕತೆಯ ಈ ನಾಟಕ ಚುರುಕಾದ ಚಲನೆಗಳ ಮೂಲಕವೇ ಮಕ್ಕಳಿಗೆ ಇಷ್ಟವಾಗುತ್ತದೆ. ಹುಂಜದ ಆಕರ್ಷಕ ಉಡುಪು, ಮುಖವಾಡಗಳು, ಅಜ್ಜಿಯ ಪ್ರಭಾವಶಾಲಿಯಾದ ಅಭಿನಯಗಳ ಮೂಲಕ ಪಾಠ ಮಕ್ಕಳನ್ನು ತಲುಪುತ್ತದೆ. ಬೆಳಗಿನ ಹಾಡಿನ ಸಾಹಿತ್ಯ ಚೆನ್ನಾಗಿದೆ.

ಕನ್ನಡಿಗರಿಗೆ ಟಿಪ್ಪುವಿನ ಪತ್ರವನ್ನು ನಾಟಕಕ್ಕೆ ತಂದವರು ಹಿರಿಯ ನಾಟಕಕಾರ ಹೂಲಿ ಶೇಖರ್, ಟಿಪ್ಪುವಿನ ನೆರಳಿನ ಪಾತ್ರವನ್ನು ಸೃಷ್ಟಿಸುವುದರ ಮೂಲಕ ಹೊಸ ಆಯಾಮ ತರಲು ಶೇಖರ್ ಪ್ರಯತ್ನಿಸುತ್ತಾರೆ. ಅವರ ಉದ್ದೇಶ ರಂಗಪ್ರಯೋಗದಲ್ಲಿ ಈಡೇರಿದೆ. ಬೇಡರ ವೇಷದ ಗತ್ತಿನ ಕುಣಿತ. ತೆರೆ ಕುಣಿತಗಳಂತಹ



ಉಪಾಯ ಬಲ್ಲವನಿಗೆ ಅಪಾಯವಿಲ್ಲ - ನಾಟಕ

ಪ್ರಕಾರಗಳನ್ನು ಪ್ರಯೋಗಿಸಿಕೊಂಡು ಪ್ರಭಾವಶಾಲಿಯಾಗಿ ಪಾಠ ಹೇಳುವ ಪ್ರಯತ್ನ ಸ್ತುತ್ಯಾರ್ಹ. ಆದರೆ ಈ ನಾಟಕ ಆರನೆಯ ವರ್ಗದ ಮಕ್ಕಳಿಗೆ ಹೆಚ್ಚು 'ಭಾರ' ಎನಿಸುತ್ತದೆ. ನಾಟಕವನ್ನು ಸರಳಗೊಳಿಸಬೇಕಿದೆ.

'ಕಪ್ಪು ಕಾಗೆಯ ಹಾಡು'ವಿನ ಮೂಲಕ ಪ್ರಸಿದ್ಧರಾದ ಮೂರ್ತಿ ದೇರಾಜೆ 'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಪಾಠವನ್ನು ನಾಟಕವಾಗಿಸಿದ್ದಾರೆ. ಮಂಗ ಮೊಸಳೆಗಳ ಕಥೆಯಿದು. ಸಾಕಷ್ಟು ಮಹಾ ಮುಖವಾಡ, ಹಾರಾಟ, ಓಡಾಟಗಳ ಮೂಲಕ, ಶಬ್ದಗಳ ಸಂಗೀತದ ಮೂಲಕ, ಮಿನಿಯೇಚರ್ ಮರದ ಸೆಟ್‌ಗಳನ್ನುಪಯೋಗಿಸಿಕೊಂಡು ಪಾಠ ಹೇಳಲು ರೆಪರ್ಟರಿ ಪ್ರಯತ್ನಿಸುತ್ತದೆ. ಮಕ್ಕಳಿಗೆ ಚಕಚಕನೆ ಬದಲಾಗುವ ಪ್ರಾಣಿಗಳ ಹಾವಭಾವಗಳು ಇಷ್ಟವಾಗುತ್ತವೆ ಕೂಡ. ಮಂಗ ಉಪಾಯ ಮಾಡಿ ಅಪಾಯದಿಂದ ಪಾರಾಗುವ ಕ್ರಿಯೆ ... ಸ್ಪಷ್ಟವಾಗಬೇಕಿದೆ.

'ತಿರುಕನ ಕನಸು' ಪದ್ಯವನ್ನು ಮ... ರಂಗಭೂಮಿಯಲ್ಲಿ ಕ್ರಿಯಾಶೀಲರಾಗಿ... ಐ.ಕೆ.ಬೊಳುವಾರ್ ನಾಟಕಕ್ಕೆ ತಂದಿದ... ನಾಟಕ ಯಕ್ಷಗಾನದ ತಂತ್ರಗಳ ಹಿನ್ನೆಲೆ... ಉಪಯೋಗಿಸಿಕೊಂಡು (ಮುಖ್ಯವಾಗಿ ಚ... ಹಾಡು ಇತ್ಯಾದಿ) ತಿರುಕನ ಕನ... ಬಿಚ್ಚಿಡುತ್ತದೆ. ಜತೆಗೆ ಸಮಕಾಲೀ... ಬದುಕನ್ನು ಕೂಡ ಚರ್ಚಿಸುತ್ತದೆ.

ಕೊನೆಯಲ್ಲಿ ಕಲಾವಿದ... ಅಭಿನಯಿಸಿದ 'ಬಾವಿಯಲ್ಲಿ ... ಚಂದ್ರ' ಹಾಡು ತ... ಆಕರ್ಷಕವಾಗಿತ್ತು. ಹಾಡು... ಅಭಿನಯದಲ್ಲಿ ಇದೊಂದು ಮಹಾ... ಹೆಜ್ಜೆ. 'ಚಿಂತನ'ದ ಹುಡುಗರು ದ... ಉದ್ದೇಶ ಮತ್ತು ಆಸೆಯ... ಇಟ್ಟುಕೊಂಡು ತಿರುಗಾ... ಹೊರಟಿದ್ದಾರೆ. ಮಕ್ಕಳಿಗಾಗಿ, ಶಿಕ್ಷಣ... ಏನಾದರೂ ಮಾಡಬೇಕೆಂಬ ... ತುಡಿತ ಪ್ರಶಂಸನೀಯವಾದುದು. ... ಇಲಾಖೆ, ಶಿಕ್ಷಕರು, ನಾಗರೀಕರು ಇವರೊ... ನಿಲ್ಲಬೇಕಾದುದು ಅಷ್ಟೇ ಮಹತ್ವದ್ದು.

ತಂಡದಲ್ಲಿ: ನಟರಾಗಿ- ಸಂತೋಷ ನಾ... ಗೋಪಾಲ ಹಳ್ಳೇರ್, ಸುಬ್ರಹ್ಮಣ್ಯ ನಾ... ರವಿಕುಮಾರ್.ಆರ್.ಕೆ.ಶ್ರೀನಿವಾಸ್ ನಾ... ಪ್ರಶಾಂತ್ ಭಂಡಾರಿ, ಪದ್ಮಾ ಗ... ಸಂತೋಷ್ ಶೇಟ್, ಜನಾರ್ದನ್, ಸದಾ... ನಾಯ್ಕ,

ನಿರ್ವಾಹಕರು: ಆರ್.ಕೆ.ಶಿವಕುಮಾ...

ಹಾಡುಗರು: ಸತ್ಯನಾರಾಯಣ ನಾ... ಶ್ರೀಪಾದ ಭಟ್

ಸಂಚಾಲಕರು: ವಿಠ್ಠಲ ಭಂಡಾರಿ, ಮಾಸ್ತಿ ... ಅನಂತ ನಾಯ್ಕ

ಕಲೆ: ರವಿ ಹುದ್ರಾರ್, ದಾಮೋದರ ನಾ... ಚಂದ್ರ ಉಡುಪಿ, ಅಗ್ನಿಹೋತ್ರಿ

- ಕಿರಣ್

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್.
ಸಂಪಾದಕರು: ಎಸ್.ವೈ.ಗುರುಶಾಂತ್. ಸಂಪಾದಕೀಯ ಕಛೇರಿ: ನಂ.13, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ: 2226461
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH